ವನಸುಮ ವಾಗ್ಗೇಯಕಾರ್ತಿ

ಶೈಲಜಾ ರಚನೆಗಳು



ಸಂಪಾದಕಿ

ಗೀತಾ ಬಾಲಸುಬ್ರಹ್ಮಣ್ಯ



ದಾರ್ಶನಿಕ ಶ್ರೀ ಯು. ಜಿ. ಕೃಷ್ಣಮೂರ್ತಿ ಅವರೊಂದಿಗೆ ಶೈಲಜಾ



ಅಕ್ಕ ಶೈಲಜಾರೊಂದಿಗೆ ಗೀತಾ ಬಾಲಸುಬ್ರಹ್ಮಣ್ಯ

ವನಸುಮ ವಾಗ್ಗೇಯಕಾರ್ತಿ

ಶೈಲಜಾ ರಚನೆಗಳು

ಸಂಪಾದಕಿ

ಗೀತಾ ಬಾಲಸುಬ್ರಹ್ಮಣ್ಯ, M.A. Music

ಪ್ರಕಾಶಕರು

ವಾಗ್ದೇವಿ ಕಲಾನಿಕೇತನ

ನಂ. 142, "ವಾಗ್ದೇವಿ", 2ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ
ಚನ್ನಮ್ಮನಕೆರೆ ಅಚ್ಚುಕಟ್ಟು, ಬೆಂಗಳೂರು 560 085.
ದೂರವಾಣಿ: 2666 1705, 2669 0248

ವನಸುಮ ವಾಗ್ಗೇಯಕಾರ್ತಿ **"ಶೈಲಜಾ ರಚನೆಗಳು"**
ಸಂಪಾದಕಿ : ಗೀತಾ ಬಾಲಸುಬ್ರಹ್ಮಣ್ಯ, M.A. Music
ಪ್ರಕಾಶಕರು : ವಾಗ್ದೇವಿ ಕಲಾನಿಕೇತನ
ನಂ. 142, "ವಾಗ್ದೇವಿ", 2ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ
ಚಿನ್ನಮ್ಮನಕೆರೆ ಅಚ್ಚುಕಟ್ಟು, ಬೆಂಗಳೂರು 560 085.
ದೂರವಾಣಿ: 2666 1705, 2669 0248, 98868 37912

ಪುಟಗಳು : xxxvi + 188


ಮೊದಲ ಮುದ್ರಣ: ಡಿಸೆಂಬರ್ 2012
ಪ್ರತಿಗಳು : 1,000

ಮುಖಪುಟ ವಿನ್ಯಾಸ: ಶ್ರೀ ಕೆ. ಆರ್. ಶ್ರೀಕಂಠಮೂರ್ತಿ

ಬೆಲೆ : ರೂ. 120/-

ಮುದ್ರಕರು
ಬಿ. ಎನ್. ನಟರಾಜ್
ಶ್ರೀ ನಿತ್ಯಾನಂದ ಪ್ರಿಂಟರ್ಸ್
ನಂ. 46, 4ನೇ ಅಡ್ಡರಸ್ತೆ
ಅಶೋಕನಗರ, ಬೆಂಗಳೂರು-50.
ದೂರವಾಣಿ: 2242 6027

ಅರ್ಪಣೆ



ವಿದುಷಿ ಶ್ರೀಮತಿ ಶೈಲಜಾ ಶ್ರೀಕಂಠಯ್ಯ

ನೀ ಬರೆದ ಒಂದೊಂದು ಗೀತೆಯೂ
ಅಪರೂಪದ ಪರಿಮಳಯುಕ್ತ ಸುಂದರ ಪುಷ್ಪದಂತೆ
ಆ ಎಲ್ಲಾ ಗೀತೆಗಳನ್ನು ಪೋಣಿಸಿ ಸಿದ್ಧಪಡಿಸಿದ
ಈ ಗೀತಮಾಲಿಕೆಯು ನಿನಗೇ ಅರ್ಪಣೆ

ವಾಗ್ದೇವಿ ಕಲಾ ನಿಕೇತನ

ನಂ, 142, ವಾಗ್ದೇವಿ, 2ನೇ ಮುಖ್ಯ ರಸ್ತೆ, ಸಿ.ಕೆ. ಅಚ್ಚುಕಟ್ಟು, ಬೆಂ–85

"ವನಸುಮ ವಾಗ್ಗೇಯಕಾರ್ತಿ ಶೈಲಜಾ ರಚನೆಗಳು"

(ಸಂಪಾದಕಿ–ಗೀತಾ ಬಾಲಸುಬ್ರಹ್ಮಣ್ಯ)

ಗ್ರಂಥ ಬಿಡುಗಡೆ ಸಮಾರಂಭ

ಅಧ್ಯಕ್ಷತೆ

ಗಾನಕಲಾಭೂಷಣ , ಸಂಗೀತ ಕಲಾನಿಧಿ

ವಿದ್ವಾನ್ : ಶ್ರೀ ಆರ್.ಕೆ. ಪದ್ಮನಾಭ

ಗ್ರಂಥ ಲೋಕಾರ್ಪಣೆ

ಡಾ॥ ಅನಂತಪದ್ಮನಾಭರಾವ್

ನಿವೃತ್ತ ಪ್ರಾಂಶುಪಾಲರು, ವಿಜಯಾ ಜ್ಯೂನಿಯರ್ ಕಾಲೇಜು

ಮುಖ್ಯ ಅತಿಥಿ

ಪ್ರೊ. ಜಿ.ಅಶ್ವತ್ಥ ನಾರಾಯಣ

(ನಿವೃತ್ತ ಕನ್ನಡ ಪ್ರಾಧ್ಯಾಪಕರು)

ಉಪಸ್ಥಿತಿ

ಮಾತೃಶ್ರೀ ವಾಗೀಶ್ವರಿ-ಶಾಸ್ತ್ರಿ (ಹಿರಿಯ ಲೇಖಕಿ)

ಮತ್ತು

ಶ್ರೀ ಟಿ.ಸಿ. ಶ್ರೀಕಂಠಯ್ಯ

ದಿನಾಂಕ : 10-01-2013

ಸ್ಥಳ : ಬಿ.ಎಂ. ಶ್ರೀ. ಕಲಾಭವನ

3ನೇ ಮುಖ್ಯರಸ್ತೆ, ನರಸಿಂಹರಾಜಾ ಕಾಲೋನಿ, ಬೆಂಗಳೂರು- 19

ಸಮಯ : ಸಂಜೆ 5.30ಕ್ಕೆ

ಸರ್ವರಿಗೂ ಆದರದ ಸ್ವಾಗತ

ಪರಿವಿಡಿ

ಮುನ್ನುಡಿ

ವನಸುಮ ವಾಗ್ಗೇಯಕಾರ್ತಿ ಶೈಲಜಾ ನೆನಪು

ಆಧುನಿಕ ಜೀವನದಲ್ಲಿ ಸ್ವಾತಂತ್ರ್ಯಾನಂತರ ಕೈಗಾರಿಕಾ ಉದ್ಯಮಿಗಳ ಪ್ರಭಾವ ಹೆಚ್ಚಿದಂತೆಲ್ಲಾ ನಗರ ಜೀವನ ಯಾಂತ್ರಿಕವಾಗುತ್ತಾ ಬಂದು, ಕಲೆ ಸಾಹಿತ್ಯ ಸಂಸ್ಕೃತಿಯ ಪರಂಪರೆಯನ್ನು ಉಳಿಸಿಕೊಂಡು ಬರುತ್ತಿದ್ದ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದವು. ಅದಕ್ಕಿಂತ ಹೆಚ್ಚಾಗಿ ಕುಟುಂಬದಲ್ಲಿ ಹಿರಿಯರು ಗಳಿಸಿದ್ದ ಸಾಹಿತ್ಯ ಸಂಗೀತ ಪರಂಪರೆಗೆ ಉತ್ತರಾಧಿಕಾರಿಗಳಾಗದೆ ಹಿರಿಯರ ಆಸ್ತಿ, ಹಣ, ವಸ್ತುಗಳಿಗಷ್ಟೇ ತಾವು ಉತ್ತರಾಧಿಕಾರಿಗಳೆಂದು ತಿಳಿದು ಅವುಗಳಿಗಾಗಿ ಹೋರಾಟ ನಡೆಸಲುಸಿದ್ಧವಾಗಿ ಕೋರ್ಟು ಕಛೇರಿಗಳ ಬಾಗಿಲು ತಾಕಿ ಮನೆತನದ ಮಾನಮರ್ಯಾದೆ ಹರಾಜು ಹಾಕಿರುವ ನಿದರ್ಶನಗಳುಂಟು.

ಇಂಥ ಕಾಲದಲ್ಲಿ ಕುಟುಂಬದಲ್ಲಿ ಹಿರಿಯರ ವಿದ್ಯೆಯನ್ನು ಗಳಿಸಿಕೊಂಡು ಊರ್ಜಿತಗೊಳಿಸುವ ಮಕ್ಕಳು ಒಬ್ಬರಲ್ಲ ಹಲವಾರು ಮಂದಿ ಇರುವ ಭಾಗ್ಯ ಅನೇಕ ಕುಟುಂಬಗಳಲ್ಲಿ ಕಂಡು ಬರುವುದಿಲ್ಲ. ಎಲ್ಲೋ ಕೆಲವು ಕುಟುಂಬಗಳಲ್ಲಿ ಪುಣ್ಯಶಾಲಿ ಮಕ್ಕಳು ಹುಟ್ಟಿ ಕುಟುಂಬದ ಹಿರಿಯರ ಕಲೆ ಸಾಹಿತ್ಯವನ್ನು ಉಳಿಸಿ ಕೊಂಡು ಬಂದಿರುವ ಮಕ್ಕಳಿಂದ ಕೂಡಿದ ಕುಟುಂಬಗಳಲ್ಲಿ ವಾಗೀಶ್ವರೀಶಾಸ್ತ್ರಿ-ರಾಮಕೃಷ್ಣ ಶಾಸ್ತ್ರಿಗಳ ಕುಟುಂಬವೂ ಒಂದಾಗಿದೆ. ತಂದೆ ಸಂಗೀತ ವಿದ್ವಾಂಸರು. ತಾಯಿ ಸಂಪ್ರದಾಯ ಹಾಡುಗಳ ಸಾಮ್ರಾಜ್ಞಿ. ಅವರಿಬ್ಬರ ಮನೆತನದ ಹಿರಿಯರು ಸಾಹಿತ್ಯ ಸಂಗೀತ ಕಲೆಗಳಲ್ಲಿ ನಿಷ್ಣಾತರಾಗಿ ಸಾರ್ವಜನಿಕ ಮನ್ನಣೆಗಳಿಸಿದವರು. ಇಂಥವರ ಕುಟುಂಬದ ಮಕ್ಕಳಲ್ಲಿ ಎಲ್ಲ ಹೆಣ್ಣು ಮಕ್ಕಳೂ ಸಂಗೀತಾರಾಧಕರೇ ಆಗಿ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡುವಷ್ಟು ಪ್ರಾವೀಣ್ಯಗಳಿಸಿದವರೇ ಆಗಿದ್ದಾರೆ. ಈ ಮಕ್ಕಳಲ್ಲಿ ಹಾಡುಗಾರಿಕೆ ಕೀರ್ತನ ರಚನೆ ಮಾಡುವುದರಲ್ಲಿ ದೈವಾನುಗ್ರಹ ಪಡೆದ ಪ್ರತಿಭಾವಂತೆ ಶೈಲಜಾ, ವಾಗೀಶ್ವರೀ ಕುಟುಂಬದ ಹಿರಿಯ ಮಗಳು ವನಸುಮದಂಥ ವಾಗ್ಗೇಯಕಾರ್ತಿ.

ಶೈಲಜಾ ಅವರು ಅಂಚೇ ಇಲಾಖೆಯಲ್ಲಿ ಉದ್ಯೋಗಿ ಆಗಿದ್ದರು ನೆಪಮಾತ್ರಕ್ಕೆ. ಸದಾ ಸಂಗೀತ ಲೋಕದಲ್ಲೇ ವಿಹರಿಸುತ್ತಿದ್ದರು. ಕೀರ್ತನ ರಚನೆಯಲ್ಲಿ ನಿರತರಾಗಿರುತ್ತಿದ್ದರು. ನಾನು ಭೇಟಿ ಆದಾಗಲೆಲ್ಲ ನೋಡಿ ಮೇಷ್ಟೇ ದೇವೀನ ಕುರಿತು ರಚಿಸಿದ ಕೀರ್ತನೆ ಇದು ಎಂದು ಹಾಡುತ್ತಿದ್ದರು. ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಶನಿದೇವರ ಭಾವಚಿತ್ರ ಹಿಡಿದ ಭಕ್ತನನ್ನು ಕಂಡಾಗ ರಚಿಸಿದ ಕೀರ್ತನೆ. (ಶೀ. 42). ಮೃತರಾದ ಬಂಧುವೊಬ್ಬರನ್ನು ಕಾಣಲು ಹೋದ

ಸಂದರ್ಭದಲ್ಲಿ ರಚಿಸಿದ ತತ್ತ್ವಪದ (ಹಾಡು 48) ಎಂದು ಹೇಳಿ ಹಾಡುತ್ತಿದ್ದ ಅವರೇ ರಚಿಸಿದ ಕೀರ್ತನೆಗಳಲ್ಲಿ ಕೆಲವನ್ನು ಕೇಳಿದವನು ನಾನು.

ಶೈಲಜಾ ಅವರ ಕೀರ್ತನೆಗಳನ್ನು ಸಮೀಕ್ಷಿಸಿದಾಗ ಕೆಲವು ಸಂಗತಿಗಳು ಮನಸೆಳೆಯುತ್ತವೆ. ಭಾವಾವೇಶ ಉಂಟಾದಾಗ ದೇವದರ್ಶನವಾದಾಗ, ಭಕ್ತಿ ಉಕ್ಕಿ ಹಾಡಿ ಧನ್ಯರಾಗಿದ್ದಾರೆ. ಅಂಥ ಅನುಭವವನ್ನು ಹಲವರಲ್ಲಿ ಇಂದೂ ನಾವು ಕಾಣಬಹುದು. ಗುಡ್ಡದಹಳ್ಳಿ ಹನುಮನನ್ನು ಕಂಡಾಗ, ದಸರೀಘಟ್ಟದ ಚೌಡೇಶ್ವರೀದೇವಿ ದರ್ಶನಮಾಡಿದಾಗ, ಇನ್ನೂ ಅನೇಕ ದೇವತಾದರ್ಶನ ಕೀರ್ತನೆಗಳನ್ನು ರಚಿಸಿದ್ದಾರೆ. ಅಂಥ ಸಂದರ್ಭಗಳಲ್ಲೆಲ್ಲಾ ತನ್ಮಯರಾಗಿ ಕಲ್ಲಲ್ಲಿ ದೇವರನ್ನು ಕಾಣಲು ಯತ್ನಿಸುತ್ತಿದ್ದರು. ಉಳಿದವರ ಕಣ್ಣಿಗೆ ದೇವರು ಕಲ್ಲಾಗಿ ಕಾಣುತ್ತಿದ್ದರೆ ಅವರಿಗೆ ಕಲ್ಲು (ಪ್ರತಿಮೆ) ದೇವರಾಗಿ ಕಾಣುವ ಹಂಬಲವಿತ್ತು.

ಕೀರ್ತನೆಯೊಂದರಲ್ಲಿ "ಶೈಲಜಾ ಎಂತೆಂಬೋ ಹೆಸರು ಪೊತ್ತಿಹೆ ನಾನು ಶೈಲರೂಪವ ಬಿಟ್ಟು ಕರುಣಿಸೆನ್ನ" ಎಂದು ಪ್ರಾರ್ಥಿಸುತ್ತಾರೆ. "ಕಲ್ಲಾಗಿ ನಿಂದಿಹೆಯಾ ಕಲ್ಲೇಶ, ಕಲ್ಲು ಕಲ್ಲೆಂದೇ ಜನರೆಲ್ಲ ಹೇಳಲು, ಕಲ್ಲಿಂದ ಮೆಲ್ಲನೇ ಬಾರೋ ಮಲ್ಲೇಶಾ" ಎಂಬಲ್ಲಿ ಕಲ್ಲಲ್ಲಿ ಈಶ ಅಡಗಿದ್ದಾನೆಂದೇ ನಂಬಿ ಕರೆದವರು ಶೈಲಜಾ ಅವರು. ಕೇವಲ ದೇವತಾ ಮೂರ್ತಿಗಳಲ್ಲಿ ಅಷ್ಟೇ ದೇವರನ್ನು ಕಾಣಲು ಹಂಬಲಿಸುತ್ತಿರಲಿಲ್ಲ. ನಿತ್ಯ ಜೀವನದ ಕಷ್ಟ ಸುಖಗಳೆಲ್ಲ ಅವನ ಸಂಕಲ್ಪ ಅವನಿಚ್ಛೆ ಎಂದು ತಿಳಿದಿದ್ದರು. ಅಡಿಗೆ ಮಾಡುವಾಗ ಒಮ್ಮೆ ಕೈ ಸುಟ್ಟುಕೊಂಡಾಗ (23-11-1980) ಆ ನೋವಿನಲ್ಲಿ ಇತರರು ನರಳುವ ಹಾಗೆ ಅವರು ನರಳಿದರು ನಿಜ. ಆದರೆ ಉಳಿದವರಂತೆ ಅಯ್ಯೋ ನೋವು ತಡೀಲಾರೆ, ನನ್ನ ಗ್ರಹಚಾರ, ಇವರು ಊಟಕ್ಕೆ ಅವಸರ ಮಾಡದಿದ್ದರೆ ಹೀಗಾಗುತ್ತಿರಲಿಲ್ಲ ಎಂದು ದೇಹದ ನೋವಿನಲ್ಲಿಯೇ ಇರದೇ ಆ ಪಾಡನ್ನೇ ಹಾಡನ್ನಾಗಿ ಮಾಡಿ ಗೋವಿಂದಸ್ಮರಣೆ ಮಾಡಿದ್ದು ಮಹತ್ವದ ಸಂಗತಿ ಆಗಿದೆ.

ಈಗಲೀಗ ನಿನಗಾನಂದವಾಯಿತೇ ಗೋವಿಂದ
ಭೋಗಿಶಯನ ಜಗದೇಶ ಎನ್ನನು ಕಂಡು

ಜಗದೊಳು ನಿನ್ನಯ ಸಾಸಿರನಾಮವ
ಪೊಗಳುವ ಭಕುತರ ಪೊರೆಯುವ ಪರಿಯಿದು!

ನಿನ್ನಯ ಪೂಜಿಪಯೆನ್ನಯ ಕೈಗಳಾ
ಹೊನ್ನಬಳೆ ಕಿಣಿ ಕಿಣಿ ಕೇಳುವುದನು ಬಿಟ್ಟು
ಚೆನ್ನಾಗಿ ಸುಟ್ಟು ಆ ಉರಿಯಲಿ ಎನ್ನಯ
ಮುನ್ನಿನ ಪಾಪವ ತೊಳೆದೆ ಹರಿಯೆ ॥

ಎಂದು ಭಗವನ್ನಾಮಸ್ಮರಣೆಯಲ್ಲಿ ಸಾಂತ್ವನತಂದುಕೊಂಡದ್ದು ಅಮೋಘವಾಗಿದೆ.

ಪ್ರತಿಯೊಂದು ನಿತ್ಯಜೀವನದ ಸಾಮಾನ್ಯ ಲೌಕಿಕ ಸಂಗತಿಗಳನ್ನೆಲ್ಲಾ ಭಗವಂತನ ಲೀಲಾವಿಲಾಸಗಳೆಂದು ತಿಳಿದು ಭಾವಿಸುವುದು ಗಾನಾರಾಧನೆಯಲ್ಲಿ ಲೀನವಾಗುವುದು ನಿಜವಾದ ದೈವ ಭಕ್ತರಿಗೆ ಮಾತ್ರ ಶಕ್ಯ. ಶೈಲಜಾ ನಿಜವಾದ ದೈವಭಕ್ತಿಯ ಸಾತ್ವಿಕ ಜೀವಿ ಆಗಿದ್ದರು. ಅವರ ಸಮಯಸ್ಫೂರ್ತಿ, ದೈವಭಕ್ತಿ, ಗಾನವೈಖರಿ ಸಾಹಿತ್ಯಾಭಿಮಾನಗಳನ್ನು ಕಂಡಾಗ ನಿಜಕ್ಕೂ ದೈವಾನುಗ್ರಹದ ಗಾಯನ-ಸಾಹಿತ್ಯ ಈಕೆಗೆ ಒಲಿದುಬಂದ ವರಗಳು ಎನ್ನಿಸಿತ್ತು. ಅರಳುತ್ತಿರುವ ಹೂಗಳ ಮರ, ಬಿರುಗಾಳಿ ಬೀಸಿ ಇದ್ದಕ್ಕಿದ್ದಂತೆ ಕಡಿದ ಬಾಳೆಯಂತೆ ಉರುಳಿದ ಹಾಗೆ ಆಕಸ್ಮಿಕ ಅಪಘಾತದಲ್ಲಿ ನಿಧನರಾದರು. ಕನ್ನಡದಲ್ಲಿ ಸೊಗಸಾದ ಕೀರ್ತನ ಕುಸುಮಗಳನ್ನು ಗಾನ ದೇವಿಗೆ ಅರ್ಪಿಸುತ್ತಾ ಭಕ್ತೆಯೊಬ್ಬಳು ಮರೆಯಾದಳು.

ಶೈಲಜಾ ಅವರು ತಮ್ಮ ಹೆಸರಿನ ಅಂಕಿತದಲ್ಲೇ ಕೀರ್ತನೆಗಳನ್ನು ಹೆಚ್ಚಿಸಿದ್ದಾರೆ. ಗಣಪತಿ, ಕೃಷ್ಣ, ನರಸಿಂಹ, ರಾಮ, ರಾಘವೇಂದ್ರಸ್ವಾಮಿ, ಆಂಜನೇಯ, ಮಹಾಲಕ್ಷ್ಮಿ, ಚೌಡೇಶ್ವರಿ, ಕನ್ನಡಾಂಬೆ, ಭಾರತಾಂಬೆ, ಶಾರದಾಂಬೆ, ಶನಿದೇವರು, ಸ್ವಾಮಿ ಅಯ್ಯಪ್ಪ, ಗೌರಿ ಮೊದಲಾದ ದೇವತಾಸ್ತುತಿಗಳನ್ನು ರಚಿಸಿದ್ದಾರೆ. ಸುಪ್ರಭಾತಗೀತೆ, ದೀಪೋತ್ಸವ, ನೀರಾಜನ, ಮಂಗಳಾರತಿ ಮೊದಲಾದ ಪೂಜಾಕೀರ್ತನೆಗಳು, ಬಡತನ, ಚಿಂತೆ, ತರಕಾರಿ ಏಕಾದಶಿ ಮೊದಲಾದ ಸಾಮಾಜಿಕ ಕೀರ್ತನೆಗಳು ಈ ಸಂಗ್ರಹದಲ್ಲಿದೆ. ವಿಶೇಷವೆಂದರೆ, ಸಂಸ್ಕೃತ, ಕನ್ನಡ ಭಾಷೆಗಳ ಜೊತೆಗೆ ತೆಲುಗಿನಲ್ಲಿ ಕೀರ್ತನೆಗಳನ್ನು ರಚಿಸಿರುವುದು ಇನ್ನೊಂದು ವಿಶೇಷ. ಮನೆಮಾತು ತೆಲುಗು ಆದಕಾರಣ ಆ ಭಾಷೆಯಲ್ಲೂ ಕೀರ್ತನೆಗಳನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಮಾತೃಭಾಷೆ ಕೇವಲ ಕುಟುಂಬದ ವ್ಯವಹಾರಕ್ಕೆ ಬಂಧುಗಳ ನಡುವೆ ವಿಚಾರವಿನಿಮಯಕ್ಕೆ ಸೀಮಿತವಾಗಿರುತ್ತದೆ. ಅದರಲ್ಲಿ ಪ್ರಾವೀಣ್ಯವಿರುವುದು ಅಪರೂಪ. ಆದರೆ ಶೈಲಜಾ ಅವರು ಮಾತೃಭಾಷೆಯಲ್ಲಿ ಸಾಕಷ್ಟು ಪರಿಣಿತಿಪಡೆದಿರುವುದು ಕೀರ್ತನೆಗಳನ್ನು ರಚಿಸಿರುವುದು ಗಮನಾರ್ಹ ಸಂಗತಿ ಆಗಿದೆ.

ತಾಯಿಯ ಸಂಪ್ರದಾಯದ ಹಾಡುಗಳ ಪ್ರಭಾವದಿಂದ ಜನಪದ ದಾಟಿಯ ಕೀರ್ತನೆಗಳನ್ನು ರಚಿಸಿದ್ದಾರೆ. ಆದಿಕಾಲದಲ್ಲಿ ಹರಿದಾಸ ಸಾಹಿತ್ಯ ರಚನೆಯಲ್ಲಿ ನಿರತರಾದವರಲ್ಲಿ ಕೀರ್ತನೆಗಳನ್ನು ರಚಿಸಿರುವವರೇ ಅಧಿಕ. ಎಲ್ಲ ಆಧುನಿಕ ಕೀರ್ತನಕಾರರು ಉಗಾಭೋಗಗಳನ್ನು ರಚಿಸಿಲ್ಲ. ಶೈಲಜಾ ಅವರು ಉಗಾಭೋಗಗಳನ್ನು ರಚಿಸಿರುವುದು ವಿಶೇಷ ಸಂಗತಿ ಆಗಿದೆ ಎಂದರೆ ತಪ್ಪಲ್ಲ.

ಅವರ ಕೀರ್ತನೆಗಳಲ್ಲಿ ಕೆಲವು ವಿಶೇಷ ರಚನೆಗಳನ್ನು ನಾವು ಕಾಣುತ್ತೇವೆ. ಉದಾ: **'ವಿಘ್ನರಾಜನಿಗೊಂದು ಕುಸುಮನಾನರ್ಪಿಸುವೆ'** ಕೀರ್ತನೆಯಲ್ಲಿ ಒಂದರಿಂದ ಒಂಬತ್ತು ಸಂಖ್ಯಾಪದಗಳನ್ನು ಬಳಸಿ ನವಸಂಖ್ಯಾಮಾಲಿಕಾ ಗೀತ ರಚಿಸಿದ್ದಾರೆ.

ಉದಾ : **ನಾಲ್ಕು ವೇದಗಳ ಸಾನರಿಯೆ**
ನಾಲ್ಕು ಭೇದೋಪಾಯವರಿಯೆ
ಹಾಲ್ಗಡಲಾತನ ಕಾಣಲೆನೆಗೆ ನಿನ್ನ
ನಾಲ್ಕಕ್ಷರವನಿತ್ತು ಪೊರೆ ಎನುವೆ

ಬಾರೋ ಗೋಪಾಲಕೃಷ್ಣ, ತಾನೋ ತಂದಾನೋ ತಾನೋ ಎಂಬ ಕೋಲಾಟದ ಹಾಡು, ಡಿಂಗ್ ಡಿಂಗ್ ಡಿಂಗ, ಬಾರೋ ಬೇಗ... ಹಾಡು, ತಕಿಟ ತಕಿಟ ಹೆಜ್ಜೆ ಕುಣಿಸಿ ಎಂಬ ನರ್ತನ ಗೀತೆ ಮುಂತಾದವು ವೈವಿಧ್ಯಮಯ ಧಾಟಿ ಹಾಡುಗಳಿಗೆ ಸಾಕ್ಷಿಯಾಗಿವೆ.

ಬಾಲ್ಯದಲ್ಲೇ ಶೃಂಗೇರಿ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರಳಾದ ಶೈಲಜಾ ಅವರಿಗೆ ಸಾಕಷ್ಟು ಸಾರ್ವಜನಿಕ ಮನ್ನಣೆ ಸಿಗಲಿಲ್ಲ. ಕರ್ನಾಟಕದ ಆಕಾಶವಾಣಿ ಯಲ್ಲಿ ಅವಕಾಶಸಿಗದೆ ಚೆನ್ನೈನಲ್ಲಿ ಅವಕಾಶಪಡೆದು ಹಾಡಿದರು, ಜನಪ್ರಿಯ ರಾದರು. ದಸರಿಘಟ್ಟ 19ನೇ ಶತಮಾನದ ಕೀರ್ತನಕಾರರಾದ ತುಳಸೀರಾಮ ದಾಸರ ನೆಲೆವೀಡು. ಅಲ್ಲಿಯ ಚೌಡೇಶ್ವರಿಯ ಪರಮಭಕ್ತಳಾದ ಶೈಲಜಾ ಅವರು, ಅನೇಕ ಭಕ್ತಿಗೀತೆಗಳನ್ನು ದೇವಿಯನ್ನು ಕುರಿತು ರಚಿಸಿ, ಭಾವಪೂರ್ಣ ವಾಗಿ ಹಾಡುತ್ತಿದ್ದರು. ಪತಿ ಶ್ರೀಕಂಠಯ್ಯ, ಇಬ್ಬರು ಹೆಣ್ಣುಮಕ್ಕಳೊಡನೆ ಗೃಹಿಣಿ ಆಗಿದ್ದುಕೊಂಡು ಎಲ್ಲರಂತೆ ಸಾಮಾನ್ಯ ಗೃಹಿಣಿ ಆಗಿರದೆ ಕಲಾರಾಧಕಿ ಆಗಿ, ಗಾನಕೋಗಿಲೆಯಾಗಿ ವಾಗ್ಗೇಯಕಾರ್ತಿ ಆಗಿ ನಾಡಿಗೆ ನುಡಿಗೆ ಸೇವೆ ಸಲ್ಲಿಸಿದ ಶೈಲಜಾಳನ್ನು ಚಿಕ್ಕ ವಯಸ್ಸಿನಲ್ಲಿ ವಿಧಿ ಕರೆದೊಯ್ಯದೆ ಇದ್ದಿದ್ದರೆ ನಮ್ಮ ನಾಡಿನ ಪ್ರತಿಭಾವಂತ ಗಾಯಕಿ ಕೀರ್ತನಕಾರ್ತಿ ಆಗಿರುತ್ತಿದ್ದರು ಎಂಬುದರಲ್ಲಿ ಸಂಶಯ ವಿಲ್ಲ. ಶೈಲಜಾ ಕುಟುಂಬದವರು ಆಕೆಯ ಕೀರ್ತನೆಗಳಲ್ಲಿ ಲಭ್ಯವಿದ್ದುದನ್ನು ಅಚ್ಚುಮಾಡಿಸಿ ನಾಡಿನ ಜನತೆಗೆ ನೀಡುತ್ತಿರುವುದು ಶ್ಲಾಘನೀಯಕಾರ್ಯವಾಗಿದೆ.

ಶೈಲಜಾ ತಂಗಿ ಗೀತಾ ಬಾಲಸುಬ್ರಹ್ಮಣ್ಯಂ ಬಾಲ್ಯದಿಂದಲೂ ಸಂಗೀತದಲ್ಲಿ ಆಸಕ್ತೆ ಆದವಳು. ಅವಳು ಕಾಲೇಜಿನಲ್ಲಿ ನನ್ನ ವಿದ್ಯಾರ್ಥಿನಿ ಆಗಿದ್ದಾಗಲೇ ಎಲ್ಲಾ ಕಾಲೇಜು ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ತಪ್ಪದೇ ಬಹುಮಾನ ಗಿಟ್ಟಿಸು ತ್ತಿದ್ದಳು. ಹಸ್ತಪ್ರತಿಯಲ್ಲಿ ಬರೆದಿಟ್ಟುಕೊಂಡಿದ್ದ ಅಕ್ಕನ ಹಾಡುಗಳನ್ನು ಬಹಳ ಶ್ರದ್ಧೆಯಿಂದ ಅಚ್ಚಿಗೆ ಸಿದ್ಧಪಡಿಸಿದ್ದಾಳೆ. ಇದರಿಂದ ನಾಡಿನ ಜನರಿಗೆ ಶೈಲಜಾ ಕೀರ್ತನೆಗಳು ಲಭ್ಯವಾಗುವಂತಾಗಿದೆ. ನಾಡಿನ ಗಾಯಕರು ಈ ಗೀತೆಗಳನ್ನು ಹಾಡಿ ರಸಿಕರನ್ನು ತಣಿಸಿದರೆ ಶೈಲಜಾ ಅವರ ಆತ್ಮಕ್ಕೆ ತೃಪ್ತಿಯಾಗುತ್ತದೆ ಎಂದು ನನ್ನ ಭಾವನೆ. ಆಕೆಯ ಮಧುರಸ್ಮೃತಿಯಲ್ಲಿ ಒಂದೆರಡು ಮಾತುಗಳನ್ನು ಮುನ್ನುಡಿಯಾಗಿ ಅವಕಾಶವಿತ್ತ ವಾಗೀಶ್ವರೀ ಕುಟುಂಬದವರಿಗೆ ಕೃತಜ್ಞನಾಗಿದ್ದೇನೆ.

ಪ್ರೊ॥ ಜಿ. ಅಶ್ವತ್ಥನಾರಾಯಣ
ನಿವೃತ್ತ ಕನ್ನಡ ಪ್ರಾಧ್ಯಾಪಕ

ಸಂಪಾದಕಿಯ ನುಡಿ

ಅಕ್ಕ ಶೈಲಜಾ ಅಂದರೆ ನನಗೆ ನೆನಪಾಗುವುದು ಬರೀ ಅವರ ಹಾಡು-ಕವನ ರಚನೆ ಮಾತ್ರ. ತಾಯಿ ವಾಗೀಶ್ವರಿಯಿಂದ ಆಚಾರ-ವಿಚಾರ ಹಾಗೂ ತಂದೆ ವಿದ್ವಾನ್ ಕೊಣನೂರು ರಾಮಕೃಷ್ಣಶಾಸ್ತ್ರಿಯವರಿಂದ ಸಂಗೀತ ಹಾಗೂ ರಚನಾ ಸಾಮರ್ಥ್ಯವನ್ನು ಬಳುವಳಿಯಾಗಿ ಪಡೆದ ಅವರು ಸಂಸ್ಕೃತ-ಕನ್ನಡ-ತೆಲುಗು ಈ ಮೂರೂ ಭಾಷೆಗಳಲ್ಲೂ ರಚನೆ ಮಾಡುತ್ತಿದ್ದರು. ಎಲ್ಲರಿಗೂ ಹಿರಿಯಕ್ಕನಾಗಿದ್ದ ಅವರಿಗೂ ನನಗೂ ವಯಸ್ಸಿನ ಅಂತರ ಬಹಳ.

ನಾನು 4-5 ವರ್ಷದವಳಿದ್ದಾಗಲಿಂದಲೂ ಸಾಮಾನ್ಯವಾಗಿ ಶೈಲಕ್ಕನನ್ನು ಅಂಟಿಕೊಂಡೇ ಇರುತ್ತಿದ್ದೆ. ಕಾರಣ, ಆಗ ನನಗೆ ಭೂತ-ಪಿಶಾಚಿಗಳ ಬಗ್ಗೆ ಅತಿಯಾದ ಭಯವಿದ್ದು ಮಲಗಿದರೆ ನಿದ್ರೆಯೇ ಬರುತ್ತಿರಲಿಲ್ಲ. ಹಾಗಾಗಿ ಶೈಲಕ್ಕ ನನ್ನು ಆತುಕೊಂಡೇ ಮಲಗುತ್ತಿದ್ದೆ. ಅವರು ಮಾಸಿಕ ರಜೆಯಲ್ಲಿದ್ದಾಗಲಂತೂ ನನ್ನ ಪಾಡು ಬೇಡ, ಬಹಳ ಕಷ್ಟಪಡುತ್ತಿದ್ದೆ. ಆಗ ಮಾತ್ರ ಅಮ್ಮನ ಪಕ್ಕದಲ್ಲೇ ಮಲಗುತ್ತಿದ್ದೆ. ನನ್ನ ಭಯ ನಿವಾರಿಸಲು ಅಮ್ಮ ಧ್ರುವ-ಪ್ರಹ್ಲಾದರ ಕಥೆಗಳನ್ನು ಹೇಳುತ್ತಿದ್ದರು. ಶೈಲಕ್ಕನ ಮದುವೆಯಾಗಿ ಗಂಡನ ಮನೆಗೆ ಕಳಿಸಿಕೊಡುವಾಗಲೂ ನಾನೇ ಅವರ ಜತೆ ಬೆಂಗಳೂರಿಗೆ ಬಂದಿದ್ದೆ. ಹೀಗೆ ಹೆಚ್ಚು ಹೆಚ್ಚು ಅವರೊಂದಿಗೇ ಇರಲು ಇಷ್ಟಪಡುತ್ತಿದ್ದೆ. ಸಂಗೀತದ ವಿಷಯದಲ್ಲೂ ನನ್ನ ಅವರ ಒಡನಾಟ ಹೆಚ್ಚಾಗಿತ್ತೆಂದರೆ ಆಶ್ಚರ್ಯವಿಲ್ಲ. ಯಾವಾಗ ಅಮ್ಮನ ಮನೆಗೆ ಬಂದರೂ ಅವರು ಹೊಸದಾಗಿ ರಚಿಸಿದ ಹಾಡುಗಳನ್ನು ಎಲ್ಲರ ಮುಂದೆ ಹಾಡಿ ತೋರಿಸಿ ಅವರೂ ಸಂತೋಷಪಡುತ್ತಿದ್ದರು. ಹಾಗಾಗಿ ಬೇರೆ ಸಾಂಸಾರಿಕ ಕಷ್ಟಕಾರ್ಪಣ್ಯಗಳ ಬಗ್ಗೆ ಚರ್ಚೆನಡೆಯುತ್ತಿದ್ದುದು ಬಹಳ ವಿರಳ. ಅವರೊಂದಿಗೆ ವಿಶೇಷವಾಗಿ ನಾನು ಮಾತ್ರವೇ ಎಲ್ಲಾ ಸಂಗೀತಕಾರ್ಯಕ್ರಮಗಳಲ್ಲಿ ಸಹಗಾಯಕಿಯಾಗಿರುತ್ತಿದ್ದೆ. ನನಗೆ ಶಾಲಾ ಕಾಲೇಜು ದಿನಗಳಲ್ಲಿ ಸಂಗೀತ ಸ್ಪರ್ಧೆಗೆ ಹೋಗಬೇಕಾದರೆ ಅವರು ಭಾವಗೀತೆ, ದೇವರನಾಮಗಳಿಗೆ ರಾಗಸಂಯೋಜನೆ ಮಾಡಿಕೊಡುತ್ತಿದ್ದರು.

ಈ ಮಧ್ಯೆ ಪೋಸ್ಟ್ಆಫೀಸಿನಲ್ಲಿ ಉದ್ಯೋಗಸ್ಥೆಯಾಗಿದ್ದು ಸಂಸಾರಕ್ಕೆ ನೆರವಾದರು. ಹಾಡುವ ಬಯಕೆ ಅತಿಯಾಗಿದ್ದುದರಿಂದ ಉದ್ಯೋಗದಲ್ಲಿ ಮನಸ್ಸೇ ಇರಲಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಅವರು ಕೈಯ್ಯಾಡಿಸದೇ ಇರುವ ಸಂಗೀತ-ಸಾಹಿತ್ಯ ಪ್ರಾಕಾರವಿಲ್ಲ. ಸರಳೆ ಜಂಟಿವರಸೆಗಳಿಗೆ ಸಾಹಿತ್ಯ, ವರ್ಣ, ಕೃತಿ, ತಿಲ್ಲಾನ, ದೇವರನಾಮ, ಉಗಾಭೋಗ ಭಾವಗೀತೆ, ಜಾನಪದ ಶೈಲಿಯ ಗೀತೆ, ಮಕ್ಕಳಗೀತೆ, ದೇಶಭಕ್ತಿಗೀತೆ, ತತ್ತ್ವದ

ಧಾಟಿಯ ಪದಗಳು, ಹೀಗೆ ಧಾತು-ಮಾತು ಎರಡೂ ಒಡಗೂಡಿ ರಚಿತವಾಗಿವೆ ಎನ್ನುವುದು ವಿಶೇಷ.

ತನ್ನ ಪ್ರತಿಭೆಯನ್ನು ತಾನೇ ಗುರುತಿಸಿಕೊಳ್ಳಲೇನೋ ಎಂಬಂತೆ ಒಂದೇ ಒಂದು ವರ್ಣ, ಒಂದು ತಿಲ್ಲಾನ ರಚಿಸಿದ್ದಾರೆ. ನನಗೆ ಚೆನ್ನಾಗಿ ನೆನಪಿರುವಂತೆ ಚಳಿಗಾಲದ ರಜೆಯ ಮೇಲೆ ನಾನು ಹಾಸನದಿಂದ ಬೆಂಗಳೂರಿಗೆ ಶೈಲಕ್ಕನ ಮನೆಗೆ ಬಂದಿದ್ದೆ. ಆಗ ನವರಾತ್ರಿ ಸಮಯ. 'ದೇವೀ ಶ್ರೀಗೌರಿ' ಸ್ವರಾಕ್ಷರ ಕೃತಿ ರಚನೆಯಾದುದು ಆಗಲೇ. ಅದೂ ಹೇಗೆಂದರೆ ಅವರು ಅಡಿಗೆಮನೆಯಲ್ಲಿ ಕೆಲಸಮಾಡುತ್ತಲೋ, ಬಚ್ಚಲುಮನೆಯಲ್ಲಿ ಸೌದೇ ಒಲೆಉರಿ ಸರಿಮಾಡುತ್ತಲೋ ಸಂಗೀತವನ್ನು ಗೊಣಗುತ್ತಲೇ ಇರುತ್ತಿದ್ದರು. ತದನಂತರವೇ ನನಗೆ ಗೊತ್ತಾದದ್ದು ಅದೇ ಇಂತಹ ಅದ್ಭುತ ಕೃತಿ ಅಂತಾ. ಚಕ್ರವಾಕ ರಾಗದಲ್ಲಿ ಜನ್ಯವಾಗಿದ್ದು ನಿಷಾದಾಂತ್ಯ ರಾಗ ಅದಾಗಿತ್ತು. ರಾಗದ ಹೆಸರು ಎಲ್ಲಾ ಕಡೆ ಹುಡುಕಿದರೂ ಹಲವು ವಿದ್ವಾಂಸರಲ್ಲಿ ವಿಚಾರಿಸಿದರೂ ಎಲ್ಲೂ ಸ್ಪಷ್ಟ ಉತ್ತರ ದೊರೆಯಲಿಲ್ಲ. ಆದ್ದರಿಂದ ತಾವೇ 'ಚಕ್ರರೂಪಿ'ಎಂದು ರಾಗವನ್ನು ಹೆಸರಿಸಿ ರಚನೆಯನ್ನು ಪೂರ್ಣ ಗೊಳಿಸಿ "ಸುಲಭ ಚಕ್ರರೂಪಿ ರಾಗವಲಯೆ" ಎಂದು ಹಾಡಿದ ದಿಟ್ಟೆ ಅವರು.

ಬೆಂಗಳೂರು ಗಾಯನ ಸಮಾಜದಲ್ಲಿ ನಡೆದ 11ನೇ ಸಂಗೀತ ಸಮ್ಮೇಳನದಲ್ಲಿ ಬೆಳಗಿನ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಅವರ "ಆನಂದ ನರ್ತನ ಗಣಪತಿ" (ನಾಟರಾಗ-ಆದಿತಾಳ) ಹಾಗೂ "ದೇವೀ ಶ್ರೀಗೌರಿ" (ಚಕ್ರರೂಪಿರಾಗ-ಆದಿತಾಳ) ಎರಡು ಕೃತಿಗಳೂ ಹಲವಾರು ವಿದ್ವಾಂಸರುಗಳ ಮುಂದೆ ನಾನೇ ಹಾಡಿದೆ. ಕೃತಿಗಳು ಎಲ್ಲರ ಮೆಚ್ಚುಗೆಯನ್ನು ಪಡೆಯಿತು. ರಾಗದ ಹೆಸರಿನ ಬಗ್ಗೆ ಯಾರೂ ಬೇರೆ ಮಾಹಿತಿ ಕೊಡಲಿಲ್ಲ. ತಂದೆಯವರೂ ಸಹಾ ಎಲ್ಲಾ ಸ್ವರಜತಿಗಳಿಗೂ ಸಾಹಿತ್ಯವನ್ನು ಹಾಡುತ್ತಿದ್ದರು. ಶಿಷ್ಯರಿಗೆ ಹೇಳಿಕೊಡು ತ್ತಿದ್ದರು. ಕಲ್ಯಾಣಿ ರಾಗದ ಸ್ವರಜತಿಗೆ ಸಾಹಿತ್ಯ ಲಭ್ಯವಿರಲಿಲ್ಲ. ಅದಕ್ಕೆ ತಾವೇ ಕನ್ನಡದಲ್ಲಿ "ಕ್ಷೀರವಾರಿಧಿ ಸುಕುಮಾರಿ ಪರಮ ಕಲ್ಯಾಣಿ ಪೊರೆ" ಎಂಬ ಸುಂದರ ಸ್ವರಸಾಹಿತ್ಯ ಜೋಡಿಸಿದ್ದಾರೆ. ಪ್ರತಿ ಲಕ್ಷ್ಮೀಹಬ್ಬದಲ್ಲೂ ಅದನ್ನು ಹಾಡುತ್ತೇನೆ. ಶಿಷ್ಯರಿಗೂ ಹೇಳಿಕೊಡುತ್ತಿದ್ದೇನೆ. ಹಾಗೇ ಅನೇಕ ಕೃತಿಗಳಿಗೆ ಸುಂದರವಾದ ಚಿಟ್ಟೆಸ್ವರಗಳನ್ನು ಅಳವಡಿಸಿದ್ದಾರೆ. ಹೀಗೆ ತಂದೆಯಿಂದ ಸಾಹಿತ್ಯ ರಚನಾ ಕೌಶಲ್ಯ ಅಕ್ಕನಿಗೆ ರಕ್ತಗತವಾಗಿ ಬಂದಿತ್ತು ಎನ್ನಬಹುದು.

ಹಾಡುವ ಅದಮ್ಯ ಬಯಕೆಯಿಂದಾಗಿ ಬೆಂಗಳೂರು ಆಕಾಶವಾಣಿ ಕೇಂದ್ರ ದಲ್ಲಿ 2-3 ಬಾರಿ ಸತತವಾಗಿ ಪ್ರಯತ್ನಿಸಿ ವಿಫಲರಾದರು. ಆದರು ಛಲ ಬಿಡದೆ ಚೆನ್ನೈ ಆಕಾಶವಾಣಿ ಕೇಂದ್ರದಲ್ಲಿ ಪ್ರಯತ್ನಿಸಿ ಒಂದೇ ಬಾರಿಗೆ ಪಾಸಾಗಿ ಸತತವಾಗಿ 5 ವರ್ಷಗಳು ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನೀಡಿದರು.

ಅಲ್ಲಿಯೂ ಸಹಾ ತಾನು ರಚಿಸಿದ ಕೃತಿಗಳನ್ನೂ ಹಾಡಿ ಅಲ್ಲಿಯ ವಿದ್ವಾಂಸರುಗಳಿಂದ ಶಹಭಾಷ್‌ಗಿರಿ ಪಡೆದ ದಿಟ್ಟೆ. ಇಷ್ಟು ಪ್ರತಿಭಾನ್ವಿತೆಯಾಗಿದ್ದರೂ ಹೆಚ್ಚು ಹೆಚ್ಚು ಸಾರ್ವಜನಿಕವಾಗಿ ಪ್ರಚಾರಪಡೆಯದ ಕಲಾವಿದೆ ಅವರಾಗಿದ್ದರು. ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಬಹಳ ಪ್ರಯತ್ನಿಸಿದರೂ ಅದೃಷ್ಟ ಅವರಿಗೆ ಕೈಗೂಡಲಿಲ್ಲವೆನ್ನಬಹುದು. ವಾಗ್ದೇವಿ ಕಲಾನಿಕೇತನದ ಅಡಿಯಲ್ಲಿ ಕೆಲವು ಧ್ವನಿಸುರುಳಿಗಳಲ್ಲಿ ಅವರ (ಭಕ್ತಿಗೀತಧಾರಾ, ಚೌಡೇಶ್ವರಿ ಸುಪ್ರಭಾತ ಹಾಗೂ ತೆಲುಗು ಚೌಡೇಶ್ವರಿ ಮಹಿಮಕಥಾ) ರಚನೆಗಳನ್ನು ಹೊರತರಲಾಯಿತು. ಶೈಲಜಾ ಅವರು ತಮ್ಮ ಪುಟ್ಟಪುಟ್ಟ ದಿನಚರಿಪುಸ್ತಕಗಳಲ್ಲಿ ತೋಚಿದಂತೆ ಬರೆದುಕೊಂಡು ಹೋಗಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪರಿಶೀಲಿಸಿ ಈ ಪುಸ್ತಕದ ರೂಪದಲ್ಲಿ ಜನತೆಯ ಮುಂದಿಟ್ಟಿದ್ದೇನೆ. ಗ್ರಾಂಥಿಕದೋಷಗಳು ಇರಬಹುದು. ಆದರೂ ಸಹೃದಯರು ಅದನ್ನು ಹೆಚ್ಚು ಗಮನಿಸದೆ ಹಂಸ-ಕ್ಷೀರನ್ಯಾಯದಂತೆ ಅದರ ಭಾವ-ಸಾರವನ್ನು ಮಾತ್ರ ಗ್ರಹಿಸಬೇಕೆಂದು ಪ್ರೀತಿಪೂರ್ವಕವಾಗಿ ಕೋರುತ್ತೇನೆ. ಈ ಮೂಲಕವಾಗಿಯಾದರೂ ಅವರ ಆತ್ಮಕ್ಕೆ ಸಂತೃಪ್ತಿ ದೊರೆಯಲೆಂದು ದೇವರಲ್ಲಿ ಬೇಡುವೆ.

ಈ ಪುಸ್ತಕದಲ್ಲಿ ಪ್ರಕಟಗೊಂಡಿರುವ ತೆಲುಗು ರಚನೆಗಳನ್ನು ಪರಿಶೀಲಿಸಿ, ಪರಿಷ್ಕರಿಸಿಕೊಟ್ಟಂತಹ ಕುಟುಂಬದ ಆತ್ಮೀಯ ಸ್ನೇಹಿತರಾದ ಶ್ರೀ ಚಂದ್ರಶೇಖರ ಬಾಬು ಅವರಿಗೂ, ಪುಸ್ತಕದ ಪ್ರಕಟಣೆ ಬಗ್ಗೆ ಆಗಾಗ್ಗೆ ಸೂಕ್ತ ಮಾರ್ಗದರ್ಶನ ನೀಡುತ್ತಾ ಮುನ್ನುಡಿಯನ್ನು ಸಹಾ ಬರೆದುಕೊಟ್ಟು ಪ್ರೋತ್ಸಾಹಿಸಿದ ನನ್ನ ಗುರುಗಳಾದ ಶ್ರೀಯುತ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರಿಗೂ ಹೃತ್ಪೂರ್ವಕ ಧನ್ಯವಾದಗಳು. ತಮ್ಮ ಪ್ರಿಯಪತ್ನಿಯ ರಚನೆಗಳನ್ನು ಹೊರತರಲು ಅನುಮತಿ ಕೊಟ್ಟು ಅತ್ಯಂತ ಆಸ್ಥೆಯಿಂದ ಧನಾತ್ಮಕವಾಗಿಯೂ ಸಹಕರಿಸಿದ ಶೈಲಜಾ ಅವರ ಪತಿ ಹಾಗೂ ನನ್ನ ಭಾವನವರಾದ ಶ್ರೀ ಶ್ರೀಕಂಠಯ್ಯನವರಿಗೂ, ಹೃದಯದ ಮಾತನ್ನು ಬರೆದುಕೊಟ್ಟಂತಹ ನಮ್ಮಮ್ಮನಿಗೂ, ಪ್ರೀತಿಪೂರ್ವಕ ನುಡಿನಮನಗಳನ್ನು ಬರೆದುಕೊಟ್ಟಂತಹ ಎಲ್ಲ ಸೋದರ-ಸೋದರಿಯರಿಗೂ ಹಾಗೂ ಅಕ್ಕನ ಮಕ್ಕಳಾದ ಲಲಿತಾ-ಸವಿತಾರಿಗೂ, ಈ ಪುಸ್ತಕ ಹೊರತರಲು ಎಲ್ಲಾ ರೀತಿಯಲ್ಲೂ ನನಗೆ ಸಹಕಾರ ನೀಡಿದ ನನ್ನ ಯಜಮಾನರಾದ ಶ್ರೀ ಬಾಲಸುಬ್ರಹ್ಮಣ್ಯರವರಿಗೂ ನಾನು ಕೃತಜ್ಞಳಾಗಿದ್ದೇನೆ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟು ಸಹಕರಿಸಿದ ಶ್ರೀ ನಿತ್ಯಾನಂದ ಪ್ರಿಂಟರ್ಸ್‌ನ ಶ್ರೀ ಬಿ. ಎನ್. ನಟರಾಜ್‌ರವರಿಗೂ ಹಾಗೂ ಕುಮಾರಿ ಸುಶೀಲಾ ರವರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

—ಗೀತಾ ಬಾಲಸುಬ್ರಹ್ಮಣ್ಯ

ಅಮ್ಮನ ಮಾತು

ನನ್ನ ಮಗಳು ಶೈಲಜಾ ಹುಟ್ಟಿದ್ದು 1943ನೇ ಜುಲೈ 31ನೇ ತಾರೀಖು. ಆದಿನ ಆಷಾಢ ಬಹುಳ ಅಮಾವಾಸ್ಯೆ. ಅಂದರೆ ಭೀಮನಮಾವಾಸ್ಯೆ. ನಮ್ಮಲ್ಲಿ ಜ್ಯೋತಿರ್ಭೀಮೇಶ್ವರ ವ್ರತ. ಆ ದಿನಗಳಲ್ಲಿ ಎಲ್ಲಾ ಕಡೆಯೂ ಮದ್ರಾಸ್ 'ಐ' ಬಂದು ಎಲ್ಲರಿಗೂ ಕಣ್ಣುನೋವು ಕಣ್ಣು ಕೆಂಪಗೆ ಆಗಿತ್ತು. ಇದು ಸುಮಾರು ಒಂದು ತಿಂಗಳಿನಿಂದ ಎಲ್ಲರಿಗೂ ಇತ್ತು. ಶಿರಾದಲ್ಲಿ ನನ್ನ ಮೈದುನ ಸೀತಾರಾಮ ಶಾಸ್ತ್ರಿಗಳಿಗೆ ಮದುವೆ ಆಯ್ತು. ಆ ಸಂದರ್ಭದಲ್ಲಿ ನಮ್ಮ ಭಾವನವರ ಮಕ್ಕಳಾದ ಸುಲೋಚನ ಶಾಂತ, ಸುಬ್ಬರಾಮುವಿಗೂ ಈ ಕಣ್ಣು ನೋವು ಅಂಟಿಕೊಂಡಿತ್ತು. ನನ್ನ ಸ್ವಭಾವದಂತೆ ಮಕ್ಕಳಿಗೆ ಶುಶ್ರೂಷೆ ಮಾಡುವಾಗ ಅದು ನನಗೂ ಬಂತು. ಆಗ ನಾನು ತಿಂಗಳ ಚೊಚ್ಚಲ ಬಸಿರಿ. ಆಗ ಬಂದ ಕಣ್ಣು ನೋವು ತೌರಿಗೆ ಬಾಣಂತನಕ್ಕೆ ಬಂದರೂ ಹೋಗಿರಲಿಲ್ಲ. ಮಂಡ್ಯದ ಡಿಸ್ಟಿಕ್ಟ್ ಆಸ್ಪತ್ರೆಯಲ್ಲಿ 31-7-1943ನೇ ಶನಿವಾರ ಮಧ್ಯಾಹ್ನ ಒಂದು ಗಂಟೆಯಲ್ಲಿ ಹೆಣ್ಣುಮಗು ಹುಟ್ಟಿದಾಗ ಮಗುವಿಗೂ ಕಣ್ಣುನೋವು. ಮಗು ಅತ್ತು ಹಾಲು ಕುಡಿದು ಮಾಡುತ್ತಿದ್ದರೂ ಕಣ್ಣುಮಾತ್ರ ಬಿಡಲೇ ಇಲ್ಲ. ಮಗುವಿಗೆ ಕಣ್ಣು ದೃಷ್ಟಿ ಇದೆಯೋ ಇಲ್ಲವೋ ಗೊತ್ತಾಗುತ್ತಿರಲಿಲ್ಲ. ರಾತ್ರಿ ಹೊತ್ತು ಕತ್ತಲಲ್ಲಿ ಕಣ್ಣು ಬಿಡುತ್ತೆ ಅನ್ನುವರು ಡಾಕ್ಟರು. ಹೀಗೆ ಮೂರು ತಿಂಗಳು ತುಂಬುವ ವೇಳೆಗೆ ಸ್ವಲ್ಪ ಕವಡೆ ಬಿರುಕಿನ ಹಾಗೆ ಕಣ್ಣು ಬಿಡಲು ಪ್ರಯತ್ನಿಸುತ್ತಿದ್ದಳು. ಈ ತರಹ ಇದ್ದುದರಿಂದ ಕಣ್ಣುಗಳು ಸಣ್ಣದಾಗೇ ಇತ್ತು. ಈ ಮಗುವೇ ಶೈಲಜಾ.

ಈ ಮಗುವಿಗೆ ಬುದ್ಧಿಮಾತ್ರ ಬಲು ಚುರುಕು. ಸಂಗೀತ ಸಂಸ್ಕಾರವಂತೂ ಕರಗತವಾಗಿತ್ತು. ಏಳು ವರ್ಷದ ಹುಡುಗಿ ಕೃತಿಗಳನ್ನು ಹಾಡಿ ಸ್ವರವಿನ್ಯಾಸ ಮಾಡುತ್ತಾ, ಅತಿಶಯಕ್ಕೆ ತಂದೆ ಜೊತೆ ಸಭೆಗಳಲ್ಲಿ ಒಬ್ಬಳೇ ಹಾಡಿ ಹೊಗಳಿಸಿ ಕೊಂಡು ಬರುತ್ತಿದ್ಲು. ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗಳಿಸಿ ಹೊಗಳಿಸಿಕೊಳ್ಳುತ್ತಿದ್ದಳು. 16 ವರ್ಷದವಳಾಗಿದ್ದಾಗ ಹಾಸನಕ್ಕೆ ಬಂದ ಹೊಸತರಲ್ಲೇ ನಾನು, ನಮ್ಮ ಯಜಮಾನರು ಮೈಸೂರಿಗೆ ಹೋಗಿದ್ದೆವು. ಯಜಮಾನರು ಸಂಗೀತ ಪರೀಕ್ಷಕರಾಗಿ ಹೋಗಿದ್ರು. ನಾನು ಮೈಸೂರಿನಲ್ಲಿ ತಂದೆಯವರನ್ನು ನೋಡಿಬರಲು ಹೋಗಿದ್ದೆ. ಆ ಸಮಯದಲ್ಲಿ ಹಾಸನದ ಶಂಕರಮಠಕ್ಕೆ ಶೃಂಗೇರಿಯಿಂದ ಗುರುಗಳು ಬಂದಿದ್ದರು. ಊರಿನ ಜನರೆಲ್ಲಾ ಗುರುಗಳ ದರ್ಶನಕ್ಕಾಗಿ ಸಾಯಂಕಾಲ ಹೋಗುವ ಪದ್ಧತಿ. ಆಗ ಗುರುಗಳು ದೇವರಿಗೆ ಅಭಿಷೇಕ, ಪೂಜೆ, ಮಧ್ಯೆ ಸಂಗೀತ ಹೀಗೆ ಕಾರ್ಯಕ್ರಮ ಇತ್ತು.

ಶೈಲಳಿಗೆ ಹಾಡುವ ಆಸೆ. ತನ್ನ ಸ್ನೇಹಿತೆ ಮಠದ ಪಕ್ಕದಲ್ಲೇ ಇದ್ದ ವಕೀಲರ ಮಗಳು ಉಮಾ ಜೊತೆ ಗೂಡಿ ಅವಳ ತಂಬೂರಿ ತಂದು ಗುರುಗಳ ಮುಂದೆ ಹಾಡುವ ಆಸೆಯಿಂದ ಓಡಾಡಿದಳು. ತುಂಬಾ ಚಿಕ್ಕವಳಂತೆ ಕಾಣುತ್ತಿದ್ದ ಶೈಲಳ ಓಡಾಟ ನೋಡಿ ಸಿನಿಮಾ ಹಾಡು ಹೇಳಬಾರದು ಅಂದಿದ್ದರಂತೆ. ಹಾಡುವ ಸಮಯ ಬಂದಾಗ ಶೈಲ ತಂಬೂರಿ ತಾನೇ ಮೀಟಿಕೊಂಡು ಶ್ರುತಿಹಿಡಿದು ಹಂಸಧ್ವನಿಯಲ್ಲಿ ಗಣಪತಿ ಪ್ರಾರ್ಥನೆ ಮಾಡಿ, ನಾಟರಾಗವನ್ನು ಚೊಕ್ಕಾಗಿ ಎರಡು ನಿಮಿಷ ಹಾಡಿ, ಸರಸೀರುಹಾಸನಪ್ರಿಯ ಅಂಬಾ, ಹಾಡಿ ಸ್ವರವಿನ್ಯಾಸ ಮಾಡಿದಾಗ, ಗುರುಗಳು ನಿಧಾನವಾಗಿ ಹಿಂತಿರುಗಿ ನೋಡಿದರಂತೆ. ಮುಂದೆ ಕಾಮವರ್ಧಿನಿ ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ 'ಶಂಭೋ ಮಹಾದೇವ' ಕೃತಿಯನ್ನು ವಿಸ್ತಾರ ಸ್ವರವಿನ್ಯಾಸದೊಡನೆ ಹಾಡಿದಾಗ ಎಲ್ಲರಿಗೂ ಆನಂದ. ಗುರುಗಳು ತಮ್ಮ ಆಪ್ತರನ್ನು ಕರೆದು ಆ ಹುಡುಗಿಯನ್ನು ಕಳಿಸಬೇಡಿ, ಇರಲು ಹೇಳಿ ಅಂತಾ ಅಂದರಂತೆ. ಕೊನೆಯಲ್ಲಿ ಹೊಗಳಿ ಶಾರದಾಂಬೆಯ ಚಿನ್ನದ ಕಾಸು, ಕಾಶೀ ಪೀತಾಂಬರದ ಶಾಲು ಹೊದಿಸಿ ಆಶೀರ್ವದಿಸಿದರು. ಆಗಿನಿಂದ ಮುಂದೆ ನಾವು 20 ವರ್ಷದವರೆಗೂ ಹಾಸನದಲ್ಲಿದ್ದೆವು. ಗುರುಗಳು ಬಂದಾಗಲೆಲ್ಲಾ ಹಾಡುವ ಪರಿಪಾಠ ಅವಳದಾಗಿತ್ತು. ಹಾಗೆಯೇ ಸಾರ್ವಜನಿಕ ಸಮಾರಂಭಗಳಲ್ಲಿ ಹಾಡುತ್ತಾ, ತನ್ನ ವಿದ್ಯೆಯಲ್ಲಿ ಪರಿಣತಿ ಪಡೆಯುತ್ತಿದ್ದಳು.

ವಿದ್ವತ್ ಪರೀಕ್ಷೆಯಲ್ಲಿ ಆಗ ವಿದ್ವಾಂಸರಾದ ಆರ್. ಆರ್. ಕೇಶವ ಮೂರ್ತಿ, ಆರ್. ಎಸ್. ಕೇಶವಮೂರ್ತಿ, ಜಿ. ಚೆನ್ನಮ್ಮ ಎಲ್ಲರೂ ಪರೀಕ್ಷಕ ರಾಗಿದ್ರು. ಅವರಿಂದಲೂ ಮೆಚ್ಚುಗೆಯನ್ನು ಪಡೆದಿದ್ದಳು.

ಹಾಗೆಯೇ ಅವಳಿಗೆ ಈ ಮಧ್ಯೆ ಹೊಟ್ಟೆನೋವು ಹೆಚ್ಚಾಗಿದ್ದುದರಿಂದ ಮೈಸೂರು ಮಿಷನ್ ಆಸ್ಪತ್ರೆಯಲ್ಲಿ ಆಪರೇಷನ್ ಆಗಿ ಒಂದು ವರ್ಷ ಪ್ರತಿದಿನ ಇಂಜೆಕ್ಷನ್ ಕೊಡಿಸಬೇಕಾಯ್ತು. ಒಂದು ವರ್ಷ ಕಾಲೇಜಿಗೂ ಹೋಗಲಿಲ್ಲ. ಹಾಗೆಯೇ ಇನ್ನು ಮುಂದೆ ಆರು ವರ್ಷದವರೆಗೂ ಮದುವೆಗೂ ಅವಕಾಶವಿಲ್ಲ ಅಂತ ವೈದ್ಯರು ಹೇಳಿದ್ದರಿಂದ ನಾನು ಎಲ್ಲಕ್ಕೂ ತಡೆ ಹಾಕಿದೆ. ದಿನಕಳೆದಂತೆ ಅವಳ ಆರೋಗ್ಯ ಸುಧಾರಿಸಿತು.

27 ನೇ ವಯಸ್ಸಿಗೆ ಅನುರೂಪನಾದ ಶ್ರೀಕಂಠಯ್ಯನವರೊಂದಿಗೆ ಮದುವೆಯೂ ಆಯ್ತು. ಕಾಲಕ್ರಮೇಣ ಎರಡು ಹೆಣ್ಣು ಮಕ್ಕಳೂ ಆಗಿ ಸುಖಸಂಸಾರವೆನಿಸಿತ್ತು. ಈ ಮಧ್ಯೆ ಹಾಡುಗಳನ್ನು ರಚಿಸಿ ಹಾಡುವ ಪರಿಪಾಠ ಹೆಚ್ಚಾಗಿ ಬೆಳೆದಿತ್ತು.

ಕೂತರೆ, ನಿಂತರೆ ಹಾಡು. ಅನ್ನೋ ಹಾಗೆ ಅವಳ ಮೈ ಮನಸ್ಸು ಎಲ್ಲಾ

ಸಂಗೀತಮಯ. ಆದರೆ ಆವಳ ಸಂಗೀತ-ಸಾಹಿತ್ಯ ಪ್ರಕಾಶಕ್ಕೆ ಬರಲು ಅದೃಷ್ಟ ಅವಕಾಶ ಕೊಡಲಿಲ್ಲ. ಅನಾರೋಗ್ಯಕೂಡ ಹೆಚ್ಚಾಗುತ್ತಿತ್ತು. ಆದ್ದರಿಂದ ನಿರಾಸೆ ಹೆಚ್ಚಾಯಿತು. ಈ ನಡುವೆ ಮತ್ತೀಕೆರೆ-ದಸರೀಘಟ್ಟ ಶ್ರೀಚೌಡೇಶ್ವರಿ ಅಮ್ಮನ ಭಕ್ತಿಯಲ್ಲಿ ಮುಳುಗಿ ಅಪಾರವಾದ ಸಾಹಿತ್ಯ-ಸಂಗೀತ ಸೃಷ್ಟಿಯಾಯಿತು. ಅವಳ ಹಾಡುಗಳಲ್ಲಿ ಅಧ್ಯಾತ್ಮವಿಚಾರವಂತೂ ಬಹಳವಾಗಿದೆ. 2006ರ ಅಕ್ಟೋಬರ್ 17ರಂದು ಅಕಾಲ ಮರಣಕ್ಕೆ ತುತ್ತಾಗಿದ್ದು ವಿಧಿ ಲೀಲೆ. ಈಗ ಉಳಿದಿರುವುದು ಅವಳ ಅಮೂಲ್ಯ ಸಂಗೀತ ರಚನೆಗಳು ಹಾಗೂ ಅವಳ ನೆನಪು ಮಾತ್ರ. ಅದನ್ನು ಉಳಿಸಬೇಕಾಗಿರುವುದು ನಮ್ಮ ಕರ್ತವ್ಯವಾಗಿರುವುದರಿಂದ ಅದನ್ನು ಅಭಿಮಾನಿಗಳ ಮುಂದಿಟ್ಟು ಅವಳ ಆತ್ಮಕ್ಕೆ ಶಾಂತಿ ನೆಮ್ಮದಿ ಸಿಗಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ನೊಂದ ಅಮ್ಮ
ವಾಗೀಶ್ವರಿ ಶಾಸ್ತ್ರಿ

ನುಡಿನಮನ 1

ನನ್ನೊಲವಿನ ಅಕ್ಕ ಶೈಲಜ ಮತ್ತು ನನ್ನ ಒಡನಾಟ

'ಒಲಿವಿಯಾ-ಸೋಫಿಯಾ' ಅಂತ ನಮ್ಮ ಸರೋಜಾ ಚಿಕ್ಕಮ್ಮ ನಮ್ಮಿಬ್ಬರನ್ನು ಕರೀತಾ ಇದ್ರು. ಇವರು ಒಂದು ಆಂಗ್ಲ ಕಥೆಯಲ್ಲಿ ಬರುವ ಭಿನ್ನ ರೀತಿಯ ಸ್ವಭಾವದ ಅಕ್ಕತಂಗಿಯರಂತೆ. ನನಗೂ ನನ್ನಕ್ಕನಿಗೂ ಮೂರು ವರ್ಷದ ಅಂತರ ವಿದ್ದರೂ, ನಾನು ಉದ್ದ ಗಾತ್ರದಲ್ಲಿ ಅವಳಿಗಿಂತ ದೊಡ್ಡವಳಂತೆ ಕಾಣುತ್ತಿದ್ದೆ. ನಾನು ಸ್ವಲ್ಪ ಜೋರು, ಗಲಾಟೆ, ಮಾತು, ಕೆಲಸ ಎಲ್ಲಾ ವೇಗ. ಊಟ ತಿಂಡಿಯಲ್ಲೂ ನನಗೆ ಭೀಮಪಾಲು. ಇದಕ್ಕೆ ಶೈಲ ತದ್ವಿರುದ್ಧ. ನಾಜೂಕು, ಮೆದು, ನಿಧಾನ ಕೆಲ್ಸ, ಅವಳಿಗೆ ಎಲ್ಲಾ ಚಿಕ್ಕದಾಗಿರಬೇಕು, ನನಗೆ ಎಲ್ಲಾ ದೊಡ್ಡದಾಗಿರಬೇಕು. ಉದಾ: ಊಟಕ್ಕೆ ನನಗೆ ದೊಡ್ಡ ತಟ್ಟೆ ಬೇಕೆಂದರೆ, ಅವಳು ಆದಷ್ಟೂ ಚಿಕ್ಕದನ್ನೇ ಆರಿಸುತ್ತಿದ್ದಳು. ನನಗೆ ಅಲಂಕಾರ ಸಾಮಗ್ರಿಗಳೆಂದರೆ ತುಂಬಾ ಇಷ್ಟ. ಅವಳಿಗೆ ಅಷ್ಟು ಇಲ್ಲ. ಅವಳೇ ನನಗೆ ತರಹಾವರಿ ಜಡೆಗಳನ್ನು ಹಾಕ್ತಾ ಇದ್ದಳು. ಅವಳಿಗೆ ಯಾರೂ ಬಯ್ಯಬಾರದು, ಜೋರು ಮಾಡಬಾರದು, ಬೇಗ ಅಳು ಬರುತ್ತಿತ್ತು. ನಾನು ಮಾತ್ರ ಯಾರಿಗೂ ಲೆಕ್ಕಿಸದೆ ಯಾರು ಏನೇ ಅಂದರೂ ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಇದೆಲ್ಲಾ ಏನೇ ಇದ್ದರೂ ನಾವಿಬ್ಬರು ಮಾತ್ರ ಅವಳಿ ಮಕ್ಕಳಂತೆ ಒಬ್ಬರನ್ನೊಬ್ಬರು ಬಿಡದೆ ಜೊತೆಯಲ್ಲೇ ಇರುತ್ತಿದ್ದು, ಎಲ್ಲಾ ಸ್ನೇಹಿತೆಯರೊಂದಿಗೆ ಒಟ್ಟಿಗೇ ಆಟವಾಡುತ್ತಿದ್ದೆವು. ಮನೆಕೆಲ್ಸವನ್ನು ಜಗಳವಾಡದೆ ಒಬ್ಬೊಬ್ಬರು ಒಂದೊಂದನ್ನು ಹಂಚಿಕೊಳ್ಳುತ್ತಿದ್ದೆವು. ಸ್ವಲ್ಪ ಭಾರದ ಕಷ್ಟದ ಕೆಲಸಕ್ಕೆ ನಾನೇ ಕೈಹಾಕುತ್ತಿದ್ದೆ.

ನಮ್ಮಪ್ಪ ಸಂಗೀತಗಾರರಾದ್ದರಿಂದ ಅವರೇ ಅವಳಿಗೆ ಸಂಗೀತಪಾಠ ಶುರುಮಾಡಿದ್ರು. ಬೆಳಗಿನ ಝಾವವೇ ಹೇಳಿಕೊಡುತ್ತಿದ್ದರು. ನಾನು ಯಾವಾಗಲೂ ಮೇಜುಹತ್ತಿ ಕುಣೀತಾ ಇದ್ದುದರಿಂದ ನನಗೆ ಡ್ಯಾನ್ಸ್ ಇಷ್ಟ ಅಂತ ಅರಸೀಕೆರೆಯಲ್ಲೂ, ಮೈಸೂರಿನಲ್ಲೂ ಡ್ಯಾನ್ಸ್ ಕಲಿಸಿದರು. ವಿದ್ವಾನ್ ಬಿ. ಎಸ್. ರಾಜೈಂಗಾರ್ ಅವರ ಮಗಳು ಅಲಮೇಲಮ್ಮ ನನ್ನ ಮೊದಲಗುರು. ಖ್ಯಾತ ನೃತ್ಯ ಕಲಾವಿದೆ ಉಷಾ ದಾತಾರ್ ನನ್ನ ಸಹಪಾಠಿ. ನನ್ನಕ್ಕನೇ ನನ್ನ ನೃತ್ಯಕ್ಕೆ ಹಾಡುತ್ತಿದ್ದು ನಮ್ಮ ತಂದೆಯವರೇ ಹಾರ್ಮೋನಿಯಂ ಸಾಥ್ ನೀಡುತ್ತಿದ್ದರು.

ಪ್ರೌಢಶಾಲೆಯಲ್ಲಿದ್ದಾಗ ನಮ್ಮಮ್ಮ ನಮ್ಮಿಬ್ಬರಿಗೂ ಚರ್ಚಾಸ್ಪರ್ಧೆಗಳಿಗೆ ಮತ್ತು ಕಂಠಪಾಠಗಳಿಗೂ ತಯಾರಿಮಾಡುತ್ತಿದ್ದು, ಬಹುಮಾನಗಳೂ

ಗಿಟ್ಟುತ್ತಿದ್ದುವು. ಗೊರೂರಿನಲ್ಲಿ ಪ್ರೌಢಶಾಲೆಯಲ್ಲಿ ಓದುವಾಗ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಮಗಳು ವಸಂತ ನಮ್ಮ ಗೆಳತಿ. ವಿಶ್ವನಾಥ ಶಾಸ್ತ್ರಿಗಳು ಸಂಸ್ಕೃತ ಪಂಡಿತರಿಂದ ಪ್ರಥಮ ಭಾಷೆಯಾಗಿ ಸಂಸ್ಕೃತ ಕಲಿತಿದ್ದರಿಂದ, ನನ್ನಕ್ಕನಿಗೆ ಮುಂದೆ ಸಂಸ್ಕೃತದಲ್ಲಿ ಕವನಗಳನ್ನು ರಚಿಸಲು ಸಹಾಯವಾಯಿತು. ಎಸ್.ಎಸ್.ಎಲ್.ಸಿ.ಯಲ್ಲಿ ಶೈಲಾ ರಾಜ್ಯಕ್ಕೇ 20ನೇ ರ್‍ಯಾಂಕ್ ಗಳಿಸಿ ಮುಂದೆ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೋಗಿ ಭಂಗಪಟ್ಟು, ಖಾಯಿಲೆಬಂದು, ದೊಡ್ಡ ಶಸ್ತ್ರಚಿಕಿತ್ಸೆ ನಡೆದು, ಅವಳ ಮದುವೆ ಯನ್ನೂ ಮುಂದೂಡುವಂತಾಯಿತು.

ನನ್ನಕ್ಕ ಶೈಲಜ ಯಾವಾಗ ಕಛೇರಿ ಮಾಡುವಾಗಲೂ ನನ್ನದೇ ತಂಬೂರಿ ವಾದನ. ನಮ್ಮಮ್ಮ ಮಾತ್ರ ಯಾವಾಗಲೂ ಎಂದೂ ಅವಳು ಕಛೇರಿ ಮಾಡುವಾಗ ಮುಂದೆ ಬರುತ್ತಲೇ ಇರಲಿಲ್ಲ. ಎಲ್ಲೋ ದೂರ ಕುಳಿತು ಕೇಳಿ ಆನಂದಪಡುತ್ತಿದ್ದರು. ಮನೆಗೆ ಬಂದ ಮೇಲೆ ಅದರ ಬಗ್ಗೆ ವಿಮರ್ಶಿಸುತ್ತಿದ್ದರು. ಅವಳು ಹಾಡುತ್ತಿದ್ದರೆ ನಾನು ಉಸಿರುಕಟ್ಟಿ ಕುಳಿತಿರುತ್ತಿದ್ದೆ, ಹಾಗೇ ಆನಂದಿಸುತ್ತಿದ್ದೆ.

ಈ ನಡುವೆ ಭಾರತ-ಚೀನಾ ಯುದ್ಧದ ಸಮಯದಲ್ಲಿ ಕೇಂದ್ರಸರ್ಕಾರದ ವಾರ್ತಾ ಇಲಾಖೆಯವರು ಎಲ್ಲಾ ರಾಜ್ಯಗಳಲ್ಲೂ ಜನಜಾಗೃತಿಗಾಗಿ ದೇಶಭಕ್ತಿ ಗೀತೆ, ವೀರಗೀತೆಗಳ ಕಾರ್ಯಕ್ರಮ, ಡಾಕ್ಯುಮೆಂಟರಿ ಚಲನಚಿತ್ರ ಪ್ರದರ್ಶನ ಏರ್ಪಡಿಸಿದ್ದರು. ನಮ್ಮಕ್ಕ ಕೂಡ ತಂದೆಯವರ ಹಾರ್ಮೋನಿಯಂ, 6 ವರ್ಷದ ಪುಟ್ಟ ತಮ್ಮ ಪ್ರಸಾದನ ಖಂಜರ, ಹಾಗೂ 8 ವರ್ಷದ ಪುಟ್ಟ ತಂಗಿ ಗೀತಳ ಸಹಗಾಯನದೊಂದಿಗೆ ಎಲ್ಲಾ ಊರುಗಳಲ್ಲೂ ತಾನೇ ರಾಗ ಸಂಯೋಜಿಸಿದ ಗೀತೆಗಳ ಯಶಸ್ವೀ ಕಾರ್ಯಕ್ರಮಗಳನ್ನು ನೀಡುತ್ತಿದ್ದಳು. ಇದಕ್ಕೆ ಸರ್ಕಾರಿ ಜೀಪಿನ ವ್ಯವಸ್ಥೆ ಕೂಡ ಇತ್ತು.

ಹಾಸನದ ಪಿ.ಡಬ್ಲ್ಯೂ.ಡಿ. ಕಾಲೋನಿಯಲ್ಲಿ ರಾಜೈಂಗಾರ್ ಎಂಬುವರ ಮನೆಯಲ್ಲಿ ಸಾಯಿಬಾಬಾ ಪೂಜೆ-ಭಜನೆ ನಡೆಯುತ್ತಿದ್ದು ಶೈಲ ಡಿಗ್ರಿ ಓದುವಾಗ ಅವರ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಮೊದಲು "ಶ್ರೀ ಚರಣಂ-ಗುರುಚರಣಂ ಸದಾಶ್ರಯಾಮಿ ತವ ಚರಣಂ" ಎಂಬ ದಶಾವತಾರದ ಸಾಯಿ ಸ್ತೋತ್ರ ಸಂಸ್ಕೃತದಲ್ಲಿ ರಚಿತವಾಯಿತು. ಒಮ್ಮೆ ಕಾಲೇಜಿನಲ್ಲಿ ನಡೆದ ಕಲಾ ಪ್ರದರ್ಶನ ನೋಡಿ ತನ್ನ ಅಭಿಪ್ರಾಯವನ್ನು ಆಂಗ್ಲಭಾಷೆಯಲ್ಲಿ ಒಂದು ಪುಟ್ಟ ಕವನದ ರೂಪದಲ್ಲಿ ಬರೆದಳು. ಹೀಗೆ ಅವಳು ಕೂತರೆ ನಿಂತರೆ, ಏನಾದರೂ ನೋಡಿದರೆ, ನೋವಾದರೆ, ಸಂತೋಷವಾದರೆ, ಕೈಲಾಗದೇ ಹೋದರೆ

ಎಲ್ಲದಕ್ಕೂ ಆ ಭಾವನೆಗಳು ತನಗೆ ತಾನೇ ಹೊರಹೊಮ್ಮಿ ಕವನ ಸೃಷ್ಟಿಯಾಗುತ್ತಿತ್ತು.

1970 ರಲ್ಲಿ ಅವಳ ಮದುವೆಯೂ ಆಗಿ, ಬೆಂಗಳೂರು ಸೇರಿದಳು. ಮಗಳು ಲಲಿತಾ ಹುಟ್ಟಿದಾಗ, ಅವಳಿಗಾಗಿ "ಜಿಂಗಾರಿ ಪಾಪ" ಹಾಡು, ನನ್ನ ಮಗ ಪ್ರದೀಪನಿಗಾಗಿ "ಡಿಂಗ್ ಡಿಂಗ್ ಡಿಂಗ" ಹಾಡನ್ನು ರಚಿಸಿದಳು. ಕೃಷ್ಣನ ಬಾಲಲೀಲೆಗಳನ್ನು ವರ್ಣಿಸಿ ಅನೇಕ ಗೀತೆಗಳನ್ನು ರಚಿಸಿ ಆನಂದಿಸಿದ್ದಲ್ಲದೆ ಬಹಳಷ್ಟು ದೇವೀಸ್ತುತಿಗಳನ್ನೂ ರಚಿಸಿದ್ದಾಳೆ. ಅವಳು ಗರ್ಭದಲ್ಲಿದ್ದಾಗ ನಮ್ಮಮ್ಮ ದೇವೀಭಾಗವತವನ್ನು ಕೇಳಿ ಬರೆದಿಡುತ್ತಿದ್ದರಂತೆ. ಬಹುಶಃ ಅದರ ಪ್ರಭಾವವಿರುವುದರಲ್ಲಿ ಸಂಶಯವಿಲ್ಲವೆನಿಸುತ್ತದೆ.

ಮುಂದೆ ಮಕ್ಕಳಾದ ಲಲಿತಾ-ಸವಿತರ ಮದುವೆಗಳಾಗಿ ಗಂಡು ಮೊಮ್ಮಕ್ಕಳನ್ನು ಪಡೆದು, ಅನೇಕ ಬಾರಿ ಅಮೇರಿಕಾ ಪ್ರವಾಸವನ್ನೂ ಮಾಡಿ ಮುಗಿಸಿದ ನನ್ನಕ್ಕ ತಾನೇ ತನ್ನ ರಚನೆಗಳನ್ನು ಪ್ರಕಟಿಸದೇ ಹೋದದ್ದು ವಿಪರ್ಯಾಸ. ಇದ್ದಕ್ಕಿದ್ದಂತೆ ಎಲ್ಲರಿಗೂ ಆಘಾತನೀಡಿ ಇಹಲೋಕ ತ್ಯಜಿಸಿ, ದೇವಿಯನ್ನು ದರ್ಶಿಸಲು ಹೋಗುತ್ತಿದ್ದ, ನನ್ನಕ್ಕ ದೇವಿಗೇ ಅರ್ಪಿತಳಾಗಿ ಹೋದಾಗ, ಏಕೆ ದೇವಿ ಹೀಗೆ ಮಾಡಿದಳು? ಎಂಬ ಪ್ರಶ್ನೆ ಬಂದಿತ್ತಾದರೂ ಇದೆಲ್ಲಾ ಪೂರ್ವನಿರ್ಧಾರಿತ ಎಂದುಕೊಂಡೆ. ಕೊನೇ ಘಳಿಗೆವರೆಗೂ ನಾನು ಅಕ್ಕನೊಡನೆ ಇದ್ದುದು ಆಶ್ಚರ್ಯಕರ. ಅವಳ ಆತ್ಮಕ್ಕೆ ಶಾಂತಿ ದೊರೆಯಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಹಾಗೂ ಈ "ಶೈಲಜಾ ರಚನೆಗಳು" ಎಲ್ಲರ ಮನೆ-ಮನಗಳನ್ನು ತಲುಪಲಿ ಎಂದು ಹಾರೈಸುವೆ.

ದಿನಾಂಕ: 28-10-2012

ಒಲವಿನ ತಂಗಿ
ಅನ್ನಪೂರ್ಣ

ನುಡಿನಮನ 2

ಮಧುರಸ್ಮೃತಿಯಲ್ಲಿ ಅಕ್ಕ ಶೈಲಜ

ನನ್ನ ಸಹೋದರಿ ಶೈಲಜಾಳ ಬಗ್ಗೆ ಎರಡು ಮಾತು. ಈಕೆ ದೈವಭಕ್ತೆ, ಪ್ರಾಜ್ಞೆ, ಇದರ ಜೊತೆಗೆ ಸಂಸ್ಕಾರಯುತವಾಗಿ ಬಂದಿದ್ದ ಸಂಗೀತವಿದ್ಯೆ ಬೇರೆ. ಬಾಲ್ಯದಿಂದಲೇ ಸಂಗೀತವನ್ನು ಕಲಿತಿದ್ದು ಗುರುವಾಗಿದ್ದ ತಂದೆಯ ಮೂಲಕವೇ. ಓದಿನಲ್ಲಿಯೂ ಬಹಳ ಜಾಣೆಯಾಗಿದ್ದ ಈಕೆ ನಿರಾಯಾಸವಾಗಿ ಸಂಗೀತ ಕಲಿತು, ಕಛೇರಿ ಮಾಡುವ ಹಂತ ತಲುಪಿದ್ದಳು. ಇದಕ್ಕೆ ಮಾತೃಶ್ರೀಯವರ ಉತ್ತೇಜನ, ಸಹಕಾರಗಳೂ ಮುಖ್ಯವಾಗಿದ್ದವು.

ನಾವು ಐದು ಜನ ಹೆಣ್ಣುಮಕ್ಕಳು ಮತ್ತು ಮೂರುಜನ ಗಂಡು ಮಕ್ಕಳು ಇದ್ದ ತುಂಬು ಕುಟುಂಬ ನಮ್ಮದಾಗಿತ್ತು. ನಾವೆಲ್ಲ ಸಹೋದರಿಯರು ಅತ್ಯಂತ ಅನ್ಯೋನ್ಯತೆಯಿಂದ ಇದ್ದುದರಿಂದ ತಂದೆಯವರಿಂದ ಸಂಗೀತ ಪಾಠ ಒಟ್ಟಿಗೇ ನಡೆಯುತ್ತಲಿತ್ತು. ಆಗ್ಗೆ ನಾನೂ ಕೂಡ ನಮ್ಮಕ್ಕನೊಂದಿಗೆ ಹಾಡುತ್ತಿದ್ದೆ. ಸಂಗೀತ ಅಭ್ಯಾಸದಲ್ಲಿ ನಮ್ಮಲ್ಲಿ ಹೆಚ್ಚಿನ ಹೊಂದಾಣಿಕೆಯಿರುತ್ತಿದ್ದರಿಂದ, ಪ್ರಾರಂಭದಲ್ಲಿ ಸಂಗೀತ ಕಛೇರಿಗಳಿಗೆ ಒಟ್ಟಿಗೆ ಹಾಡಲು ಹೋಗುತ್ತಿದ್ದೆವು. ಕಛೇರಿಯಲ್ಲಿ ಇಬ್ಬರಲ್ಲಿ ಒಬ್ಬರು ರಾಗಾಲಾಪನೆ ಮಾಡಿದರೆ, ಅಕ್ಕ ಸ್ವರಗಳ ಸರಪಳಿಗಳ ಜಾಲದಿಂದ ಎಲ್ಲರನ್ನೂ ಬೆರಗುಗೊಳಿಸುತ್ತಿದ್ದುದು, ನೆನಪಿನ ಬುತ್ತಿಯಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ.

ಅಂತಹ ಆರೋಗ್ಯವಂತೆಯಲ್ಲದ ಈ ಸಹೋದರಿ ಹೊಟ್ಟೆನೋವಿನಿಂದ ಬಳಲುತ್ತಿದ್ದು, ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದವಳು. ಒಂದಲ್ಲ ಮೂರುಬಾರಿ ಶಸ್ತ್ರಚಿಕಿತ್ಸೆ ಯಾಗಿತ್ತು. ಎಷ್ಟೋ ವರ್ಷಗಳು ಬಹಳ ನಿಶ್ಶಕ್ತಳಾಗಿಯೇ ಇದ್ದವಳು. ಆದ್ದರಿಂದ ಮಾತೃಶ್ರೀಯವರು ಅವಳಿಗೆ ತುಂಬಾ ಆರೈಕೆ ಮಾಡಿ ಜೋಪಾನ ಮಾಡಿದ್ದರು ಕೂಡ. ಆದರೆ ಸಂಗೀತ ಹಾಡಲು ಕುಳಿತರೆ, ಯಾವ ನೋವನ್ನೂ ಅನುಭವಿಸ ದಂತೆ ಇದ್ದು, ಈ ಲೋಕವನ್ನೇ ಮರೆತು ಕಣ್ಣುಮುಚ್ಚಿ, ಲೀಲಾಜಾಲವಾಗಿ ಹಾಡುತ್ತಿದ್ದರೆ ಅದರ ಆನಂದವೇ ಬೇರೆಯಾಗಿರುತ್ತಿತ್ತು. ಅಲ್ಲದೆ ಎಲ್ಲರನ್ನೂ ಬೆರಗುಗೊಳಿಸುವಂತಹುದಾಗಿತ್ತು. ಹಾಡಿದ ನಂತರ ಮತ್ತೆ ಹೊಟ್ಟೆ ಹಿಡಿದು ಕೂರುತ್ತಿದ್ದುದು ಈಗಲೂ ಜ್ಞಾಪಕವಿದೆ.

ದಿನಗಳೆದಂತೆ ವಯಸ್ಸು, ಮನಸ್ಸು ಪಕ್ವವಾದಂತೆ ಸಂಗೀತದಲ್ಲಿ ಗಟ್ಟಿ

ಎನಿಸಿದಾಗ, ಅಕ್ಕನ ರಚನೆಗಳು ಒಂದೊಂದಾಗಿ ಹೊರಬಂದವು. ಆ ದಿನಗಳಲ್ಲಿ ಆಧ್ಯಾತ್ಮಿಕ ಹಾಗೂ ದಾರ್ಶನಿಕ ವ್ಯಕ್ತಿ ಎನಿಸಿದ್ದ ದಿವಂಗತ ಶ್ರೀ ಯು. ಜಿ. ಕೃಷ್ಣಮೂರ್ತಿಯವರೂ ಕೂಡ ಅಕ್ಕನ ಸಂಗೀತವನ್ನು ಆಗಾಗ್ಗೆ ಕರೆಸಿ ಕೇಳಿ ಆನಂದಪಡುತ್ತಿದ್ದು, ಹೆಚ್ಚಿನ ಸಂಗೀತ ರಚನೆಗಳಿಗೆ ಪ್ರೇರಣೆಯಾದವು.

ಅವುಗಳಲ್ಲಿ ಮುಖ್ಯವಾದವು—ಆನಂದನರ್ತನ ಗಣಪತಿಂ, ಗಾನಲೋಲ ಚಾರುಶೀಲ, ದಯಬಾರದೆ ರಂಗ, ಕೃಷ್ಣ ಮುತ್ತುಕೊಡೋ, ಬಾರೋ ಗೋಪಾಲ ಕೃಷ್ಣ, ದೇವೀ ಶ್ರೀಗೌರಿ (ತೆಲುಗು), ಯಾದವ ಕೃಷ್ಣ ಇತ್ಯಾದಿಗಳು.

ಅಕ್ಕನ ಶಾರೀರ ಘನವಿದ್ದು ನಿರ್ದಿಷ್ಟತೆಯಿಂದ ಕೂಡಿತ್ತಾದ್ದರಿಂದ, ಹಾಡುಗಳು ಕೇಳುಗರಿಗೆ ಮತ್ತಷ್ಟು ಕೇಳೋಣವೆನಿಸುವಷ್ಟು ಆಪ್ಯತೆಯನ್ನು ತರುತ್ತಿದ್ದವು. ಜೊತೆಗೆ ನನ್ನ ಮತ್ತೊಬ್ಬ ತಂಗಿ ಗೀತಾ ಕೂಡ ಹಾಡಲು ಸೇರುತ್ತಿದ್ದುದರಿಂದ, ಗಂಟೆಗಟ್ಟಲೆ ಹಾಡುತ್ತ ಕುಳಿತರೆ ಕಾಲದ ಪರಿವೆಯೇ ತಿಳಿಯುತ್ತಿರಲಿಲ್ಲ. ತಂದೆಯವರ ಹಾರ್ಮೋನಿಯಂ, ಸೋದರ ಪ್ರಸಾದನ ಖಂಜರ, ಅಕ್ಕ ಅನ್ನಪೂರ್ಣಳ ತಂಬೂರಿ, ತಾಳಗಳ ನಿನಾದದೊಂದಿಗೆ ಹಾಡು ಪ್ರಾರಂಭವಾದರೆ ಭಜನಾ ಮಂಡಲಿಯಂತೆ ಭಾಸವಾಗುತ್ತಿದ್ದು ರೋಚಕವೆನಿಸುತ್ತದೆ. ಪದಗಳ ಜೋಡಣೆ, ನಾದ ಲಾಲಿತ್ಯವು ಗೀತೆಗಳ ರಾಗ ಸಂಯೋಜನೆಯಲ್ಲಿ ಇರುತ್ತಿದ್ದುದು ವಿಶೇಷ.

ಹಲವಾರು ಗೀತೆಗಳು, ಈ ಪುಸ್ತಕದ ಮೂಲಕ ಹೊರಬರುತ್ತಿರುವುದರಿಂದ ಸಂಗೀತ ಅಭ್ಯಾಸಿಗಳಿಗೆ, ಕಲಾಪ್ರೇಮಿಗಳಿಗೆ ಸಹಾಯಕವಾಗುವುದೆಂದು ನನ್ನ ಅನಿಸಿಕೆ. ಎಷ್ಟೋ ವರ್ಷಗಳು ಜೊತೆಯಲ್ಲಿಯೇ ಹಾಡುತ್ತಿದ್ದುದರಿಂದ ಹೆಚ್ಚಿನ ರೀತಿಯಲ್ಲಿ ಆ ಅನುಭವವನ್ನು ಪಡೆಯಲು ಸಾಧ್ಯವಾಯಿತೆಂದು ಹೇಳಬಹುದು. ಒಟ್ಟಿನಲ್ಲಿ ಭೌತಿಕವಾಗಿ ಮರೆಯಾಗಿದ್ದರೂ, ಮಾನಸಿಕವಾಗಿ ಅಕ್ಕ ಅಚ್ಚಳಿಯದೆ ಉಳಿದಿರುವುದು ನಮ್ಮ ಭಾಗ್ಯ. ಆಕೆಯ ಆಶೀರ್ವಾದ ಹಾರೈಕೆಗಳು ಸದಾ ಇರಲೆಂದು ಆಶಿಸುತ್ತೇನೆ.

ದಿನಾಂಕ: 8-11-2012 —ಪ್ರೊ॥ ಕೆ. ಆರ್. ವಿಜಯಲಕ್ಷ್ಮಿ

ನುಡಿನಮನ 3

ನೆನಪಾದಳು ಅಕ್ಕ

ವಾಗೀಶ್ವರಿ ರಾಮಕೃಷ್ಣರ ಕುವರಿ ಕವಯಿತ್ರಿ
ಸಂಗೀತ ಅಧಿದೇವಿ ಸರಸತಿಯ ವರಪುತ್ರಿ
ಸರಿಗಮದ ಸಂಸ್ಕಾರ ನರನಾಡಿಯಲ್ಲಿ
ಸೂಕ್ಷ್ಮ ಕಲಿಕೆಯ ಮುನ್ನಡೆಯು ಸರಿ ಜಾಡಿನಲ್ಲಿ

ತಡೆಯಿಲ್ಲ ಪ್ರಾಸಕ್ಕೆ ಮತಿಗೆ ತೃಣ ತ್ರಾಸಿಲ್ಲ
ಕುಂದಿಲ್ಲ ಛಂದಸ್ಸಿಗೆ ಒಂದಿನಿತು ಕೊರೆಯಿಲ್ಲ
ಅರ್ಥ ತಾತ್ಪರ್ಯ ತನು ಮನಕೆ ತಂಪು
ಸ್ವರ ಧಾರೆ ಧಾರೆ ಕೇಳುಗರ ಕಿವಿಗಿಂಪು

ಕೃತಿಗೆ ಅಂತರ್ಯದ ಭಾವನೆಗಳೇ ಜೀವಾಳ
ಅದಕೆ ಸಾಹಿತ್ಯ ರಾಗ ತಾಳಗಳೇ ಹಿಮ್ಮೇಳ
ಪರಶಿವನ ಅಣಕಿನಲ್ಲೊಂದಿಷ್ಟು ಸರಿ ಸದರ
ಒಂದಷ್ಟು ಸೊಗಸು ಇಂತಿಷ್ಟು ಗಂಭೀರ

ಒಲವು ನಲಿವುಗಳ ನಮ್ಮ ಒಡನಾಟ
ಹಲವು ಸವಿ ನೆನಪುಗಳ ಮೆಲುಕು ರಸದೂಟ
ನಡು ನಡುವೆ ಸಂಗೀತ ಸಾಹಿತ್ಯದೋದ್ಧಾರ
ಸಂತಸದಿ ಬಯಸಿ ಜೀವನ ಸಾಕ್ಷಾತ್ಕಾರ

ಉತ್ತುಂಗ ಶಿಖರಕ್ಕೇರುವ ನೂರೆಂಟು ಆಸೆ
ಅದೃಷ್ಟ ತಂದದ್ದು ಮನ ತುಂಬ ನಿರಾಸೆ
ಬವಣೆ ಸವೆಸುತ್ತ ಸಮಯ ಕಳೆಯುತ್ತ ಸಾಗಿತ್ತು ನೌಕೆ
ಒಮ್ಮೊಮ್ಮೆ ಅನಿಸಿದ್ದು ಈ ಜಂಜಡ ನಿಜಕೂ ಬೇಕೆ

ಮನಸು ದಣಿದಿತ್ತು ಕಾಲ ಕರೆದಿತ್ತು ವಿಧಿ ಹರಡಿ ಅದರ ಜಾಲ
ಬದುಕು ಮುಗಿದಿತ್ತು ಒಂದಷ್ಟು ಬೇಗ ನೋಡದುವೆ ಮಾಯಾಲೀಲ
ದೇಹ ಜಡವಾಗಿ ಜನ್ಮ ಕೊನೆಯಾಗಿ ತೀರಿಸೀ ಜಗದ ಲೆಕ್ಕ
ಮನಸು ಹಗುರಾಗಿ ಆತ್ಮ ಅಲೆಯಾಗಿ ನೆನಪಾದಳು ಪ್ರೀತಿಯ ಅಕ್ಕ

ಒಲವಿನ ತಮ್ಮ

ದಿನಾಂಕ: 25-11-2012 —ಕೆ. ಆರ್. ಶ್ರೀಕಂಠಮೂರ್ತಿ

ನುಡಿನಮನ 4

ನಾ ಕಂಡಂತೆ "ಶೈಲಕ್ಕ"

ಇದ್ದಕ್ಕಿದ್ದ ಹಾಗೆ ಒಂದು ರಾತ್ರಿ, ಬೆಂಗಳೂರಿನಲ್ಲಿರುವ ನನ್ನ ಅಕ್ಕ ಗೀತ, ಅಮೆರಿಕಾದಲ್ಲಿರುವ ನನಗೆ ಟೆಲಿಫೋನ್ ಕರೆಮಾಡಿ, "ಶೈಲಾಳ ಬಗ್ಗೆ ನಿನ್ನ ಅನಿಸಿಕೆಗಳನ್ನು ಬರೆದು ಕೊಡು, ನಾವು ಅವಳ ಹಾಡುಗಳನ್ನು ಸಂಗ್ರಹಿಸಿ ಪುಸ್ತಕರೂಪದಲ್ಲಿ ಹೊರತರುತ್ತಿದ್ದೀವಿ. ಅವಳ ಒಡಹುಟ್ಟಿದವರ ಒಡನಾಟ-ಅನುಭವಗಳನ್ನು, "ನುಡಿನಮನ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸುತ್ತ ಇದ್ದೀವಿ" ಎಂದು ಹೇಳಿದಾಗ, ತಕ್ಷಣ ನನ್ನ ಮನಸ್ಸಿಗೆ ಬಂದಿದ್ದು, "ಬರೆಯುವಂಥ ಯಾವುದೇ ಪ್ರಸಂಗಗಳು ನನ್ನ-ಅವಳ ನಡುವೆ ಏನು ಜರುಗಿರಲಿಲ್ಲವಲ್ಲ, ಏನು ಬರೆಯುವುದು?" ಎಂದು! ಸುಮಾರು ಹೊತ್ತು ನಮ್ಮ ಸಂಭಾಷಣೆ ಮುಗಿಸಿ, ಹಾಗೆಯೇ ಹಾಸಿಗೆಯಲ್ಲಿ ಮೈ ಚಾಚಿ ಮಲಗಿ ಆಲೋಚಿಸುತ್ತಾ ಕಣ್ಣು ಮುಚ್ಚುತ್ತಿದ್ದಂತೆಯೇ, ಅದಾವುದೋ ಕನಸಿನ ಲೋಕದಲ್ಲಿ ವಿಹರಿಸುತ್ತಿರುವಂತೆ ಭಾಸವಾಗಿ, ನೆನಪಿನಾಳದಿಂದ ನನ್ನ ಬಾಲ್ಯದ ಘಟನೆಯ ಸುರುಳಿಗಳು, ಎಳೆ-ಎಳೆಯಾಗಿ ಬಿಡಿಸಿಕೊಂಡು ಬರತೊಡಗಿದವು.

ಶೈಲಾ ನಮ್ಮೆಲ್ಲರ ಮೆಚ್ಚಿನ ಹಿರಿಯಕ್ಕ. ಮನೆಗೆ ಹಿರೇ ಮಗಳು. ನಾನು? ಕೊನೇ ಮಗಳು! ನಡುವೆ ಆರು ಜನ ಅಣ್ಣ-ತಂಗಿ-ಅಕ್ಕ-ತಮ್ಮಂದಿರು. ಹಾಗಾಗಿ ನನ್ನ-ಶೈಲಾಳ ನಡುವೆ ವಯಸ್ಸಿನ ಅಂತರ ಬಹಳ. ನನಗೆ ಬಾಲ್ಯದಲ್ಲಿ ಅವಳ ಜೊತೆ ಎಲ್ಲಿಗಾದರೂ ಹೋಗಿದ್ದಾಗಲಿ, ಯಾವುದೇ ನಿಗಧಿತವಾದ ಚಟುವಟಿಕೆ ನಡೆಸಿದ್ದಾಗಲಿ ಅಥವಾ ಸಂಭಾಷಣೆ ನೆನಪಾಗಲಿ ಒಂದೂ ಇಲ್ಲ. ನನಗೆ ಬಾಲ್ಯದ ನೆನಪಿರುವುದು ಅವಳು ನಮ್ಮ ತಂದೆಯವರೊಡನೆ ಸಂಗೀತ ಅಭ್ಯಸಿಸುತ್ತಿದ್ದ ದೃಶ್ಯ, ಅವರೊಂದಿಗೆ ಅಲ್ಲಿ-ಇಲ್ಲಿ ಅಕ್ಕಪಕ್ಕದೂರುಗಳಿಗೆ ಸಂಗೀತ ಕಛೇರಿಗಾಗಿ ಹೋಗಿ, ರಾತ್ರಿ ಮನೆಗೆ ಬಂದಾಗ ಅವಳೊಡನೆ ತರುತ್ತಿದ್ದ ಭರ್ಜರಿ ಶಾಲು-ಸನ್ಮಾನಗಳು, ಹಾರಗಳು—ಅದನ್ನು ಕಂಡು ಹೆಮ್ಮೆಯಿಂದ ಸಂತೋಷಪಡುತ್ತಿದ್ದ ಅಮ್ಮ-ಅಕ್ಕ-ಅಣ್ಣಂದಿರು. ಆಗ ಚಿಕ್ಕಹುಡುಗಿಯಾಗಿದ್ದ ನಾನು ಆ ಹಾರಗಳನ್ನು ಅವಳ ಕೈಯಿಂದ ಕಿತ್ತು ಕೊರಳಿಗೆ ಹಾಕಿಕೊಂಡು ನಲಿಯುತ್ತಾ ಇದ್ದಿದ್ದು ನೆನೆಪಿಗೆ ಬರುತ್ತದೆ. ಹಾಸನದಲ್ಲಿ ಹುಟ್ಟಿದ್ದ ನಾನು ಏಳೋ-ಎಂಟೋ ವರ್ಷದ ಹುಡುಗಿ ಯಾಗಿದ್ದಾಗಲೇ, ಮನೆಯಲ್ಲಿ ಶೈಲಳ ಮದುವೆ ಸಂಭ್ರಮವೂ ಮುಗಿದು, ಅವಳು ಭಾವನೊಡನೆ ಬೆಂಗಳೂರಿಗೆ ಹೊರಟಾಗಿತ್ತು!

ಕಾಲ ಚಕ್ರ ಉರುಳಿದಂತೆ, ನಾವೆಲ್ಲರೂ ಸಹ ಬೆಂಗಳೂರಿಗೇ ಬಂದು ನೆಲಸಿದ ಮೇಲೆ, ನಮ್ಮ ಬಾಂಧವ್ಯವೂ ಬಲಗೊಂಡಿತ್ತು. ಚಿಕ್ಕಂದಿನಿಂದಲೂ ಅವಳ ಸಂಗೀತವೆಂದರೆ ಮನೆಮಂದಿಗೆಲ್ಲ ಒಲವು, ಒಂದು ರೀತಿಯಲ್ಲಿ, ಹೆಗ್ಗಳಿಕೆ. ಅವಳು ಹಾಡಲು ಕುಳಿತಳೆಂದರೆ ಸಾಕು, ಆ ರಾಗದ ವಿಸ್ತಾರ, ಹಾಡುವ ಧಾಟಿ, ಸುಲಲಿತವಾಗಿ ಹೊರಡುವ ಪಲುಕುಗಳು, ಎಡೆ-ತಡೆ ಇಲ್ಲದೇ ಹೊರಹೊಮ್ಮುವ ಸ್ವರಗಳು ಎಲ್ಲವೂ ಅವಳ ಸಂಗೀತ ಪ್ರೌಢಿಮೆಯನ್ನು ಸಾರಿಹೇಳುತ್ತಿದ್ದವು. ನಮ್ಮ ಮನೆಯಲ್ಲಿ ತಂದೆ ತಾಯಿ, ಅಕ್ಕ-ಅಣ್ಣ ಎಲ್ಲರೂ ಸಂಗೀತಪ್ರಿಯರು, ಹಾಗೂ ಕಲಾವಿದರು. ಸಂಗೀತ ಕಛೇರಿಗೆ ಬೇಕಾದ ಪಕ್ಕವಾದ್ಯಗಳಿಗೂ ಹೊರಗಿನವರು ಯಾರೂ ಬೇಕಿರಲಿಲ್ಲ! ಅಪ್ಪ ಹಾರ್ಮೋನಿಯಂ, ಅಣ್ಣ ಮೃದಂಗ, ಖಂಡರ ಹಿಡಿದು ಕೂತರೆ, ಅಮ್ಮ-ಅಕ್ಕ-ತಂಗಿಯರೆಲ್ಲ ಹಾಡಿನ ಹೊಳೆಯನ್ನೇ ಹರಿಸುತ್ತಿದ್ದೆವು. ಊರಿನಿಂದ ನೆಂಟರಿಷ್ಟರು, ಬಂಧು-ಮಿತ್ರರು ಬಂದರೆಂದರೆ ಸಾಕು, ಮನೆಯಲ್ಲಿ ಸಂಗೀತದ ರಸದೌತಣವೇ ಆಗುತ್ತಿತ್ತು. ಅದಕ್ಕೆ ಸರಿಯಾಗಿ ನಮ್ಮ ಬಂಧು-ಬಳಗದವರಿಗೆಲ್ಲರಿಗೂ ಸಹ ಸಂಗೀತವೆಂದರೆ ಪಂಚ-ಪ್ರಾಣ. ಎಲ್ಲರೂ ತನ್ಮಯರಾಗಿ ಹಗಲು-ರಾತ್ರಿ ಎಲ್ಲಾ ಮರೆತು ಸಂಗೀತ ಲೋಕದಲ್ಲಿ ಮುಳುಗಿಹೋಗುತ್ತಿದ್ದೆವು. ಕೆಲವೊಮ್ಮೆ ಅಪ್ಪ ಹರಿಕಥೆಯನ್ನೂ ಪ್ರಾರಂಭಿಸಿದರೆಂದರೆ, ಮುಗಿಯಿತು! ಆ ಉಪಕಥೆಗಳು, ಮಟ್ಟುಗಳ ಚಮತ್ಕಾರವನ್ನು ಎಲ್ಲರೂ ನೆಟ್ಟಕಣ್ಣು-ಬಿಟ್ಟಬಾಯಿಗಳಿಂದ ಅನುಭವಿಸುವುದರಲ್ಲಿ ಇರುಳು ಕಳೆದು, ಬೆಳಕು ಹರಿಯುವುದೇ ತಿಳಿಯುತ್ತಿರಲಿಲ್ಲ. ಅಮ್ಮ ಹೇಳುತ್ತಿದ್ದ ಗಾದೆ ನೆನಪಿಗೆ ಬರುತ್ತಿದೆ. "ಹಾಡು ಹರೀತು (ಹರಿಯಿತು) ಮಸುಕು ಸರೀತು (ಸರಿಯಿತು)".

ಇದೆಲ್ಲಕ್ಕೂ ಪುಷ್ಟಿ ಕೊಡುತ್ತಿದ್ದ ಇನ್ನೊಂದು ಅಂಶವೆಂದರೆ, ಅವಳ ಕೃತಿ-ಕವನಗಳನ್ನು ರಚಿಸುವ ಸಾಮರ್ಥ್ಯ. ಶೈಲಳ ಆ ಉನ್ನತಮಟ್ಟದ ಸಾಹಿತ್ಯದ ಶೈಲಿ ಎಲ್ಲರಿಗೂ ಒದಗಿಬರುವ ವರವಲ್ಲ. ಆ ರಚನೆಗಳಲ್ಲಿನ ಸೊಗಸಾದ ಸಾಹಿತ್ಯ, ಉತ್ತಮ ಪ್ರಾಸದ ಜೊತೆಗೆ ಕಂಡುಬರುವ ಭಾವಗಳು ಹಲವಾರು. ಲಘುಹಾಸ್ಯ, ವಿನೋದಗಳುಳ್ಳ ಕವನಗಳಿಂದ ಮೊದಲುಗೊಂಡು, ತಾಯಿಯ ಮಮತೆ, ಪ್ರೀತಿ, ದೈನ್ಯತೆ, ಪರಮಭಕ್ತಿಯನ್ನು ಸಾರುವ ಸಾಹಿತ್ಯವಷ್ಟೇ ಅಲ್ಲದೆ, ಗಂಭೀರ ಜೀವನತತ್ತ್ವ, ಅಧ್ಯಾತ್ಮ ವಿಚಾರಗಳನ್ನೊಳಗೊಂಡ ದಾಸಸಾಹಿತ್ಯಕ್ಕೆ ಸರಿ-ಸಾಟಿಯಾದ ರಚನೆಗಳೂ ಹಲವಾರು! ಕೆಲವು ಸಂದರ್ಭೋಚಿತ ಕವನಗಳನ್ನಂತು ಕ್ಷಣಾರ್ಧದಲ್ಲಿ ಸ್ವರಸಾಹಿತ್ಯಸಮೇತವಾಗಿ ರಚಿಸಿ, ನಿಂತ-ನಿಂತಲ್ಲೇ ಹಾಡಿ ನಿದರ್ಶಿಸುತ್ತಿದ್ದ ಅವಳ ಚಾತುರ್ಯ ಎಂಥವರನ್ನು ದಂಗುಬಡಿಸುತ್ತಿತ್ತು. ಅವಳಿಗೆ ಸಂಗೀತವೇ ಜೀವಾಳ. ಹೊರಗೆ ದುಡಿಯುವ ಹೆಣ್ಣಾಗಿ, ಎರಡು ಹೆಣ್ಣು

ಮಕ್ಕಳ ಮಮತೆಯ ತಾಯಿಯಾಗಿ ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಬಂದಿದ್ದಳು. ವಿವಾಹಜೀವನ ಪರ್ಯಂತ ಅವಳಿಗೆ ಪ್ರೀತಿ-ಸಹಕಾರಗಳನ್ನು ಇತ್ತು ಅವಳ ಕಲೆಯನ್ನು ಗೌರವಿಸಿ ಉತ್ತೇಜಿಸಿಕೊಂಡು ಬಂದ ಕೀರ್ತಿ ಭಾವನಿಗೆ ಸಲ್ಲಬೇಕಾದ್ದೆ. ಇಷ್ಟೆಲ್ಲಾ ವಿದ್ಯೆ, ಸಂಗೀತ-ಸಾಹಿತ್ಯಗಳ ಸಂಪತ್ತಿದ್ದರೂ, ಜನಪ್ರಿಯ ಕಲಾವಿದೆಯಾಗಿ ಪ್ರಕಾಶಮಾನಕ್ಕೆ ಬರುವ ತೀವ್ರ ಬಯಕೆಯಾಗಲಿ, ಅದಕ್ಕೆ ಬೇಕಾದ ಪ್ರಯತ್ನಗಳನ್ನಾಗಲಿ ಮಾಡಿದ ಯಾವುದೇ ನೆನಪಿಲ್ಲ. ಒಮ್ಮೆ ಬೆಂಗಳೂರು ಆಕಾಶವಾಣಿಯಲ್ಲಿ ಕಲೆಗೆ ಅವಕಾಶ ಸಿಗದೆ, ಬೇಸರಗೊಂಡಿರು ವಾಗಲೇ, ಮದ್ರಾಸ್ (ಈಗಿನ ಚೆನ್ನೈ) ಆಕಾಶವಾಣಿಯು ಆದರಿಸಿ ಅವಳ ಕಲೆಗೆ ಪ್ರೋತ್ಸಾಹ ನೀಡಿದ್ದು ನಿಜಕ್ಕೂ ಶ್ಲಾಘನೀಯ.

ಅವಳ ಸ್ವಂತ ರಚನೆಗಳು ಕನ್ನಡಕಷ್ಟೇ ಸೀಮಿತವಾಗಿಲ್ಲದೆ, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿಯೂ ಸಹ ಹಲವಾರು ಕೃತಿಗಳು ರಚಿಸಲ್ಪಟ್ಟಿವೆ. ತೆಲುಗಿ ನಲ್ಲಿರುವ ಚಕ್ರರೂಪಿರಾಗದ "ದೇವಿ ಶ್ರೀಗೌರಿ" ನನಗೆ ಅತ್ಯಂತ ಪ್ರಿಯವಾದ ಮೆಚ್ಚಿನ ಕೃತಿ. ನಾನು ಅದನ್ನು ಇಲ್ಲಿ ಅಮೆರಿಕಾ ದೇಶದಲ್ಲೂ ಪೂರ್ವದಿಂದ-ಪಶ್ಚಿಮತೀರದವರೆಗೂ, ಹಲವಾರು ದೇವಸ್ಥಾನಗಳಲ್ಲಿ, ಇತರ ಕಾರ್ಯಕ್ರಮ ಗಳಲ್ಲಿ ಹಾಡಿದ್ದೇನೆ, ಹಾಡುತ್ತಲೇ ಇದ್ದೇನೆ. ಪ್ರೇಕ್ಷಕರು ಆ ಸಾಹಿತ್ಯ-ಸಂಗೀತದ ಆಳವನ್ನು ಗಮನಿಸಿ, "ಇದು ಯಾರ ರಚನೆ? ಇಷ್ಟೊಂದು ಚೆನ್ನಾಗಿದೆ" ಎಂದು ಹೊಗಳಿ ಕೇಳಿದಾಗ, "ಇದು ನಮ್ಮ ಅಕ್ಕನ ಸ್ವಂತ ರಚನೆ" ಎಂದು ಹೆಮ್ಮೆಯಿಂದ ಹೇಳಿ, ಮನಸ್ಸಿನಲ್ಲೇ ಅವಳಿಗೆ ನಮಸ್ಕರಿಸಿ, ಖುಷಿಪಟ್ಟಿದ್ದೇನೆ. ಇಂದು ಅವಳು ಆಕಸ್ಮಿಕವಾಗಿ ನಮ್ಮನ್ನೆಲ್ಲ ಅಗಲಿ ಇಹಲೋಕ ತ್ಯಜಿಸಿದ್ದರೂ, ಅವಳ ಅಗಮ್ಯ ಕಲೆ, ಸಂಗೀತ-ಸಾಹಿತ್ಯ ಇವತ್ತಿಗೂ ಕೇಳುಗರ ಮೆಚ್ಚುಗೆ, ಪ್ರಶಂಸೆಗಳಿಂದ ಜೀವಂತ ವಾಗಿದೆ ಎನ್ನಿಸುತ್ತಿದೆ. ಅಕ್ಕ ನಮ್ಮ ಹೃದಯದಲ್ಲಿ, ನೆನಪಿನಲ್ಲಿ ಚಿರವಾಗಿ ನೆಲಸಿ, ಸದಾಕಾಲ ಅವಳ ಆಶೀರ್ವಾದ ನಮಗೆ ರಕ್ಷೆಯಾಗಲೆಂದು ಆಶಿಸುತ್ತೇನೆ. ಅವಳ ಕೃತಿಗಳನ್ನು ಮುದ್ರಣ ರೂಪದಲ್ಲಿ ಹೊರತಂದು ಇತರ ಸಂಗೀತ ಪ್ರಿಯರಿಗೆ ಲಭ್ಯಗೊಳಿಸುತ್ತಿರುವ ಈ ಪ್ರಯತ್ನ ನಿಜಕ್ಕೂ ಬಹಳ ಸಂತೋಷ ತಂದಿದೆ.

ದಿನಾಂಕ: 30-11-2012

ವೀಣಾ ಅನಂತಕೃಷ್ಣ

ಲಾಸ್ ಏಂಜಲೀಸ್, ಯು.ಎಸ್.ಎ.

ನುಡಿನಮನ 5

A Humble Tribute to A Great Soul

My Amma Shylaja

My Guru, my friend, my hero, my spiritual guide

I am very small person to describe the vastness of the knowledge that is hidden in my mother's compositions. She was very versatile in her expression of her devotional feelings towards the supreme lord. She has composed various songs in Telugu, Kannada and Sanskrit. In each of these languages, we can see, observe and study the intensity and depth of her spiritual awareness that she had absorbed in her heart from her journey through infinite lives.

Her compositions clearly shows her inner eagerness and she truly wanted to achieve oneness with God.

She used to tell me, "I am not going to be impressed if you build a big house or have cars or have jewels, sarees, etc., all these are materialistic things. What defines you in real is your urge to attain the Soul. She said, show me character, that's what is most important." As a young child, I liked everything she said, as she was my world! But now I realize the deep meaning and the truth behind her words.

My mother was blessed with an exceptional gift, the gift of music. She had an innate ability to compose the songs in such perfection, that the words seem to flow effortlessly and in great rhyme. Her words flowed from her experiences expressed with a deep sense of under-

standing. This gave her a tremendous capacity to compose in various styles. These lyrics and the tunes that she selected, was always spontaneous and gave the songs its highest intended emotions.

These emotions ranged from love (*prema*), devotion (*bhaktibhāva*), viraha (the pain of separation from God) and the eagerness, longingness to be with God, also a fun and playful attitude towards the Lord who was in her heart.

She also had a gift to compose songs in its entirety. The entire song would flow spontaneously with beautiful and exact metaphors in perfect rhythm. The string of words joined together as a beautiful string of pearls, in one writing. There was no pause once her heart started singing! Her voice was magnetic. Due to her strong Carnatic classical music background, these compositions came alive in her own voice. It had the power in it to stir the deepest and most sincere emotions in the listener.

She did wish many times that lot of people should benefit from this. But her karmic evidences were not strong enough for this to reach many people during her life time. However, the beauty and grandeur of these original compositions will be treasured for a long time....because I believe, she is forever alive in these offerings. She is my best friend, my first Guru, my Amma. My highest bhaktipūrvaka namaskāras to my mother Shylaja and the Lord residing within HER!

Date: 16-11-2012 **—Lalitha Iswar**

ನುಡಿನಮನ 6

A Tribute to my Mother

I would consider myself very fortunate for being born to her as a child. She was no ordinary person but a person who was trying to search for her true "Self". By "Self" I mean "Who am I" in spirituality. Her inquisitiveness to learn about her own self and bhakti towards God has brought forth lot of songs and music. Each and every song she has composed has touched my soul as well as the other listeners.

She was a goal oriented person and not concerned about fame. She was never inclined towards "sansar" although being in it. She was influenced by great spiritual masters like Sri U. G. Krishnamurthy and Sri Ramakrishna Paramahamsa. She would grasp their teachings and would spend time in analysing it in her own self. She spent lot of time listening to Sri U. G. Krishnamurthy about his experience of being a "Self" realised person. All these would churn inside her and come out in the form of compositions.

As children (I and my sister) she nurtured as with her songs of bhakti and guided us on the path of spirituality. She was a great devotee of Shri Chowdeshwari Devi and composed lot of songs on her. We would sing these songs everyday and do the aarati to all Gods.

She had a broad vision and could accept other people as her own. She helped and obliged many people while working as a postmaster.

I deeply regret her absence here today. May her soul rest in peace.

Date: 25-11-2012 **—Savita Agrahara**

ನುಡಿನಮನ 7

ಮರಳಿ ಗೂಡಿಗೆ

ಬಂದಿತೊಂದು ಹಕ್ಕಿ "ಶೈಲಜ" ಎಂಬ ಹೆಸರಿನಲ್ಲಿ
ವಾಗೀಶ್ವರಿ-ರಾಮಕೃಷ್ಣ ಗರ್ಭಾಂಬುಧಿಯಲ್ಲಿ ಹಿರಿಯಕ್ಕನಾಗಿ
ತನ್ನೆಲ್ಲ ಕಿರಿಯರಿಗೆನಿಂತಿತು ಬೆಂಬಲವಾಗಿ
ಪಡೆದಿತು ಸಂಗೀತ ಜ್ಞಾನವನು ತನ್ನ ತಂದೆಯೇ ಗುರುವಾಗಿ,
ಸವೆಸಿತು ದಾಂಪತ್ಯವ ಶ್ರೀಕಂಠಯ್ಯನೇ ಪತಿಯಾಗಿ, ಸಖನಾಗಿ
ಹೊಂದಿತು ಸಾರ್ಥಕ್ಯವ ಲಲಿತ ಸವಿತರೆಂಬ ಗುಣಪೂರ್ಣ ಮಕ್ಕಳಿಗೆ
ತೂಗಿ ತೋರಿತು ಪ್ರೀತಿಯನು ಹಾಡಿನಿಂದಲೇ
ತನ್ನ ಒಡಹುಟ್ಟಿದವರ ಮಕ್ಕಳಿಗಾಗಿ ಹಂಚಿತು
ಪ್ರೀತಿಪೂರ್ವಕ ಗಾನಸುಧೆಯನು ತನ್ನೆಲ್ಲ ಬಂಧು ಬಳಗಕ್ಕೆ

'ನಾಕೆಂತೋ ಸಂತೋಷಂ' ಎಂದು 'ಈ ಭಜನಾನಂದವ' ಅನುಭವಿಸುತ್ತ
'ದೇವಿ ಶ್ರೀಗೌರಿ'ಯನು ಚಕ್ರರೂಪಿ ರಾಗದಲ್ಲಿ ಒಲಿಸಿಕೊಂಡು
'ಭಕ್ತಿಗೀತ ಧಾರೆ'ಯನೆ ಆ ಚೌಡೇಶ್ವರಿಗೆ ಅರ್ಪಿಸಿ
'ಯಾದವ ಕೃಷ್ಣ ಏಕೆ ಮೌನಿಯಾದೆಯೋ' ಎಂದು
ಲೌಕಿಕ-ಆಧ್ಯಾತ್ಮಿಕ ಪೂರ್ಣತೆಗೆ ಹಲುಬುತ್ತಾ
'ಷೋಡಶೋಪಚಾರ ಪೂಜೆ, ಗಂಟೆ ಜಾಗಟೆ ಮಂತ್ರಗಳ ಗೊಡವೆಯನು
ಆ ಭಗವಂತನಿಗೇ ಪ್ರಶ್ನಿಸುತ್ತ
"ಸ್ವಂತಬಲವನ್ನು ನೀನು ಕೊಡದಿದ್ದರೂ
ನಾದಬಲದಿಂದಲೇ ನಿನ್ನ ನಾನು ಹೊಗಳುವೆ" ಎಂದು ನಿಂದಾ ಸ್ತುತಿಮಾಡುತ್ತಾ
ಆ ಭಗವಂತನಿಗೇ ಸಡ್ಡು ಹೊಡೆದು
ಮರಳಿ ಗೂಡಿಗೆ ಹಾರಿತು ಹಾಡುಹಕ್ಕಿಯೊಂದು
ಬಿಟ್ಟು ನಮ್ಮೆಲ್ಲರಿಗೆ ಅಜರಾಮರ ಗಾನದಿಂಪಿನಿದು
ಮತ್ತೆ ಮತ್ತೆ ನೆನಪಿಸುತ್ತ ಭಗವದ್ಭಕ್ತಿಯೇ ಶಕ್ತಿಯೆಂದು, ಮುಕ್ತಿಯೆಂದು.

— ಎಸ್. ವಿ. ಜಗದೀಶ್
(ಜಗ್ಗಿ)

ಹಾಡುಗಳ ಪಟ್ಟಿ

ಗಣಪತಿ

ಕೃಷ್ಣ

* ಈ ಗೀತೆಗಳು ಧ್ವನಿಮುದ್ರಿಕೆಗಳಲ್ಲಿ ಲಭ್ಯವಿದೆ.

ರಾಮ

ಶಿವ

ಶ್ರೀಸುಬ್ರಹ್ಮಣ್ಯಸ್ವಾಮಿ

ಶ್ರೀರಾಘವೇಂದ್ರ ಸ್ವಾಮಿ

ಆಂಜನೇಯಸ್ವಾಮಿ

ಶ್ರೀದೇವೀಸ್ತುತಿ

ಶ್ರೀ ಚೌಡೇಶ್ವರೀದೇವಿ ಗೀತೆಗಳು

ವಿವಿಧ ಗೀತೆಗಳು

ಶ್ಲೋಕಗಳು

ತೆಲುಗು ರಚನೆಗಳು

ಕೆಲವು ಕೃತಿಗಳ ಸ್ವರಪ್ರಸ್ತಾರ

೧. ವಿಘ್ನರಾಜನಿಗೊಂದು ಕುಸುಮ

(ನವಸಂಖ್ಯಾರ್ಥ ಮಾಲಿಕಾಗೀತ)

ರಾಗ: ಆಹಿರ್ ಭೈರವ್ ತಾಳ: ಆದಿ

ವಿಘ್ನರಾಜನಿಗೊಂದು ಕುಸುಮ ನಾನರ್ಪಿಸುವೆ॥ ॥ಪ॥

ವಿಘ್ನವಿರದ ಭಗ್ನವಾಗದ
ಶುದ್ಧಮನವನೊಂದನು ಬೇಡುವೆ॥ ॥ಅ. ಪ.॥

ಎರಡು ಜೋಡಿ ಗರಿಕೆಹುಲ್ಲ
ಚರಣಕಿಟ್ಟು ನಮಿಸುವೆ।
ಗರುಡಗಮನನ ತೋರೊ ಎಂದು
ಎರಡುಕೈ ಜೋಡಿಸಿ ನಾ ನಿಲ್ಲುವೆ॥ ೧

ಮೂರೆಳೆಯ ಜನ್ನಿದಾರವನಿಕ್ಕುತ
ಮೂರು ಪಟ್ಟೆ ವಿಭೂತಿ ಪೂಸುತ।
ಮೂರು ಕಣ್ಣವನಾ ಸುತನೇ ಎನ್ನ।
ಮೂರು ಗುಣಗಳ ಮರ್ದಿಸೆನುವೆ॥ ೨

ನಾಲ್ಕು ವೇದಗಳ ನಾನರಿಯೆ।
ನಾಲ್ಕು ಭೇದೋಪಾಯವನರಿಯೆ।
ಹಾಲ್ಗಡಲಾತನ ಕಾಣಲೆನಗೆ ನಿನ್ನ।
ನಾಲ್ಕಕ್ಷರವನಿತ್ತು ಪೊರೆ ಎಂದೆನುವೆ॥ ೩

ಐದು ಮೊಗದವನ ಮಗನಿಗೆ ನಾ-
ನೈದು ರೀತಿಯಲುಪಚರಿಸುತಲಿ
ಐದು ಪ್ರಾಣಗಳೈದು ಇಂದ್ರಿಯದಿ।
ಗೈದ ಪಾಪವ ತೊಳೆಯೆಂದೆನುವೆ ೪

ಆರು ರಸರುಚಿ ಸಾರ ಸಹಿತ
ಖೀರು ಊಟವ ನಾ ಮಾಡಿಸುತ।
ಆರು ಮೊಗದವನ ಸೋದರನೇ ಎ-
ನ್ನಾರು ಶತ್ರುಗಳ ಓಡಿಸೆನುವೆ॥ ೫

ಏಳು ಧಾತುವಿನಿಂದಾದ ಈ ದೇಹದ-
ಲೇಳು ಸ್ವರದ ನಾದದ ಮೋದ।
ಪೇಳೋ ಇಟ್ಟವನೆಲ್ಲಿಹನೆಂದು।
ಕೇಳುತಲೇಳು ಸ್ವರವಾ ಪಾಡುವೆ॥ ೬

ಎಂಟುದಳದ ಹೂವನು ತಂದು ನೂ-
ರೆಂಟು ನಾಮದ ಪೂಜೆಯ ಮಾಡಿ।
ಎಂಟು ಮದವನೆ ದಾಂಟಿ ನಿಂತ
ಎಂಟಕ್ಷರದ ಮಹಿಮೇ ಏನೆನುವೆ॥ ೭

ಒಂಬತ್ತು ರತ್ನವ ಧರಿಸುವ ಮೋಹದ
ಒಂಬತ್ತು ಬಾಗಿಲ ಮನೆ ಈ ದೇಹದ।
ಕೊಂಬೆತ್ತಿ ಕುಣಿವ ಗರ್ವವ ಕಳೆದು
ಒಂಬತ್ತು ವಿಧದ ಭಕ್ತಿಯ ಬೇಡುವೆ॥ ೮

ಶೈಲಜಾಸುತ ವಿನಾಯಕಗೆ ಈ
ಶೈಲಜಾನುತ ವಿಘ್ನೇಶ್ವರಗೆ ನಾ
ಲೀಲೆಯಿಂದ್ಹೆಣೆದ ಒಂದರಿಂದೊಂಬತ್ತು
ಮಾಲೆಯ ಭಾಗ್ಯವಿದೆಂತಹುದೆನುವೆ॥ ೯

---

೨. ಆನಂದನರ್ತನಗಣಪತಿ

ರಾಗಃ ನಾಟ **ತಾಳಃ ಆದಿ**

ಆನಂದ ನರ್ತನ ಗಣಪತೀಂ ತ್ವಾಂ ಭಾವಯೇ॥ ॥ಪ॥

ಸಾನಂದ ಸಾಮ್ರಾಜ್ಯಮನುಗತ।
ಆನಂದಾಮೃತಮನುಭಾವಯೇ॥ ॥ಅ.ಪ.॥

ಮಂದಗಮನ ಗಜವದನ ರಿಪುದಮನ।
ಚಂದ್ರಶಾಪಮೋಚನ ಪಾಪಶಮನ।
ಇಂದುಧರ ನಂದನ ವಿಘ್ನವಾರಣ।
ಇಂದ್ರಾದಿ ದೇವಗಣನುತಚರಣ॥ ೧

ಗಂಗಾಧರಸುತ ಸದಾಮುದಿತ।
ಶೃಂಗಾರ ರಕ್ತಾಂಬರ ಭೂಷಿತ।
ಸಂಗೀತ ಗಾನಕಲಾಸೇವಿತ।
ಮಂಗಳಕರ ಕಾರ್ಯಪೂರ್ವಪೂಜಿತ॥ ೨

ಶೈಲೇಂದ್ರ ಕೌಮಾರಿ ತನಯ ಹೇ।
ಶೈಲೇಂದ್ರ ಪೌತ್ರ ತವಪದಾಯ।
ಶೈಲಜಾನಾಮ ಅಹಂ ಅಭಿವಾದಯೇ।
ಶೈಲಹೃದಯ ಮಾ ಅವಧಾರಯ॥ ೩

---

೩. ಗಂ ಗಣಪತಿ ನಿನ್ನ

ರಾಗ: ಹಂಸಧ್ವನಿ ತಾಳ: ಆದಿ

ಗಂ ಗಣಪತಿ ನಿನ್ನ ಗಾಂಭೀರ್ಯ ಚೆನ್ನ।
ಗಂ ಗಂ ಗಕಾರ ಬೀಜಾಕ್ಷರ ಸುಪ್ರಸನ್ನ॥ ॥ಪ॥

ಗಂಗಾಧರ ಸುತನೇ ಗಾಂಗೇಯ ರಾಜ।
ಅಂಗಜ ಜನಕಾದಿ ಸುರಸಂಪೂಜ್ಯ॥
ಮಂಗಳಕಾರ್ಯ ಪೂರ್ವಪೂಜಿತ ವಿಘ್ನರಾಜ।
ಸಂಗೀತಲೋಲ ಸದ್‌ವಿದ್ಯಾತೇಜ॥ ೧

ಗಣಪತ್ಯಥರ್ವ ಶೀರ್ಷವ ಪ್ರತಿದಿನ ಪಠಿಸುವವ।
ಗಣಪತಿ ದ್ವಾದಶ ನಾಮವ ಪಾಡುವವ॥
ತೃಣದ ದೂರುವೆ ಗಣಪತಿಗೆ ತಾ ನೀಡುವವ।
ಗುಣ-ಹೀನನಾದರೂ ನಿನ್ನ ಗಣನೆಗೆ ಸೇರುವ॥ ೨

ಲಂಬೋದರ ಮಹಾಕಾಯ ಮೂಷಕವಾಹನ।
ಅಂಬಾಸುತ ಈ ಶೈಲಜಾನುತ ನಿನ್ನ॥
ನಂಬಿಹೆನಯ್ಯ ಹೇರಂಭ ಗಜಾನನ।
ಹಿಂಬಾಲಿಸುವ ನಿಮ್ಮ ಸರ್ವವಿಘ್ನವಾರಣ॥ ೩

೪. ಕರುಣಿಸೈ ಗಣಾಧಿಪ

ರಾಗ: ಮೋಹನ ತಾಳ: ತ್ರಿಶ್ರನಡೆ-ಆದಿ

ಕರುಣಿಸೈ ಗಣಾಧಿಪ। ಭಜಿಪೆ ನಿಮ್ಮ ಪಾದವ॥
ಶರಣರನ್ನು ಪೊರೆಯುವ। ಪ್ರಥಮಪೂಜ್ಯ ವೈಭವ॥ ॥ಪ॥

ವಿಘ್ನಗಳ ನಿವಾರಿಸಿ। ಸುಯಜ್ಞಗಳ ಕೈಗೂಡಿಸಿ॥
ಭಗ್ನಮನವ ಸಂತೈಸಿ। ಮಗ್ನಗೊಳಿಸು ಭಕ್ತಿಯಿರಿಸಿ॥ ೧

ವಿದ್ಯಾಬುದ್ಧಿದಾಯಕ। ಹಸ್ತದಲ್ಲಿ ಮೋದಕ॥
ಸಿದ್ಧಿ ಶಕ್ತಿ ಪ್ರೇರಕ। ಸುರನರ ಗಣನಾಯಕ॥ ೨

ಇಲಿಯನೇರಿ ಬಂದ ಧೀರ। ಶೂರ್ಪಕರ್ಣ ಮಹಾಶೂರ॥
ಶೈಲಸುತೆಯ ಪ್ರೇಮಕುವರ। ಶೈಲಜೆಯ ನಮಸ್ಕಾರ॥ ೩

---

೫. ಎದ್ದು ಬಾ ಎದ್ದು ಬಾ ಗಣನಾಯಕ

(ಜನಪದ ಧಾಟಿ)

ರಾಗ: ಚಾರುಕೇಶಿ ತಾಳ: ಆದಿ

ಎದ್ದು ಬಾ ಎದ್ದು ಬಾ ಗಣನಾಯಕ ನಿನ್ನ
ನಿದ್ದೇ ಸಾಕೆದ್ದು ಬಾ ಗಣನಾಯಕ।
ಶುದ್ಧವಾದ ನೀರು ನಿನ್ನ ಸ್ನಾನಕ್ಕೆ ಸಿದ್ಧವಿದೆ।
ಸದ್ದು ಗದ್ದಲ ಬೇಡ ಎದ್ದು ಬಾ ವಿನಾಯಕ॥ ॥ಪ॥

ಹಂಡೆ ನೀರು ಸಾಕೆ ಹೊಂಡಕ್ಕೆ ಹೋಗಬೇಕೆ।
ಮಂಡೆ ತೊಳೆಯುವಾಗ ಬಂಡೆ ಇದ್ದೀತು ಜೋಕೆ।
ಕಂಡ ಕಂಡ ಕಡೆ ಓಡಿ ಹೊತ್ತು ಮಾಡಲೇಕೆ ಉ-
ದ್ದಂಡ ನಮಸ್ಕಾರ ನಾ ಹಾಕಲೇ ಬೇಕೆ?॥ ೧

ಎಷ್ಟು ಮೊಳದ ಪಂಚೆ ಬೇಕೋ ಹೇಳೊ ಮಹಾರಾಯ।
ಕಷ್ಟವೆಷ್ಟು ನನಗೆ ತಿಳಿ ನಿನ್ನ ಮಹಾಕಾಯ।
ಅಷ್ಟು ಇಷ್ಟು ಅಳವಲ್ಲ ಎಲ್ಲಿಂದ ತರಲಯ್ಯ?
ನಿಷ್ಠೆಯಿಂದ ಕೊಟ್ಟಷ್ಟೇ ನೀ ಸುತ್ತಿಕೊಳ್ಳಯ್ಯ॥ ೨

ಕೆಂಪುವಸ್ತ್ರ ಬೇಕೆಂದು ಹಠಮಾಡಬೇಡ
ತಂಪಾದ ಶ್ರೀಗಂಧ ತುಂಬ ಇಲ್ಲ ಎನಬೇಡ
ಜೊಂಪೆ ಜೊಂಪೆ ಗರಿಕೆಹುಲ್ಲು ಇಲ್ಲಿದೆ ನೋಡ।
ಸೊಂಪಾದ ಕಬ್ಬಿನ ಜಲ್ಲೆ ತಿನ್ನು ನೀ ಬಿಡಬೇಡ॥ ೩

ಊರು ಜನ ನಿನ್ನ ಕರೆದು ಉಪಚರಿಸುವರು।
ನೂರೆಂಟು ಕರಿಗಡುಬು ಎಳ್ಳುಂಡೆ ನೀಡುವರು।
ಹಾರ ತುರಾಯಿ ಕಟ್ಟಿ ನಿನ್ನ ಮೆರೆಸುವರು।
ಜೋರಾದ ಮದ್ದುಗುಂಡು ಸಂಭ್ರಮದಿ ಸಿಡಿಸುವರು॥ ೪

ನಾರಿ ಶೈಲಜೆ ಎಂದು ಎನ್ನನಿಲ್ಲಿ ಕರೆವರು
ಮೋರೆ ಕಂಡೋರು ನಿನ್ನ ನಾಮ ಪಾಡೆಂಬೋರು।
ಗೌರಿಸುತ ಶೈಲಜಾನುತ ನೀನೆಂಬೋರು
ತೋರಿಸುತ ಕರುಣೆಯಾ ಎನ್ನೊಳಗೇ ನೀನಿರು॥ ೫

---

೬. ಗಜವದನ ಹೇ ಗೌರೀತನಯ

ರಾಗ: ಸೂತ್ರಧಾರಿ **ತಾಳ: ಆದಿ**

ಗಜವದನ ಹೇ ಗೌರೀತನಯ।
ಭಜಿಸುವೆ ನಿನ್ನ ದ್ವಾದಶನಾಮವನಯ್ಯ॥ ॥ಪ॥

ಪ್ರಥಮದಲಿ ನಿನ್ನ ವಕ್ರತುಂಡನೆಂದು ನಾ।
ಪ್ರಾರ್ಥಿಪೆ ಎನ್ನ ಮದವ ಖಂಡಿಸೋ॥
ಅರ್ಥಿಯಿಂ ಬರುವೆ ನಾ ಏಕದಂತನೇ ಎನ್ನ
ಸ್ವಾರ್ಥಮನವ ತೊಳೆದು ಸ್ವಚ್ಛಗೊಳಿಸೋ॥ ೧

ಕೃಷ್ಣ ಪಿಂಗಾಕ್ಷನೆಂದು ಸ್ತುತಿಪೆ ಎನ್ನೆಲ್ಲಾ।
ತೃಷ್ಣೆಯಡಗಿಸೋ ಗಜವಕ್ತ್ರನೇ ನೀ।
ನಿಷ್ಣಾತ ಸಕಲವಿದ್ಯೆಗಳ ಶ್ರೀ-
ಕೃಷ್ಣಪೂಜಿತ ಲಂಬೋದರನೇ॥ ೨

ವಿಕಟ ವಿಘ್ನರಾಜ ಧೂಮ್ರವರ್ಣ ಲಾಲಿಸೋ।
ಮಕುಟಧರ ಫಾಲಚಂದ್ರ ಪಾಲಿಸೋ॥
ಅಕಳಂಕಮಹಿಮ ಹೇ ವಿನಾಯಕ ನಿನಗೆ।
ಮಕರಂದವಿರುವ ಕುಸುಮ ತರುವೆನೋ ಪೂಜೆಗೆ॥ ೩

ಗಣಪತಿಯೆ, ಎನ್ನ ದುರ್ಗುಣಗಳ ಕಳೆದು ಸ-
ದ್ಗುಣ ಸುಜ್ಞಾನ ಸದ್ಭಕ್ತಿ ನೀಡೋ॥
ತೃಣದ ದೂರ್ವೆ ಗಜಾನನ ನಿನ್ನ ಸೇರುವಂತೆ।
ಗಣನೆಗೆನ್ನ ಸೇರಿಸೋ ಶೈಲಜಾನುತನೇ॥ ೪

---

೭. ಕೂಸು ಬಂದಿದೆ ಮನೆಗೆ

ರಾಗ: ಕೀರವಾಣಿ ತಾಳ: ಆದಿ

ಕೂಸು ಬಂದಿದೆ ಮನೆಗೆ ಕೂಸು ಬಂದಿದೆ॥ ॥ಪ॥

ಕಾಸು ಕೋಟಿ ಕೋಟಿ ಕೊಟ್ಟರೂ।
ಏಸು ಜನ್ಮಕೂ ದಕ್ಕದಂತಹ॥ ॥ಅ.ಪ.॥

ಜಗದೊಳು ಪ್ರಥಮಪೂಜೆಗೊಂಬ ತ್ರಿ-
ಜಗವಂದಿತ ತಾನೆಂಬ।
ಬಿಗಿಯ ಬೀಗಿ ನಿಲುವ ಚೆಲುವ।
ಸೊಗಸಿನ ಅಪ್ರಮೇಯ ಕೂಸಿದು॥ ೧

ಮುಖ್ಯದಲಿ ಹನ್ನೆರಡು ನಾಮದ
ವಿಖ್ಯಾತಿ ಗಳಿಸಿ ಲೋಕದೊಳಗೆ।
ಪ್ರಖ್ಯಾತನಾಗಿ ಬ್ರಹ್ಮಾಂಡಕೆಲ್ಲ।
ಸೌಖ್ಯಪ್ರದನು ತಾನೆಂಬ॥ ೨

ಲೋಕಜನನಿ ಗೌರಿಮಾತೆ।
ತೂಕಮಾಡಿ ಸೃಷ್ಟಿಸಿದಂಥ।
ಏಕದಂತನೆಂಬ ಹೆಸರಿನ।
ಈ ಕರುಣಾಮಯಿ ಶೈಲಜಾನುತನೆಂಬ॥ ೩

---

೮. ಶೋಭನೆ ಸುಶೋಭನೆ

ರಾಗ: ವಕುಳಾಭರಣ ತಾಳ: ತಿಶ್ರನಡೆ ಏಕ

ಶೋಭನೆ ಸುಶೋಭನೆ ಶೋಭನೆ ಸುಶೋಭನೆ॥ ॥ಪ॥

ಸಿದ್ಧಿವಿನಾಯಕ ಬುದ್ಧಿಪ್ರದಾಯಕ।
ಶುದ್ಧ ಮನದಿ ನಿನ್ನ ಸೇವಿಸುವೆ ನಾ॥ ೧

ಭಾದ್ರಪದ ಶುದ್ದ। ಚೌತಿಯ ದಿನದಂದು।
ಭದ್ರಾಸನವಿತ್ತು। ಪೂಜಿಸುವೆ ನಾ॥ ೨

ದಧಿಕ್ಷೀರ ಮೊದಲಾದ ಪಂಚಾಮೃತಗಳಿಂದ।
ಮುದದಿ ನಾ ಸ್ನಾನವ ಮಾಡಿಸುವೆ॥ ೩

ಮುಂದೆ ನಾ ಶುದ್ಧೋದಕ ಸ್ನಾನ ಮಾಡಿಸಿ।
ಗಂಧಾಕ್ಷತೆ ಪುಷ್ಪಫಲಗಳನೀವೇ॥ ೪

ಯಜ್ಞೋಪವೀತವ ನಿನಗೆ ತೊಡಿಸುತ್ತ ಎ-।
ನ್ನಜ್ಞಾನವ ಹೋಗಲಾಡಿಸೆಂದೆನುವೇ॥ ೫

ನೇಮದಿಂದಲೆ ನಿನಗೆ ಹರಿದ್ರಾಕುಂಕುಮವಿಡುವೆ।
ನಾಮಾರ್ಚನೆಗೈದು ಪೂಜಿಸುವೆ॥ ೬

ನಾನಾ ಪತ್ರಗಳಿಂದ ನಾನಾ ಪುಷ್ಪಗಳಿಂದ।
ನಾನಾ ವಿಧದಿ ನಾ ಭಜಿಸಿ ಪೂಜಿಸುವೆ॥ ೭

ಚಕ್ಕುಲಿ ತೇಂಗೊಳಲು ಕರಿಗಡಬು ಎಳ್ಳುಂಡೆ।
ಮಿಕ್ಕೆಲ್ಲ ಪುರಿವುಂಡೆ ಎಡೆ ಇಕ್ಕುವೆ॥ ೮

ಚಂದದಿ ನೀ ಬಂದು ಮೋದಕವನೆ ತಿಂದು।
ಮಂದಹಾಸವ ಬೀರೋ ಎನ್ನೆಡೆಗೇ ತಂದೆ॥ ೯

ಮಘ ಮಘಿಪ ಪೂಗೀಫಲ ತಾಂಬೂಲ ಮೆಲ್ಲುತ್ತ।
ಅಘನಾಶನೆ ನೀನು ನಗುನಗುತಾ ನಿಲ್ಲಯ್ಯ॥ ೧೦

ಧೂಪಾರತಿ ಏಕಾರತಿ ಗೈಯುತ್ತ।
ಪಾಪಾ ಹರಗೆ ಮಂಗಳಾರತಿ ಗೈವೇ॥ ೧೧

ಮಂತ್ರಪುಷ್ಪವ ಪಿಡಿದು ಪ್ರದಕ್ಷಿಣೆಗೈವೆ।
ಯಂತ್ರವಾಹಕ ನೀನೆಂದು ನಾ ನಮಿಸುವೆ॥ ೧೨

ವರಗಣೇಶನೆ ನಿನ್ನ ಗುಣಗಳ ಪೊಗಳುವೆ।
ವರಗಳನ್ನಿತ್ತು ನೀ ಕರುಣಿಸೆನ್ನಾ॥ ೧೩

ಅಷ್ಟಸಿದ್ಧಿಗಳೆಂಬ ಇಷ್ಟಾರ್ಥಗಳಿಗಾಗಿ।
ವ್ಯರ್ಥದಿಂದಲಿ ನಿನ್ನ ಬೇಡುವೆನೆನಬೇಡ॥ ೧೪

ಅರ್ಥ ಕಾಮ ಮೋಕ್ಷ ಇಷ್ಟಾರ್ಥಗಳಿಗಾಗಿ।
ವ್ಯರ್ಥದಿಂದಲಿ ನಿನ್ನ ಬೇಡುವೆನೆನಬೇಡ॥ ೧೫

ನಿನ್ನಯ ಮಹಿಮೆಯ ಗಾನರೂಪದಿ ಪಾಡಿ।
ಎನ್ನಯ ಹೃದಯದಿ ನಿನ್ನನು ನಿಲಿಸುವೆ॥ ೧೬

ಶೈಲಜಸುತ ನೀನು ಶೀಲವಂತನು ಅಹುದು।
ಶೈಲಜೆ ಕರೆಸಿಹಳಿಲ್ಲಿ ನಿಲ್ಲೋ॥ ೧೭

೯. ದಯಬಾರದೇ ರಂಗ

ರಾಗ: ಕಲ್ಯಾಣಿ ತಾಳ: ಖಂಡಛಾಪು

ದಯಬಾರದೇ ರಂಗ ದಯಬಾರದೇ ಸ್ವಾಮಿ।
ದಯವಿದ್ದರೆ ನಿನಗೆ ಭಯವಿಲ್ಲವೆನಗೇ॥ ॥ ಪ ॥

ನಯವಿನಯದಲಿ ಭಜಿಸಿ ಹಾಲನೀಯುವೆ ನಿನಗೇ।
ನಯನದಲಿ ನೀನಿರಲು ಅನ್ಯರೇಕೋ ಎನಗೇ॥
ನ್ಯಾಯಮಾರ್ಗವ ಕೋರಿ ಹಣ್ಣನೀಯುವೆ ನಿನಗೇ।
ಜಯಗಳಿಪ ಸಾಧನೆಯ ತೋರಿ ಕರುಣಿಸೋ ಎನಗೇ॥ ೧

ಭಕ್ತರಾರ್ತನಾದ ಕೇಳಲೊಲ್ಲದೆ ನಿನಗೇ।
ಭಕ್ತಿಯಿಂದಲಿ ಭಜಿಸೆ, ತಿಳಿಯಲೊಲ್ಲದೊ ಎನಗೇ॥
ಶಕ್ತಳಲ್ಲವೋ ನಾನು ಏನ ನೀಡಲು ನಿನಗೇ ಸ-।
ನ್ಮುಕ್ತಿ ಕರುಣಿಸಿ ಸಲಹೈ ಶ್ರೀ ಹರಿಯೆ ಎನಗೇ॥ ೨

---

೧೦. ಗಾನಲೋಲ ಚಾರುಶೀಲ

ರಾಗ: ಮೋಹನ ತಾಳ: ಆದಿ

ಗಾನಲೋಲ ಚಾರುಶೀಲ ದೀನಪಾಲ ಗೋಪಾಲ॥ ॥ ಪ ॥

ಭಕ್ತಿಯಿಂದಲಿ ನಾ ಸ್ತುತಿಪೆನು ಹರಿಯೆ ಸ-।
ನ್ಮುಕ್ತಿಯ ಕರುಣಿಸಿ ಪೊರೆಯೈ ಗುರುವೇ ॥ ಅ. ಪ. ॥

ಗೋಪಿಕುಮಾರ-ಗೋವರ್ಧನೋದ್ಧಾರ।
ಕೋಪಿಸಬೇಡವೋ ಅಸುರ ಸಂಹಾರ॥
ತಾಪತ್ರಯಹರ ಪೊರೆ ನೀ ಶರಣರ।
ಅಪರಾಧಮನ್ನಿಸೋ ಕರುಣಾಸಾಗರ॥ ೧

ರಾಧಾಪ್ರಿಯಕರ ಮನಮೋಹನಾಕಾರ।
ಸಾಧುಜನೋದ್ಧಾರ ಸುಜನ ಮಂದಾರ॥
ಶ್ರೀಧರ ಮುರಹರ ಭಜಿಪೆ ನಿರಂತರ।
ಮಧುವಹುದೋ ನಿನ್ನ ನಾಮಾಮೃತಸಾರ॥ ೨

೧೧. ಎನ್ನಪರಾಧವ ಮನ್ನಿಸೋ ದೇವ

ರಾಗ: ಮಧುರವಸಂತ ತಾಳ: ಆದಿ

ಎನ್ನಪರಾಧವ ಮನ್ನಿಸೋ ದೇವ।
ಮನ್ನಿಸುತೆನ್ನ ಕಡ ಹಾಯಿಸೋ ಕೇಶವ॥ ॥ಪ॥

ಬಿನ್ನಪಕೇಳೋ ಸನ್ನುತಾಂಗನೆ ಎನ್ನ ಬಿನ್ನಪಕೇಳೋ।
ಸಣ್ಣತನದ ಮನ ಬಿಟ್ಟು ಹೊನ್ನಾಗಿಸೊ॥ ॥ಅ. ಪ.॥

ತನ್ನತನದಲಿ ಮೈಮರೆತು ನಾ ಸದಾ।
ನಿನ್ನ ಧ್ಯಾನದ ಸುಧೆಯ ಸವಿಯದೆ ದಿನ ಕಳೆದೆ॥
ಮುನ್ನಿನ ಗತಿಯಿನ್ನು ಮರೆಯಿಸೋ ಮುಕುಂದಾ।
ಘನ್ನಮಹಿಮ ನಿನ್ನ ಗಾನಿಪೆ ಗೋವಿಂದಾ॥ ೧

ಎನ್ನ ಪೆತ್ತವರ ಕುಲ-ಕೀರುತಿ ಬೆಳಗಲಿ।
ಅನ್ನ ಇಟ್ಟವರೆಲ್ಲ ಸುಖದಿಂದ ಇರಲಿ॥
ಅಣ್ಣತಮ್ಮ ಬಂಧುಬಳಗ ಸಂತೋಷಿಸಲಿ।
ಕನ್ನೆ ಅನುಜೆಯರೆಲ್ಲ ಚೆಂದದಿಂದಿರಲಿ॥ ೨

ತಂದೆತಾಯಿ ಋಣವಿಶೇಷ ಸ್ವಾರ್ಥ ಕುಣಿಸಿದ ವೇಷ।
ಅಂದಚೆಂದದ ಬದುಕು ಅರ್ಥಕಾಮದ ಪಾಶ॥
ಸಂದಿಗೊಂದಿಯ ದೂರಿ ಭಂಡಬಾಳಿನ ದಾರಿ।
ಮಂದಮತಿಯಲಿ ನಿನ್ನ ನಿಂದಿಪುದೋ ಹರಿ॥ ೩

ಹರಿ ನಿನ್ನ ಚರಣದಲಿ ಎನ್ನ ಶಿರವಿರಲಿ।
ಕರವು ಈ ಶರೀರ ಕಾಯಕ ನಡೆಸಲಿ॥
ತರುಣಿ ಈ ಶೈಲಜೆಯು ಶ್ರೀಕಂಠನೊಡನಿರಲಿ।
ಹರಸತಿ ಶೈಲಜಾನುತೆಯ ಮನೆಯಿದಾಗಲಿ॥ ೪

೧೨. ನಿನ್ನ ಬಿಟ್ಟಿರಲಾರೆ

ನಿನ್ನ ಬಿಟ್ಟಿರಲಾರೆ, ಇನ್ನು ಸೈರಿಸಲಾರೆ।
ನೀ ದೂರ ಹೋದರೆ ಎನಗೆಲ್ಲಿ ಆಸರೆ॥ ॥ ಪ ॥

ಗೋಕುಲದಲ್ಲಿ ಹುಟ್ಟಿ ಗೋವಳನೆನಿಸಿ ನೀ
ಗೋವರ್ಧನ ಗಿರಿಧಾರಿಯಾದೆ।
ಆಕಳ ಪಾಲ್ಮೊಸರ ಬೆಣ್ಣೆಯ ಮೆಲ್ಲುತ।
ಲೋಕದಲಿ ನವನೀತ ಚೋರನೆಂದೆನಿಸಿದೆ॥ ॥ ಕೃಷ್ಣಾ ॥

ನಾರೇರು ನೀರಾಟವ ಸರಸದಲಾಡಿರಲು।
ಮರೆಯಲಿ ನಿಂದವರ ಸೀರೆಯ ಕದ್ದವನಾದೆ।
ತರುಣಿ ದ್ರೌಪದಿ ನಿನ್ನ ಮೊರೆಯಿಡಲದ ಕೇಳಿ।
ಸೀರೆಯ ಹೊರೆಯನ್ನೇ ಸೃಷ್ಟಿಸಿ ನೆರವಾದೆ॥ ॥ ಕೃಷ್ಣಾ ॥

ಅಂದು ಯಶೋದೆಯ-ಕಂದನೆನಿಸಿ ಆ-
ನಂದ ಕಂದ ಮುಕುಂದ ನೀನಾದೆ।
ವಂದಿಪೆ ನೀಎನ್ನ ನಾಲಿಗೆಯಲಿ ನಿಂದು।
ಚಂದದಿ ಗಾನಿಪ ಶೈಲಜಾನುತನಾದೆ॥ ॥ ಕೃಷ್ಣಾ ॥

---

೧೩. ಏಕೆ ನೀ ಎನ್ನನನುಮಾನಿಸಿದೆ

ರಾಗ: ದರ್ಬಾರಿ ಕಾನಡ ತಾಳ: ಆದಿ

ಏಕೇ ನೀ ಎನ್ನನನುಮಾನಿಸಿದೇ ಈ
ಲೋಕದ ಜನರಂತೆ ನಿಷ್ಕರುಣಿ ನೀನಾದೆ॥ ॥ ಪ ॥

ಕಳವಳದಿಂದಲಿ ಕಳೆಗುಂದಿಹೆನೋ ಎನ್ನ
ಕಳವಳ ಬಿಡಿಸಯ್ಯ ಕರುಣಾಕಟಾಕ್ಷ।
ನಳಿನನಾಭ ನಿನಗಲ್ಲದೆ ಅನ್ಯರಿಗೆ ಈ
ತಳಮಳದ ಆಳವೆಲ್ಲ ತಿಳಿಯಲೊಲ್ಲದೊ॥ ॥ ಕೃಷ್ಣಾ ॥

ಮುದದಿಂದಲಿ ನಾ ನಿನ್ನನಾರಾಧಿಸಿದೆ।
ಮದನ ಜನಕ ನಿನಗೆನ್ನನರ್ಪಿಸಿದೆ॥
ಸುದತಿ ಈ ಶೈಲಜೆಯೆ ಮನದಲಾವರಿಸಿಹ।
ರಾಧಾಕೃಷ್ಣನೆ ನೀನಿದನರಿತು॥ ॥ ಕೃಷ್ಣಾ॥

---

೧೪. ನೀ ಸೂತ್ರಧಾರಿ, ನಾ ಪಾತ್ರಧಾರಿ

ರಾಗ: ಸೂತ್ರಧಾರಿ ತಾಳ: ಆದಿ

ನೀ ಸೂತ್ರಧಾರಿ, ನಾ ಪಾತ್ರಧಾರಿ।
ನೀನು ಈ ಭವ ಮಾಯಾ ಜಂಜಡದ ದಾರಿ॥ ॥ ಪ॥

ಏಕೋ ಏನೋ ಎನ್ನಯ ತಳಮಳವ ನಾನರಿಯೇ
ಸಾಕು ಮಾಡಿಸೈ ಮನದ ಕಳವಳವ ಶ್ರೀಹರಿಯೆ॥ ೧

ಸಾಕು ಬೇಕೇನೆಂದು ತೂಕವರಿಯದೆ ನಾನು।
ಲೋಕದೊಳು ಜೀವನದ ಜೋಕಾಲಿಯಾಡುತಿಹೆ॥ ೨

ದಿನದಿನವು ಕಳೆಯುತಿದೆ ಮನನಿನ್ನ ನೆನೆಯುತಿದೆ।
ಕ್ಷಣಕಾಲ ನೀ ಬರದೆ ಹನಿಹನಿಸದೆ ಎನ್ನೆದೆ॥ ೩

ಘನಕಾರ್ಯವೆಂತಹುದೋ ಅನವರತ ನೀ ಮಾಳ್ಪುದು।
ತನ್ನವರ ಮರೆತಿಹುದು ಶೈಲಜಾನುತನಹುದು॥ ೪

---

೧೫. ನುಡಿಸೋ ನಿನ್ನ ನಾಮವ

ರಾಗ: ಷಣ್ಮುಖಪ್ರಿಯ ತಾಳ: ಆದಿ

ನುಡಿಸೋ ನಿನ್ನ ನಾಮವ।
ಕುಡಿಸೋ ಅಮೃತಪಾನವ॥ ॥ಪ॥

ಹಿಡಿಸೋ ನಿನ್ನಯ ಭಕ್ತರ ಚರಣವ।
ಬಿಡಿಸೋ ಎನ್ನಯ ಮನದ ಕ್ಲೇಶವ॥ ॥ಅ. ಪ.॥

ಕಾಡಿರಲಿಲ್ಲವೋ ನಾ ನಿನ್ನ।
ಬೇಡಿರಲಿಲ್ಲವೋ ನಾ ನಿನ್ನ।
ನೋಡುನೋಡೆಂದು ಈ ಭವಬಂಧನದಲಿ
ಕೂಡಿಹಾಕಿ ಎನ್ನನೋಡಿ ನಗುವರೇನೋ॥ ೧

ಮಡಿಹುಡಿ ಆಚಾರವ ನಾನರಿಯೇ।
ಬಡಬಡಿಸುವ ಮಂತ್ರ ಜಪನಾನರಿಯೇ।
ಕಡು ಮುದ್ದುರಂಗನ ಎನ್ನಂತರಂಗದಲಿ
ಬಿಡದೆ ಧ್ಯಾನಿಪ ನಿಶ್ಚಲಮನವಿತ್ತು॥ ೨

ಕುಡಿಯೊಡೆಯುವ ಕಾಮಕ್ರೋಧಾದಿಗಳ।
ಹೊಡೆದಬ್ಬರಿಸಿ ಹೊರದೂಡುವನಮ್ಮ॥
ಪೊಡವಿಗೊಡೆಯ ನಮ್ಮ ಶೈಲಜಾನುತನ।
ಅಡಿಗಡಿಗೆ ಭಜಿಪ ಅಚಲಮನವನಿತ್ತು॥ ೩

೧೬. ದಯೆತೋರಿ ನೀ ಎನ್ನ ಪೊರೆಯೈ

ರಾಗ: ಕೀರವಾಣಿ **ತಾಳ: ಆದಿ**

ದಯೆತೋರಿ ನೀ ಎನ್ನ ಪೊರೆಯೈ ಶ್ರೀಹರಿಯೇ।
ಭಯಭೀತಿ ತೊಲಗಿಸೆ ನಾ ನಿನ್ನ ನಂಬಿದೆ ನರಹರಿಯೆ॥ ॥ಪ॥

ದಿನದಿನಕೆ ಆಯುಷ್ಯ ಕಳೆಯುತಿದೆ ಅರಿಯದೆಯೆ।
ಅನುದಿನವು ಮನನಿನ್ನ ನೆನೆಯುತಿದೆ ಮರೆಯದೆಯೆ॥
ತನುಮನವು ತೊಳಲುತಿದೆ ನಿನ್ನಿರವ ತಿಳಿಯದೆಯೆ।
ಜನುಮಜನುಮಕು ನಿನ್ನ ನೆನಪಿರಲಿ ಹಳಿಯದೆಯೆ॥ ೧

ಘನಶ್ಯಾಮನ ನೆನೆದರೆ ಮನದ ಕತ್ತಲೆ ದೂರ।
ಪನ್ನಗಶಯನನನ ಮರೆತರೆ ಎನಗಿರಲಿ ಧಿಕ್ಕಾರ।
ಸನ್ನುತಾಂಗನೆ ನಿನಗೆ ಆಗಿಹೆನೆ ನಾ ಭಾರ।
ಮನ್ನಿಸೆನ್ನಪರಾಧ ಪೊರೆ ಕರುಣಾಸಾಗರ॥ ೨

ಗಾನಲೋಲನೆ ನಿನ್ನ ನಾ ಗಾನರೂಪದಿ ಕರೆವೆ।
ದೀನಪಾಲನೆ ಎನ್ನಲಿ ಜ್ಞಾನರೂಪದಿ ನೆಲಸೈ॥
ಮಾನಿನಿ ಈ ಶೈಲಜೆಯ ಮಾನಾಭಿಮಾನನಿಧಿ।
ಘನಶೀಲ ಗೋಪಾಲ ಕೃಷ್ಣ ವಿನೋದ॥ ೩

೧೭. ನಿನ್ನ ಧ್ಯಾನದೇ ನಾ

ರಾಗ: ಮಿಶ್ರತಿಲಂಗ್ ತಾಳ: ಖಂಡಛಾಪು

ನಿನ್ನ ಧ್ಯಾನದೇ ನಾ ಎನ್ನ ಮರೆತಾಗ।
ಎನ್ನ ಜೀವನ ರಾಗ ನುಡಿಸು ನೀ ಬೇಗ॥ ೧

ಸನ್ನುತಾಂಗನೆ ನಿನ್ನ ಹೊನ್ನದಾವರೆ ಮೊಗದೆ।
ಸಣ್ಣನಗುವನು ಸವಿದೆ ಅನ್ನ ನಿದ್ರೆಗಳಿಲ್ಲದೆ॥ ೨

ತನ್ನ ತನುವನು ಮರೆತು ನಿನ್ನ ಪಾಡುವ ಜನರ।
ಮನ್ನಿಸುತ ಪೊರೆಯುವುದು ನಿನ್ನ ಭಾರ ಗಿರಿಧರ॥ ೩

ಹೊನ್ನು ಮಣ್ಣಿನ ಆಸೆ ನಮ್ಮಿಂದ ಬಲುದೂರ।
ಬಣ್ಣಬಣ್ಣದ ಬದುಕು ನಮಗೆ ನಿಸ್ಸಾರ॥ ೪

ಯಾರು ಬಂದರೂ ಇಲ್ಲ ಮತ್ತಾರು ಬಾರದರಿಲ್ಲ।
ತಾರುಮಾರಾಗುತಿಹ ದಿನದರಿವು ಎನಗಿಲ್ಲ॥ ೫

ಕಾರುಣ್ಯಮೂರುತಿ ಶೈಲಜಾನುತನೆ ಎನ್ನೆಲ್ಲ।
ದಾರುಣಕೆ ಕಾರಣನು ನೀನಾದೆಯಲ್ಲ!॥ ೬

೧೮. ದೊರಕಿತು ಅದು ದೊರಕಿತು

ರಾಗ: ಮೋಹನ **ತಾಳ: ರೂಪಕ**

ದೊರಕಿತು ಅದು ದೊರಕಿತು।
ಹರುಷ ಉಕ್ಕಿ ಹರಿಯಿತು॥ ॥ಪ॥

ದೊರಕಿತೆನೆಗೆ ಚೆಲುವ ಚೆನ್ನನ
ಮೆರೆವ ಮುಖಾರವಿಂದ ದರುಶನ॥ ॥ಅ. ಪ.॥

ಕೂಗಿ ಕರೆದ, ಕೊಳಲ ನಾದ
ತಾಗಿ ಎದೆಯ ವೀಣೆ ಮಿಡಿದ॥
ಬಾಗಿ ಮೊಗೆವ ಹಿಡಿದ ಕಂದ।
ಬಿಗಿದಪ್ಪಿದ ಸುಖದಾನಂದ॥ ೧

ಹಳತು, ಹೊಸತು ಎಲ್ಲಾ ಮರೆತು।
ಕುಳಿತ-ನಲ್ಮೆಯ ನಗೆಯ ಹೊತ್ತು॥
ಥಳಥಳಿಸುವ ಸೊಗದ ಮುತ್ತು।
ನಳಿನನಾಭನ ಕಂಡ ಸ್ವತ್ತು॥ ೨

ಆವ ಕಾಯ್ವ ವಾಸುದೇವ।
ಭಾವ ಶುದ್ಧಿಯ ಭಕುತಿಗೊಲಿವ॥
ಭುವನದೊಡೆಯ ಶೈಲಜಾನುತನಿವ।
ಭವದ ಮಾಯೆ ಹರಿಸೆ ಜೀವ॥ ೩

೧೯. ಏನ ಬೇಡಲಿ ನಾನು

ರಾಗ: ಶುಭಪಂತುವರಾಳಿ ತಾಳ: ಖಂಡಛಾಪು

ಏನ ಬೇಡಲಿ ನಾನು ಕೊಡಲು ನಿನ್ನಲ್ಲಿಹುದೇನು?।
ದೀನರಕ್ಷಕನೆಂಬ ಬಿರುದು ನಿನಗಿಹುದೇನು?॥ ॥ ಪ ॥

ಅಶನವಸನಕೆ ಅಳುವ ಹಸಿಗೂಸು ನಾ ಎನ್ನ।
ಹಸಿವನ್ನು ಹಿಂಗಿಸುತ ಉಸಿರ ನೀಡುವೆ ಏನು?॥
ಮಸುವಗಂಧವ ಪೂಸಿ ಕುಸುಮಹಾಸಿಗೆ ಹಾಸಿ।
ಹಸನಾದ ಜೋಗುಳದ ಈ ಕೂಸ ತೂಗುವೆ ಏನು?॥ ೧

ನಿನ್ನಾಕೆ ಲಕುಮಿಯನು ಕಳುಹು ನಮ್ಮ ಸಲಹಲಿನ್ನು।
ನಿನ್ನ ಸೇವಿಪ ಭಾಗ್ಯ ಬರಿದೆ ಸಾಕೇನು?॥
ಅನ್ನ ಸುಣ್ಣ ಬಣ್ಣ ಕಲೆವ ಕುನ್ನಿ ಮನುಜರ ಕಷ್ಟ।
ಪನ್ನಗಶಯನ ನೀನಿನ್ನೂ ಅರಿತಿಲ್ಲವೇನು?॥ ೨

ಸಾಕು-ಬೇಕುಗಳನರಿಯದಿಹ ನರಹುಳು ನಾನು।
ಶೋಕದಲಿ ದಿನಕಳೆದು ನಿನ್ನ ನೆನೆಯದಾದೆನು
ಏಕೆ ಮೂಕನಾದೆ ಶೈಲಜಾನುತ ನೀನು?।
ಲೋಕನಾಯಕ ನಿನ್ನ ಪದಭಜನೆ ಹೊರತಿನ್ನು॥ ೩

---

೨೦. ಕಾದು ಕಾದು ಸೋತೆ ನಾ

ರಾಗ: ಹಂಸಾನಂದಿನಿ

ಕಾದುಕಾದು ಸೋತೆ ನಾ ಶ್ರೀಕಾಂತ ನಿನ್ನ ಈ
ದುಗುಡವ ನೀ ಕಳೆವೆ ಎಂದು ನಿನ್ನ ನಂಬಿ ॥ ಪ ॥

ನಿನ್ನ ಕಾಣದ ಕಣ್ಗಳಿವು ಇನ್ನೇನ ಕಾಣಬಲ್ಲವೋ।
ನಿನ್ನೊಡನೆ ಮಾತಿಲ್ಲದಿರೆ ಈ ನಾಲಿಗೆಯೆ ಬೇಕಿಲ್ಲವೋ॥
ನಿನ್ನೊಡನೆ ಕೂಡಾಡದಿರೆ ಈ ತನುವು ಇದ್ದು ಫಲವಿಲ್ಲವೋ।
ಸನ್ನುತಾಂಗನೆ ನಿನ್ನ ಪ್ರೇಮವು ಎನ್ನ ಮೇಲೇಕಿಲ್ಲವೋ॥ ೧

ನಿಮಿಷ ನಿಮಿಷಕು ನಿನ್ನ ಸ್ಮರಣೆ ಎನ್ನಮನದ ಚಿಂತನಾ।
ತಾಮಸವ ಮಾಡದೆಲೆ ನೀ ನೀಡು ಬಾ ನವ ಚೇತನಾ।
ಕೋಮಲಾಂಗಿ ನಾನಹುದೋ ನೀ ಎನ್ನ ಮನಮೋಹನಾ।
ಶ್ಯಾಮಲಾಂಗನೆ ಶೈಲಜಾನುತ ನಿನ್ನ ನೆನಪೇ ಪಾವನಾ॥ ೨

---

೨೧. ಏನು ಮಾಡಿದೆಯಯ್ಯ ಎನ್ನ ಕೃಷ್ಣಯ್ಯ

ರಾಗ: ಚಕ್ರವಾಕ **ತಾಳ: ಖಂಡಛಾಪು**

ಏನು ಮಾಡಿದೆಯಯ್ಯ, ಎನ್ನ ಕೃಷ್ಣಯ್ಯ।
ನೀನು ತೋರುವ ಕರುಣೆ ಎನಗಿನಿತು ಸಾಲದಯ್ಯ॥ ॥ಪ॥

ಬಾನಿನಲಿ ಮೋಡಗಳ ಕಂಡು ಕುಣಿವ ನವಿಲ।
ಆನಂದವೆಂತೆಂದು ಅಳೆದು ಅರಿತವರಿಲ್ಲ॥
ತಾನೇ ತಾನಾಗಿ ತನ್ನಿರವ ಮರೆಯುತ ನಾನು।
ನಿನ್ನ ಪಾಡುತ ನಲಿವ ಮನವ ನೀ ಕೊಡಲಿಲ್ಲ॥ ೧

ಗಂಡ ಮಕ್ಕಳ ಮೋಹ, ಉಂಡು ತಿರುಗುವ ಮೋಹ।
ಕಂಡಕಂಡದ್ದೆಲ್ಲಾ ಬೇಕೆಂಬ ವ್ಯಾಮೋಹ॥
ಗುಂಡು ಗಂಟಾಗಿ ಹಣ ಕಂಡು ದೊರಕಿಪ ಸ್ನೇಹ।
ಕೊಂಡ್ಯೈಯ್ವುದೆಲ್ಲಿಗದು? ತೀರದಾ ದಾಹ॥ ೨

ಇಂದು ಇಂದಿಗೆ ಸರಿದೂ ಮುಂದೆ ನಾಳೆಯೂ ಬಂದು।
ಒಂದು ಲೆಕ್ಕಕೂ ಸಿಗದ ಬಂಧನದ ಬಾಳು ಬರಿದು॥
ನೊಂದು ಬೆಂದು ಬೇಸತ್ತ ಮಂದಮತಿ ಶೈಲಜೆಯ।
ಕುಂದೆಣಿಸದೆ ಕಾಯೋ ಶೈಲಜಾನುತ ಕೃಷ್ಣಾ॥ ೩

---

೨೨. ಷೋಡಶೋಪಚಾರ ಪೂಜೆ

ರಾಗ: ಸರಸಾಂಗಿ **ತಾಳ: ಆದಿ**

ಷೋಡಶೋಪಚಾರ ಪೂಜೆ ಗಂಟೆ ಜಾಗಟೆ ಮಂಟಪವೇಕೋ
ಸೊಡರಿಡದ ಮನ ಮಂಟಪದೊಳು ಹರಿ ನೀನಿದ್ದರೆ ಸಾಕೋ ॥ ಪ ॥

ಮಂಟಪವಿನ್ನೂ ಬಡಗಿ ಮನೆಯ ಹೊಸಿಲ ದಾಟಿ ಬಂದಿಲ್ಲ
ಸೊಂಟ ಬಗ್ಗಿ ತಳಿರು-ತೋರಣ ಕಟ್ಟಲು ದೇಹ ಬಲವು ಇಲ್ಲ
ಗಂಟೆ-ಜಾಗಟೆ ಕೊಂಡು ತರಲು ಹಣವ ನೀ ಕೊಡಲಿಲ್ಲ
ಘಂಟನಾದದ ಕಂಠದೊಳು ನಾ ನಿನ್ನ ಪಾಡಿ ಪೊಗಳಿ ಸ್ತುತಿಪೆನಲ್ಲ॥ ೧

ಮಧು ದಧ್ಯಾದಿ ಶ್ರೀಗಂಧ ಶುದ್ಧೋದಕ ಸ್ನಾನವಿಲ್ಲ
ಮುದದಿ ಧರಿಸೆ ಪೀತಾಂಬರಾಲಂಕಾರ ವಸ್ತ್ರವಿಲ್ಲ
ಮಧುರ-ಪುಷ್ಪ-ಫಲಾಹಾರ ಧೂಪ-ದೀಪ-ನೈವೇದ್ಯವಿಲ್ಲ
ಮಧುರಾಕ್ಷರ ನಿನ್ನ ನಾಮಸುಧೆಯ ಪಾನ ಅಧರಕಿದೆಯಲ್ಲ॥ ೨

ಸಹಸ್ರನಾಮ-ಮಂತ್ರಜಪದಿ ತುಳಸಿ ಪೂಜೆ ಮಾಡಲಿಲ್ಲ
ಸಹಚರರು ಸಹಾಯಕರು ಯಾರಿಹರೋ ತಿಳಿಯದಲ್ಲ?
ಸಹಿಸಿಕೊಳ್ಳೋ ಈ ಸಹಜ ಭಕ್ತಿ ಕಪಟ-ಕುಹಕವಿನಿತಿಲ್ಲ
ಸುಹಸಿತ ಶೈಲಜಾನುತ ಎನ್ನ ಗಾನಕೊಲಿಯೆ ಸಾಕೆಲ್ಲ॥ ೩

೨೩. ಏನು ಮಾಡಲಯ್ಯ ಹರಿ ನಾ

ರಾಗ: ಹಿಂದೋಳ **ತಾಳ: ತ್ರಿಶ್ರನಡೆ ಆದಿ**

ಏನು ಮಾಡಲಯ್ಯ ಹರಿ ನಾ-।
ನೇನು ಮಾಡಲಯ್ಯ ಹರಿ।
ಬಾನು ಬುವಿಯು ಒಂದಾಗಿ ಎರಗಿತಯ್ಯ॥ ॥ಪ॥

ನಾನು ನೀನು ಒಂದಾಗಿ ನಗುತಲಿ।
ಜೇನು ಸವಿಯೆ ಚೆನ್ನಾಗಿ ಮುದದಲಿ॥
ಮನಸು ಮನಸು ಕಲೆತು ಕುಣಿದ ತೆರದಲಿ।
ಕನಸ ಕಂಡು ಭ್ರಮಿಸಿ ಸೋತೆ ನಿಜದಲಿ॥ ೧

ಮಗುವು ನೀನೆಂದು ನಾ, ಸದರದಿ।
ಬಿಗಿದು ಮುದಿಸಿದೆ ಹಾ ಅಧರದಿ॥
ಮುಗುಳು ನಗೆಯ ಮಿಂಚ-ಕೊಂಚ-ಸರಿಸಿದೆ।
ಜಗವ ಪೊತ್ತ ಬಾಯ ತೋರೆ ಹೆದರಿದೆ॥ ೨

ಕೊಳಲ ಮಧುರಕರೆಯು ನಿನ್ನ।
ಕಾಲಗೆಜ್ಜೆ ದನಿಯು ಎನ್ನ॥
ತಲೆಯ ಹೊಳೆವ ತೊಳೆವ ಯಮುನಾ ಹೊಳೆಯು।
ಅಲೆಯನೆಬ್ಬಿಸಬ್ಬರಿಸುವ ಭಯವು॥ ೩

ದೇವದೇವ ನೀನೇ, ಸುಜನರ।
ಕಾವದೈವ ನೀನೇ, ಮನುಜರ॥
ಭಾವಶುದ್ಧ ಭಕ್ತಿ ಭಾಗ್ಯ ಹರಿಯುವ।
ತಾವ ಕಾಣ್ವ ಶೈಲಜಾನುತನು ಇವ॥ ೪

೨೪. ಕಸವನ್ನಾದರೂ ಇಡಬಹುದು

ರಾಗ: ಚಕ್ರವಾಕ — ಖಂಡಗತಿ

ಕಸವನ್ನಾದರೂ ಇಡಬಹುದು
ಉಸಿರಳಿದು ರಸಕಳೆದ ದೇಹವಿಡಬಾರದು ॥ ॥ ಪ ॥

ಹಸನಾದ ಈ ದೇಹ ಉಸಿರಿದ್ದರೆ ಹಸಿರು
ರಸಕವಳ ರಾಸಲೀಲೆ ಜೀವನದ ಪೊಗರು
ಮಿಸುಪ ಗಂಧವ ಮೂಸುವ ನಾಸಿಕದ ಚಿಗುರು
ಉಸಿರೆಳೆವುದ ಮರೆತರೆ ಈ ಕಾಯ ಕಹಿ-ಒಗರು ॥ ೧

ಪಸರಿಸಿದ ಹಸಿರು ತಳಿರು ಕಣ್ಮನಗಳಿಗೆ ತಂಪು
ಹೊಸಕುಸುಮದ ಕಂಪು ದೇವಪೂಜೆಗೆ ಸೊಂಪು
ಉಸಿರುಕಟ್ಟಿ ಅಳುವ ಅಳು ಕಿವಿಗಿಂಪು
ಉಸಿರಾಟಕೆ ಹೋರಾಟವ ತಂದ ದೇಹ ಮೂಲೆಗುಂಪು ॥ ೨

ಉಸಿರಮೂಲವ ಹಿಡಿದು ಉಸಿರಾಟ ಬಿಗಿ ಜಡಿದು
ಬಿಸಿಯುಸಿರು ಒಳಸರಿದು ಆತ್ಮಜ್ಞಾನವ ತಳೆದು
ಹೊಸಚೇತನ ಪಡೆದು ದೇಹದಾಸೆ ತೊರೆದ ಸಂನ್ಯಾಸಿಯು
ಬಿಸುಟ ದೇಹ ಮಸಣದ ಮಣ್ಣಾಗದೆ ಕೊಳೆಯುವುದು ॥ ೩

ನೀಸಿ ಹೋಗುವ ಜೀವ ಹೊಸಹುಟ್ಟ ಪಡೆಯದಂತೆ
ಈಸಬೇಕು ಇದ್ದು ಜಯಿಸಬೇಕು
ದಾಸದಾಸರ ದಾಸ ಶೇಷಶಯನ ಶ್ರೀಶ ಈ
ದಾಸಿ ಶೈಲಜಾನುತ ಎನ್ನ ಕೈಬೀಸಿ ಕರೆಯಬೇಕು ॥ ೪

೨೫. ಈಗಲೀಗ ನಿನಗಾನಂದವಾಯಿತೇ

ರಾಗ: ಆನಂದಭೈರವಿ ತಾಳ: ಆದಿ

ಈಗಲೀಗ ನಿನಗಾನಂದವಾಯಿತೇ ಗೋವಿಂದ।
ಭೋಗಿಶಯನ ಜಗದೀಶ ಎನ್ನನು ಕಂಡು॥ ॥ಪ॥

ಜಗದೊಳು ನಿನ್ನಯ ಸಾಸಿರನಾಮವ।
ಪೊಗಳುವ ಭಕುತರ ಪೊರೆಯುವ ಪರಿಯಿದು।
ಅಗಜೆಯರಮಣ ಮೂಜಗದೊಡೆಯನ ಮಿತ್ರ।
ಅಗಣಿತಮಯ ಪನ್ನಗಶಯನ॥ ೧

ನಿನ್ನನು ಪೂಜಿಪ ಎನ್ನಯ ಕೈಗಳಾ।
ಹೊನ್ನಬಳೆ ಕಿಣಿಕಿಣಿ ಕೇಳುವುದನು ಬಿಟ್ಟು।
ಚೆನ್ನಾಗಿಸುಟ್ಟು ಆ ಉರಿಯಲಿ ಎನ್ನಯ।
ಮುನ್ನಿನ ಪಾಪವ ತೊಳೆದೆ ಹರಿಯೇ॥ ೨

ಉಪ್ಪುತಿಂದ ಮೇಲೆ ನೀರು ಕುಡಿಯುವಂತೆ।
ತಪ್ಪು ಮಾಡಿದರೆ ಶಿಕ್ಷೆಯು ತಪ್ಪದಂತೆ।
ಒಪ್ಪಿಕೊಳ್ಳುವೆ ಎನ್ನಪರಾಧವನಾ।
ತಪ್ಪದೆ ಎನ್ನ ಕೈ ಹಿಡಿದು ಮೇಲೆತ್ತಯ್ಯ॥ ೩

೨೬. ಹುಚ್ಚು ಹಿಡಿಯಿತು

ರಾಗ: ತೋಡಿ **ತಾಳ: ತ್ರಿಶ್ರನಡೆ ಆದಿ**

ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು।
ಅಚ್ಚುತಾನಂತ ಗೋವಿಂದನ ನಾ
ಮೆಚ್ಚುವಂಥ ಉಚ್ಚವಾದ॥ ॥ಪ॥

ಕೊಚ್ಚಿ ಹೋಗಲ್ಲೈ ಕೆಟ್ಟ ಕಾಮ।
ಕಿಚ್ಚು ಬೀಳಲಿ ದೇಹ ನಿರ್ನಾಮ।
ಬೆಚ್ಚಿ ಓಡಲ್ಲೈ ಆಶಾಧೂಮ।
ನಿಚ್ಚಳವಿರೆ ನಿನ್ನ ಪ್ರೇಮ॥ ೧

ಗರುಡ ಬಂದ ಕೃಷ್ಣಾ ಎಂದ।
ಬರಡು ಮನಕೆ ಹರುಷ ತಂದ।
ಕುರುಡು ಕಲ್ಪನೆ ಬಾಳಿದೆಂದ।
ಹೊರಡು ನಿನ್ನ ಮನೆ ಅಲ್ಲಿದೆ ಎಂದ॥ ೨

ಮಾನಿನಿ ಎನ್ನ ಶೈಲಜೆ ಎಂತೆಂಬೊರು।
ಮನದಿ ನೀ ಸದಾ ನಲಿದಾಡುತಿರು।
ಜೇನುಸವಿ ನಿನ್ನ ನಾಮವದು ಧೀರ ಮೋ-
ಹನ ನೀ ಶೈಲಜಾನುತನಾಗಿರು॥ ೩

೨೭. ನಿನ್ನ ಲೀಲೆಯನು ತೋರೋ

ರಾಗ: ಗುರ್ಜರಿತೋಡಿ ತಾಳ: ಆದಿ

ನಿನ್ನ ಲೀಲೆಯನು ತೋರೋ ಹರಿ।
ಘನಮಹಿಮ ಸನ್ನುತಾಂಗ ನರಹರಿ॥ ॥ಪ॥

ಸಾಕು ಸಾಕು ಈ ನರಜನ್ಮ ಜೀವನ।
ಶೋಕ-ಸಾಗರವು ವ್ಯಾಕುಲ ಕಥನ।
ಲೋಕ-ನಾಯಕ ನಿನ್ನ ಕೀರ್ತನ।
ಸಾಕಲ್ಯಕೆ ಶಕ್ತಿ ಸಾಧನ॥ ೧

ಧರೆಯ ಜನರ ಮೊರೆ ಕೇಳಬಾರದೇ।
ಕರುಣೆ ತೋರಿ ನೀ ಪೊರೆಯಬಾರದೇ।
ಸುರನರರಿಗೆ ಶೈಲಜಾನುತ ನೀನಲ್ಲದೆ
ಪರರು ಪಾರುಗಾಣಿಸರೋ ನಿಜದೆ॥ ೨

---

೨೮. ನಾವು ಬಡವರಲ್ಲ, ನಮಗಿನ್ನೇನೂ ಬೇಕಿಲ್ಲ

ರಾಗ: ಪೂರ್ವಿಕಲ್ಯಾಣಿ ತಾಳ: ಆದಿ

ನಾವು ಬಡವರಲ್ಲ ನಮಗಿನ್ನೇನೂ ಬೇಕಿಲ್ಲ॥ ॥ಪ॥

ದೇವದೇವ ಶ್ರೀ ಹರಿಯ ಕರುಣೆ ಎಂಬ।
ಕಾಯ್ವ ಕಾಮಧೇನು ನಮ್ಮಲ್ಲಿಹುದಲ್ಲ॥ ॥ಅ. ಪ.॥

ಭಾವಶುದ್ಧವಾಗಿ ಭುವಿಯೊಳು।
ದೇವನೊಲುಮೆ ಇರಲಾಗಿ॥
ನೋವುನಲಿವು ಒಂದಾಗಿ ಸವಿದು।
ಭವಮಾಯೆ ಹರಿದು ಅವನೊಲುಮೆಯ ಪಡೆವೆವು॥ ೧

ಹೊನ್ನು ಹಣವು ಬೇಕು, ನಿತ್ಯದ।
ಅನ್ನ ಉಂಡುಡಲು ಸಾಕು॥
ಘನ್ನಮಹಿಮ ಶ್ರೀ ಪನ್ನಗಶಯನನ।
ನಿನ್ನೆ ನಾಳೆ ಇಂದೆನದೆ ಸ್ತುತಿಸಬೇಕು॥ ೨

ರಾಗಭೋಗದಿಂದ ಅಲ್ಲದೆ।
ತ್ಯಾಗಯೋಗದಿಂದ ಈ॥
ನಾಗಶಯನ ಜಗನ್ನಾಥ ಸನ್ನುತನ।
ತೂಗಿನೋಡೇ ಅದು ಭಕ್ತಿಗೆ ಸಮನಲ್ಲ॥ ೩

ಸಾರಸುಖವು ಸಂಸಾರವು ಸ್ವರ್ಗಕೆ।
ನೇರಮಾರ್ಗ ನಿಜವು॥
ಭೂರಿ ಕೃಪಾರಸ ಹರಿಯ ಮನೆಯ ರಹ-।
ದಾರಿ ನಡೆದು ಅವನೊಲುಮೆಯ ಪಡೆವೆವು॥ ೪

ಹರಿಯ ಕರುಣೆ ಮುಂದೆ ಜಗದೊಳು।
ಸರಿವುದೆಲ್ಲ ಹಿಂದೆ॥
ವರಸಿರಿದೇವಿಯು ಸರಸ ಸಡಗರದಿ।
ಬರಲಿ ನಮ್ಮ ಹರಿ ನಮ್ಮೊಡನಿರಲಿ॥ ೫

ಮಹಡಿಮನೆಯು ಅಲ್ಲ ಅದರಲಿ।
ಪಹರೆಗೂಡು ಇಲ್ಲ॥
ಬಹುವಿಧ ಬಾಹ್ಯಾಡಂಬರವಿಲ್ಲ।
ಸಹಜದಿ ಹರಿಯು ಈ ಹೃದಯದಿ ಇಹನಲ್ಲ॥ ೬

ಆರು ಮೂರು ಹದಿನಾರು ದಿನಗಳು।
ನೂರು ಜಾರೆ ಈ ಉಸಿರು॥
ಮಾರಜನಕ ಮುರವೈರಿಯು ಕರುಣೆಯ।
ತೋರೆ ಈ ಜೀವ ಒಸರುವುದ್ದಸಿರು॥ ೭

ಕೂತುನಿಂತು ಹೊತ್ತೂ ಹೋಯಿತು।
ಮತ್ತೆ ಬಾರದಾಯ್ತು॥
ಮಾತು ಕಲಿತ ಈ ನಾಲಿಗೆ ಸತ್ತು।
ಹೂತುಹೋಗುವ ಮುನ್ನವನ ಪಾಡುವೆವು॥ ೮

ಕಮಲನಾಭ ನಿನ್ನ ನಾಮವು।
ಅಮಲಮನಕೆ ಶುಭವು ಈ॥
ತುಮುಲ ತುಂಡರಿಸೋ ಶೈಲಜಾನುತನೇ।
ಸುಮತಿನೀಡೆಂದು ಬೇಡುತ ಭಜಿಪೆವು॥ ೯

---

೨೯. ಬೆಕ್ಕು ಹೊಕ್ಕಿತೆಂದು

ರಾಗಮಾಲಿಕೆ

ರಾಗ: ಹಿಂದೂಸ್ತಾನಿ ಕಾಪಿ ತಾಳ: ಆದಿ

ಬೆಕ್ಕು ಹೊಕ್ಕಿತೆಂದು ಪುಕ್ಕಲಾಗಬೇಡ।
ಸಿಕ್ಕ ಬೆಕ್ಕಿನಲ್ಲೇ ನೀ ಮುಕ್ಕಣ್ಣನಾ ಕಾಣು॥
ಅಕ್ಕರದಿಂ ಕರದಲಿ ಲಕುಮಿಯ ಸ್ಮರಿಸಲು।
ಪಕ್ಕನೆ ಬೆಕ್ಕು ಸಿಕ್ಕಲು ಬಿಕ್ಕಬೇಡ ಮನವೇ॥ ೧

ಅಕ್ಕ ಬಂದೆಬ್ಬಿಸಿದರೆ, ಲಕುಮಿಯ ಕಂಡೆನೆನ್ನು।
ಚಿಕ್ಕಪ್ಪ ಕಂಡರೆ ಮುಕ್ಕಣ್ಣ ಕಂಡೆನೆನ್ನು॥
ಚಿಕ್ಕಬಾಲ ಬಂದೊದ್ದರೆ ಕಕ್ಕ ಬಿಕ್ಕಿ ಆಗದೆ। ನೀ।
ಮಿಕ್ಕ ಪ್ರಾಣಿಗಳಲಿ ಮುಕುಂದನ ಕಾಣು ಮನವೇ॥ ೨

ರಾಗ: ಬೇಗಡೆ

ಚೊಕ್ಕ ನಿದ್ದೆಯಲಿ ನೀ ಮೈಮರೆತಿರುವಾಗ।
ಕರ್ಕಶ ಕನಸುಗಳೇ॥
ಮಿಕ್ಕಿ ಮೀರಿದವೇಳೆ, ಅದನೀ ಮೆಲುಕುತ್ತ
ಬೆಕ್ಕು ಕಂಡು ಎನ್ನ ಕೆಲಸ ಕೆಟ್ಟಿತೆನಬೇಡ॥ ೩

ರಾಗ: ಭೌಳಿ

ಉಕ್ಕು ಹಾಲಿಗೆ ನೀರ ಇಕ್ಕುವಂದದಿ ಹ-
ತ್ತಿಕ್ಕಬೇಕೋ ನಿನ್ನ ಮೂಢನಂಬಿಕೆಯ।
ಎಕ್ಕಡ ಕಂಡರೂ ಪಾದರಕ್ಷಿಸುವಂಥ
ಉಕ್ಕಿನ ಕವಚವೆಂದು ಶೈಲ ಹೃದಯಿಯಾಗೋ॥ ೪

---

೩೦. ಏಕೆ ಹೀಗಾದೆನೋ

ರಾಗ: ಶುಭಪಂತುವರಾಳಿ ತಾಳ: ಖಂಡಛಾಪು

ಏಕೆ ಹೀಗಾದೆನೋ। ನಾನರಿಯೆ ಹರಿಯೆ।
ಆಕಳಿಕೆ ತೂಕಡಿಕೆ ಜೀವನದ ಹೆಗ್ಗಳಿಕೇ॥ ॥ಪ॥

ಕಾಕಮೂಕದ ದೇಹ ಮತ್ತೆ ಕುಜನರ ಸ್ನೇಹ।
ಬಕ ಬೆಕ್ಕು ಶುನಕರಂತೆ ಉಂಬು ತಿಂಬುವ ಮೋಹ॥
ಶ್ರೀಕರಿಸೆ ದಯೆತೋರಿ ಸಾಕಾರನಾಗಿರೆ ನೀ।
ಸ್ವೀಕರಿಸಲು ಬಾರದ ಮೂರ್ಖನಾನಾಗಿಹೆನೋ॥ ೧

ಕಾಮಕ್ರೋಧಾದಿಗಳು ತನುಮನದಿ ಸುಳಿಯುತಿರೆ।
ಶ್ಯಾಮಲಾಂಗನೆ ನಿನ್ನ ನೆನೆಯಬಹುದೇ॥
ಸೋಮಶೇಖರ ಮಿತ್ರ ಶ್ರೀನಾರಾಯಣನೇ।
ನೇಮದಿಂದಲಿ ನಿನ್ನ ನಾಮಸ್ಮರಿಸಲು ಅರಿಯೆ॥ ೨

ನೀಲನೇತ್ರನೆ ನಿನ್ನ ಬಾಲಲೀಲೆಯ ನೆನೆದು।
ತಾಳಮೇಳೈಸಿ ನಾ ಪ್ರೇಮಗಾನವ ಪಾಡೆ॥
ಕೇಳದೇನೋ ಹರಿಯೆ ದಯೆತೋರಿ ಪೊರೆಯೋ।
ಶೈಲಜಾಸೋದರನೇ ಈ ಶೈಲಜನುತ ನೀನೇ॥ ೩

---

೩೧. ಏನು ಮಾಡಿದರಿಲ್ಲ

ರಾಗ: ಶುಭಪಂತುವರಾಳಿ ತಾಳ: ಖಂಡಛಾಪು

ಏನು ಮಾಡಿದರಿಲ್ಲ ಏನಾದರೂ ಇಲ್ಲ।
ತಾನುಮಾಡಿದ ಕರ್ಮ ತನ್ನನಪ್ಪುವುದಲ್ಲ॥ ॥ ಪ ॥

ಜಾತಿಕೆಟ್ಟರೂ ಇಲ್ಲ ನೀತಿಕೆಟ್ಟರೂ ಇಲ್ಲ।
ಪ್ರೀತಿಇಲ್ಲದ ಪೂಜೆ ರತಿಪತಿಯ ಪಿತನೊಲ್ಲ॥

ಸತಿಸುತರೊಳಾಡುವಾಗ ಶ್ರೀಪತಿಯ ನೆನೆಯಲಿಲ್ಲ।
ಅತಿಮಧುರ ಕ್ಷಣದಲ್ಲೂ ಹರಿಕೃಪೆ ಎನಲಿಲ್ಲ॥
ಶ್ರುತಿಶಾಸ್ತ್ರ ಪುರಾಣಕಥೆಗಳು ಕೇಳಲಿಲ್ಲ।
ಗತಿ ನೀನೆ ಗೋವಿಂದ ಎಂದೆನಲು ತಿಳಿಯಲಿಲ್ಲ॥ ೧

ವಿಧವಿಧದಿ ಮಾಧವನ ಪಾದವ ಸೇವಿಸಲಿಲ್ಲ।
ಮೃದುಮಧುರ ಭಾಷೆಯಲಿ ಪಾಡಲಿಲ್ಲ॥
ಸಾಧ್ವಿಮಣಿ ಶೈಲಜೆಯ ತನುಮನವ ತುಂಬಿರುವ ಆ
ರಾಧಾಕೃಷ್ಣನೇ ಎಮ್ಮ ಕ್ಷಮಿಸಿ ಕರುಣಿಸಬಲ್ಲ॥ ೨

---

೩೨. ಯಾದವ ಕೃಷ್ಣ

ರಾಗ: ರೇವತಿ

ಯಾದವ ಕೃಷ್ಣಾ ಏಕೆ ಮೌನಿಯಾದೆಯೋ
ಮಾಧವ ಮಧುಸೂದನ ಮಾತಾಡೋ॥ ॥ ಪ ॥

ಮಂದರೋದ್ಧಾರನೇ ಸುಂದರ ವದನನೇ।
ಕುಂದೆಣಿಸದೆ ಎನ್ನ ಮುಂದೆ ನೀ ಬಾರೋ॥
ಅಂದದುಡಿಗೆ ತೊಡಿಸುವೇ ಚಂದಿರನ ತೋರುವೇ।
ಕಂದಾ ನೀನೆಂದು ನಾ ಅಪ್ಪಿ ಜೋಗುಳ ಪಾಡ್ವೇ॥ ೧

ಚಿಕ್ಕ ಬಟ್ಟಲ ಹಾಲು ಸಕ್ಕರೆ ನಿನ್ನ ಮುಂದಿಡುವೆ।
ಚಕ್ಕುಲಿ ಕರಿಗಡಬು ಸುಕ್ಕಿನುಂಡೆ ನೀಡುವೆ।
ಚುಕ್ಕೆ ಚುಕ್ಕೆ ಚಿತ್ರದ ಹಕ್ಕಿ ತಂದಾಡಿಸುವೆ।
ಚೊಕ್ಕ ಚಿನ್ನದ ಹಾರ ಅಕ್ಕಸಾಲೆ ಬಳಿ ನಾ ತರುವೆ॥ ೨

ಚಲುವ ರಂಗಯ್ಯನೇ ಛಲವ ನೀ ಮಾಡದೇ।
ಕುಲುಕುಲು ನಗುತ ನಿನ್ನ ಕಾಲನಿಡುತ ಬಾರೋ।
ಶೈಲಜಾಸೋದರನೇ ಬಾಲೆ ಶೈಲಜೆ ನಾನೋ।
ಶೈಲಮನವ ತೊರೆದು ಕಲಾಸ್ವರೂಪವ ತೋರೋ॥ ೩

---

೩೩. ಹೀಗಾಗಬಾರದಾಗಿತ್ತು

ರಾಗ: ಚಕ್ರವಾಕ **ತಾಳ: ತ್ರಿಶ್ರನಡೆ ಆದಿ**

ಹೀಗಾಗಬಾರದಾಗಿತ್ತು। ಹೀಗಾಗಬಾರದಾಗಿತ್ತು।
ಹೇ ಕೃಷ್ಣಾ, ಹೇ ಸ್ವಾಮಿ। ಹೇ ನಾಥಾ। ಹೇ ವಿಠಲ॥ ॥ಪ॥

ಸಾಧುಸಂತರ ಸಜ್ಜನರ ನಾನರಿಯೆ।
ವೇದ ಶಾಸ್ತ್ರಪುರಾಣ ಕಥೆಗಳನರಿಯೇ।
ರಾಧಾಕೃಷ್ಣನ ಒಲುಮೆಯ ಮನದಲರಿತು। ಈ
ಮಧುರಗಾನ ಸುಧಾರಸ ಹರಿಸಬೇಕಿತ್ತು॥ ೧

ಶೀಲವಂತನು ಎನ್ನ ಸ್ವಾಮಿ ಎಂದೆಣಿಸಿದೆ।
ಲಲನೆ ನಾ ಪ್ರೀತಿಯೊಳು ನಿನ್ನನೇ ನೆನೆದೆ।
ಕುಲಹೀನ ನೀನೆಂದರಿತರೂ ನಿನ್ನನು ಬಿಡದೆ
ಬಾಲೆ ಶೈಲಜೆ ನಾ ನಿನ್ನ ಭಕ್ತಿಯೊಳು ಮೋಸಹೋದೆ॥ ೨

---

೩೪. ರಾಧಾಕೃಷ್ಣ ಗೋವಿಂದ ಮುರಾರೆ

ರಾಗ: ಸಿಂಧು ಭೈರವಿ ತಾಳ: ಆದಿ

ರಾಧಾಕೃಷ್ಣ ಗೋವಿಂದ ಮುರಾರೆ।
ಮಧುರಾಧಿಪನೇ ಮಧುರವೋ ನಿನ್ನ ಪ್ರೇಮಧಾರೆ॥
ಸಾಧುವೆನಿಸದೋ ಈ ಸಂಸಾರದ ಸೆರೆ।
ಮಾಧವ ನೀಡೋ ನಿನ್ನ ಭಕ್ತಿಯ ಆಸರೆ॥ ೧

ಮೊದಮೊದಲಿಗೆ ನಾ ನಿನ್ನನೇ ನೆನೆದೆ।
ಸುದತಿ ನಾ ನಿನ್ನಲಿ ತನುಮನವನಿತ್ತೆ॥
ಪದುಮನಾಭ ನಿನ್ನ ನಾಮ ನಾ ಪಾಡುತ।
ಮುದದಿ ನಾ ನಿನ್ನೊಳು ಲಯವಾಗ ಬಯಸುವೆ॥ ೨

ಕೃಷ್ಣಾ ಕೃಷ್ಣಾ ಎಂದೊರಲುತಿರೆ ಮನ।
ಕೃಷ್ಣ ಛಾಯೆಯ ಕಾಣದಿರಲಿ ಈ ಜೀವನ॥
ತೃಷ್ಣಳು ನಾ ನಿನ್ನ ಪ್ರೀತಿಗೆ ಅನುದಿನ।
ಕ್ಷಣಕ್ಷಣದೊಳು ನಿನ್ನ ನೆನಪೇ ಪಾವನ॥ ೩

ನೀಲನೇತ್ರನೆ ಗಾನಪ್ರಿಯನೇ।
ಶೀಲವಂತನೇ ಈ ಶೈಲಜಾನುತನೇ॥
ತಾಳರಾಗದಿ ಗಾನ ಮೇಳೈಸಿ ಪಾಡುವೆ।
ಒಲಿದು ನಲಿದು ಬಾ ಎನ್ನ ಕರುಣಿಸೆ ಬಾ॥ ೪

೩೫. ಏಕೋ ನಿನ್ನಯ ನೆನಪೆನಗೇ

ರಾಗ: ಬಾಗೇಶ್ರೀ

ಏಕೋ ನಿನ್ನಯ ನೆನಪೆನಗೇ।
ಈ ಕಾತರ ತಾಳದೆ ಬರುವೆ ನಿನ್ನೆಡೆಗೆ॥ ॥ಪ॥

ಎನ್ನ ಮುಂದೆ ನೀ ನಗುನಗುತಲಿರು।
ಎನ್ನ ಮನಕೆ ತಂಪ ನೆರೆಯುತಿರು।
ಎನ್ನ ಜೀವಕೆ ಉಸಿರು ಹಸಿರು ನೀನಾಗಿರು।
ಭಿನ್ನವಾಗದ ಪ್ರೇಮದಾಸರೆಯ ನೀಡುತಿರು॥ ೧

ಪುಟ್ಟ ಬಾಲನಂತಿರುವ ನಿನ್ನ ಮುದ್ದು ಮುಖಭಾವ।
ದಿಟ್ಟ ಹೆಜ್ಜೆಯನಿರಿಸಿ ಬಳಿ ತಂದಿತೋ ಜೀವ।
ಕೆಟ್ಟ ನಾರಿ ನಾನೆಂದು ಸೊಟ್ಟ ಮೋರೆ ಮಾಡದಿರು।
ಘಟ್ಟಿಯಾಗಿ ಎನ್ನನಪ್ಪಿ ಇಟ್ಟುಕೊಳ್ಳೋ ನಿನ್ನೊಳಗೇ॥ ೨

ನಿನ್ನ ಪ್ರೀತಿಯೆ ಎನಗೆ ಜೀವನದ ಹಾದಿಯಲಿ।
ಸನ್ನುತಾಂಗ ಶ್ರೀ ಹರಿಯ ಒಲುಮೆಯಾಗಲಿ।
ಬಿನ್ನವಿಸುತಲಿ ಎನ್ನ ತನುಮನವ ನೀಡುತಲಿ।
ಮನ್ನಿಸೆನ್ನ ಸ್ವೀಕರಿಸೋ ಶೈಲಜಾನುತನೇ॥ ೩

---

೩೬. ಎನ್ನ ಛೇಡಿಸಬೇಡ

ರಾಗ: ವಾಸಂತಿ **ತಾಳ: ಆದಿ**

ಎನ್ನ ಛೇಡಿಸಬೇಡ ಎನ್ನಲ್ಲಿ ಛಲಬೇಡ।
ಎನ್ನನ್ನು ಕಾಡಬೇಡ ಎನ್ನ ಕೈ ಬಿಡಬೇಡ॥ ॥ಪ॥

ನೀನಂದ ಮಾತೆಲ್ಲ ಸವಿಯಾದ ಜೇನುಬೆಲ್ಲ।
ಏನೆಂದು ಬಲ್ಲೆನೆಲ್ಲ ನಾ ಪೇಳೋದಿಲ್ಲ।
ಏನಾದರೂ ಇಲ್ಲ ಎಂತಾದರೂ ಇಲ್ಲ।
ನಾ ನಿನ್ನ ಬಿಡುವುದಿಲ್ಲ ನೀನೇ ನನಗೆಲ್ಲ॥ ೧

ಎಂತಿಹುದೋ ಈ ಜೀವ ಏನಿಹುದು ಆ ಭಾವ।
ನಿಂತು ನೋಡಲೋ ದೇವ ಇಂತು ಕಾಣಿಸೋ ತಾವ।
ಸಂತ ಸುಜನರಿಗೊಲಿವ ಕಾಂತ ನೀನೆಂದರಿವ।
ಶಾಂತ ಮನವ ನೀಡೋ ಪರವಾಸುದೇವ॥ ೨

ಕಾಲವು ಕಳೆಯಿತಲ್ಲ ಭಕ್ತಿಯು ಬರಲಿಲ್ಲ।
ನೀಲವರ್ಣನೆ ನಿನ್ನ ನಾ ಕಾಣಲಿಲ್ಲ।
ಲಲನೆ ನಾನಹುದಲ್ಲ ನಿನ್ನೆಡೆಗೆ ಬಾರೆನಲ್ಲ।
ಶೈಲಜಾನುತ ನಿನಗಾಗಿ ನಾ ಕಾದಿಹೆನಲ್ಲ॥ ೩

---

೩೭. ಧನ್ಯಳಾದೆನಿಂದು

ರಾಗ: ಅಠಾಣ ತಾಳ: ಆದಿ

ಧನ್ಯಳಾದೆನಿಂದು ಧನ್ಯಳಾದೆ ನಾ।
ಪುಣ್ಯಪುರುಷ ಶ್ರೀಕಾಂತನ ದರುಶನದಿ॥ ॥ಪ॥

ಅನ್ಯಳು ನಾನೆಂದು ಭಾವಿಸದಿರೋ ರಂಗ।
ಕನ್ಯೆಯು ಇವಳೆಂದು ದೂಡದಿರೋ ರಂಗ।
ಹೊನ್ನಿಂದ ಕುನ್ನಿಯವರೆಗೆ ನಿನ್ನದೆಲ್ಲವೋ ರಂಗ।
ಚೆನ್ನಾಗಿ ನೋಡಿಕೊಳ್ಳೋ ಬರುವೆ ನಿನ್ನೆಡೆಗೆ ರಂಗ॥ ೧

ಹೆಣ್ಣು ಹೊನ್ನು ಮಣ್ಣುಗಳಿಂದಾದ ಈ ಬಾಳಹಾದಿ।
ಸುಣ್ಣ ಬಣ್ಣವಾಗಿಹುದೋ ಬಲು ಸಂತಸದಿ।
ಸುಣ್ಣದ ಮೇಲುಗೈಯಿಂ ಬಾಳು ಹುಣ್ಣಾಗದೇ।
ಸಣ್ಣತನದಾಸೆ ಬಿಟ್ಟುಬರುವೆನೋ ನಿಜದೆ॥ ೨

ಶಿಲೆಯಲ್ಲಿ ಕಲೆಯಲ್ಲಿ ಗುಡಿ ಗೋಪುರದಲಿ
ಒಳ್ಳೆಯ ರೂಪವಿತ್ತು ಕಾಣ್ಬರೋ ನಿನ್ನನಲ್ಲಿ।
ಲಲನೆ ಶೈಲಜೆ ನಾ ಮರೆಹೊಕ್ಕೆ ನಿನ್ನಲಿ।
ಸುಲಭ ಮೋಹನ ರೂಪನಾಗಿ ಕಂಡೆ ಎನ್ನಲಿ॥ ೩

೩೮. ಎಲ್ಲಿ ಇದ್ದೆಯೋ, ಏಕೆ ಬಂದೆಯೋ

ರಾಗ: ಮಧ್ಯಮಾವತಿ ತಾಳ: ಮಿಶ್ರಛಾಪು

ತಾನೋ ತಂದಾನೋ ತಾನೋ ತಂದಾನೋ
ತನೋ ತಂದನಾನೋ ತಾನೋ ತಾನೋ ತಂದನಾನೋ ॥ ಪ ॥

ಎಲ್ಲಿ ಇದ್ದೆಯೋ ಏಕೆ ಬಂದೆಯೋ।
ಮೆಲ್ಲನೆ ಎನ್ನ ಮನವ ಗೆದ್ದೆಯೋ॥
ಪುಲ್ಲಲೋಚನ ಶ್ರೀಕಾಂತನೇ ಗೋವಿಂದಾ।
ನೀನಿಲ್ಲಿಯೇ ಇದ್ದು ತಾ ಎನಗಾನಂದ॥ ೧

ದಾಸ ದಾಸರ ಜಾತಿಯವಳೋ ನಾ।
ಹೇಸಿಕೆಯ ಹೆಣ್ಣು ಜನುಮದವಳೋ॥
ಲೇಸು ಲೇಸಯ್ಯ ಈಸಲೀ ಜನುಮ।
ಗೋವಿಂದಾ ನಿನ್ನಾಸರೆಯ ನೀಡು ಬಾ ಮುಕುಂದಾ॥ ೨

ಹಾಲು ಹಣ್ಣನು ಉಣ್ಣಲಿಡುವೆ।
ಕಾಲಲಂದುಗೆ ಗೆಜ್ಜೆ ತೊಡಿಸುವೆ॥
ಮೇಲೆ ಸೊಂಟಕೆ ಪಟ್ಟಿ ಕಟ್ಟುವೇ ಗೋವಿಂದಾ।
ಜಾಲಮಾಡದೆ ಎನ್ನ ಬಳಿ ಬಾ ಕಂದಾ॥ ೩

ಎನ್ನ ಮನೆಯ ಮುದ್ದಿನರಗಿಣಿ।
ಎನ್ನ ಮನದ ಚಿನ್ನದಾಗಿಣಿ॥
ಹೊನ್ನ ಬಳೆ ಕಿಣಿಕಿಣಿಯು ನಿನ್ನದೇ ಗೋವಿಂದಾ।
ಕನ್ನೆ ನಾನಿಹೆ ಎನ್ನ ಬಳಿ ಬಾ ಕಂದಾ॥ ೪

ಬಾಲೆ ಶೈಲಜೆ ನಾನೋ ನಿಜದಿ।
ಶೀಲವಂತಳು ಕೇಳೋ ಮುದದಿ॥
ಶೈಲಜಾನುತ ನಿನ್ನ ಪ್ರೇಮವಾ ಗೋವಿಂದಾ।
ಕಾಲಕಾಲಕು ನೀಡಿ ತಾ ಎನಗಾನಂದ॥ ೫

೩೯. ಹುಟ್ಟಡಗಿಪನೇನೇ ಇವನಿನ್ನ

ಹುಟ್ಟಡಗಿಪನೇನೇ ಇವ ನಿನ್ನ
ಹುಟ್ಟಡಗಿಪನೇನೇ ಇವ। ಎನ್ನ
ಸೃಷ್ಟಿಯಲಿ ಮತ್ತೆ ಮತ್ತೆ ತಾ ಹುಟ್ಟಿ।
ಕಷ್ಟಪಡುತಿಹ ಇವ ಎನ್ನ॥ ॥ಪ॥

ಹತ್ತು ಹಲವು ನಾಮರೂಪ ಭೇದದಿಂದ।
ಹೊತ್ತು ದೇಹವ ಜಗಕುಪಕರಿಸೆನೆಂದು।
ಸುತ್ತಿ ಬಳಸಿ ಬಸವಳಿದು ತನ್ನ
ಹೊತ್ತು ಬಂತೆಂದು ಮತ್ತೆ ಮಾಯವಾಗುವ ಇವ॥ ೧

ರಾಮ ಶ್ಯಾಮ ಬಲರಾಮ-ಭೀಮನಿವ।
ವಾಮದೇವ ಸೋಮ ಸೂರ್ಯಾಗ್ನಿ ನೇತ್ರ ಶಿವ॥
ತಾಮಸ ಜನರ ನಿಗ್ರಹಿಸೆ ಬರುವ ಶರ್ವ।
ಕಾಮೇಶ್ವರ ಶೈಲಜಾನುತನೇ ಇವ॥ ೨

---

೪೦. ನಿನ್ನಾಟವ ನಾನೇನ ಬಲ್ಲೆ

ರಾಗ: ಧರ್ಮವತಿ ತಾಳ: ಆದಿ

ನಿನ್ನಾಟವ ನಾನೇನ ಬಲ್ಲೆನಯ್ಯ।
ಎನ್ನಂತರಂಗದೊಳು ನೀನಿಂತಾಡುವ॥ ॥ಪ॥

ಬಣ್ಣ ಬಣ್ಣದ ಬದುಕು ಕಣ್ಮನವ ತಣಿಸುತಿರೆ।
ಹೊನ್ನು ಹನ್ನೊಂದಾಗಿ ಕಾಲ ಬಳಿ ಸುರಿಯುತಿರೆ।
ಚೆನ್ನಾದ ಹಣ್ಣೊಂದ ಸವಿಯುತಿಹ ಬಾಯೊಳಗೆ।
ಸಣ್ಣ ಹುಳುವೊಂದು ಹೊಕ್ಕಿ ಬಾಯ್ತೊಳೆಯುವಂತೆ ಮಾಳ್ಪ॥ ೧

ಹೊಟ್ಟೆ ಹೊಲೆಯನ ಮನೆಯ ನುಗ್ಗಿಸುವ ತೆರನಂತೆ।
ಭ್ರಷ್ಟ ಜೀವನನಾಗಿ ಸುಖಿಸಿ ಇಷ್ಟಬಂದಂತೆ।
ಕಷ್ಟ ಬಂದಾಗ ನಿನ್ನ ನಿಷ್ಠೂರ ಮಾಡುತಲಿ।
ಕೆಟ್ಟು ಹುಟ್ಟಿನ ದುಷ್ಟ ಪಾಪಿ ಎಂದೆನಿಸುವಂಥ॥ ॥ನಿನ್ನಾಟ॥

ನೀಲನೇತ್ರನೇ ಹರಿ ಸುನೀಲಗಾತ್ರನೆ।
ನಾಲಿಗೆಗೆ ನಿನ್ನ ನಾಮಾಮೃತದ ಸವಿ ಚೆನ್ನ।
ಶೈಲಜಾನುತ ನಿನ್ನ ಸುಲಭದಲಿ ಸೇರುವಂಥ।
ಛಲದ ಎನ್ನ ಚಿತ್ತದಲಿತ್ತು ಬಲವ ನೀ ನೀಡುವಂಥ॥ ॥ನಿನ್ನಾಟ॥

---

೪೧. ಏನು ಮಾಡಲೋ ಹರಿ ನಾ ಏನು ಮಾಡಲೋ

ರಾಗ: ಹಂಸಾನಂದಿನಿ ತಾಳ: ಖಂಡಛಾಪು

ಏನು ಮಾಡಲೋ ಹರಿ ನಾ ಏನು ಮಾಡಲೋ॥ ॥ಪ॥

ದಿನದಿನವು ಹಗಲಿರುಳು ಈ ಭವದ ಜಂಜಡವು।
ಧ್ಯಾನ ಮೌನದೊಳಿರಲು ಸಿಗಲೊಲ್ಲದೋ ಬಿಡುವು॥
ಏನೇನೋ ಮನದೊಳಗೆ ಅರ್ಥವಿಲ್ಲದ ಅರಿವು।
ನಿನ್ನಾರವ ನೆನೆದಾಗ ಬದುಕೇ ನಿರರ್ಥಕವು॥ ೧

ಎಲ್ಲಿರುವೆ ನೀನು ಎಂತಿರುವೆ ಏನು?
ಎಲ್ಲೆಲ್ಲಿ ಹುಡುಕಿದರೂ ಕಾಣಲೊಲ್ಲೆಯೇನು?
ಮಲ್ಲೆಹೂವೋ ನೀನು ಗೊಲ್ಲಗೋಪನೋ ನೀನು।
ತಲ್ಲಣಿಸಿಹ ಮನದೊಳು ಹುಡುಕುತಿಹೆ ನಾನು॥ ೨

ಕವನ ರೂಪದಿ ನಿನ್ನ ಕಾಣಹೋಗುವೆ ನಾನು।
ಭುವನ ಜೀವನಕೆಲ್ಲಾ ಸೂತ್ರಧಾರಿ ನೀನು।
ಜವನ ಕರೆಬಂದಾಗ ತತ್ತರಿಸುವೆ ನಾನು।
ಜವನು ಶಿವ ಕೇಶವನು ಶೈಲಜಾನುತ ನೀನು॥ ೩

---

೪೨. ಎನ್ನನವಮಾನಿಸುತ

ರಾಗ: ಸುರಾನಂದಿನಿ **ತಾಳ: ತ್ರಿಶ್ರನಡೆ ಆದಿ**

ಎನ್ನನವಮಾನಿಸುತ ನಗುತಿರುವೆ ಏಕೋ।
ಹಗೆತನವು ಸಾಕೋ।
ಬಿನ್ನಪವ ಕೇಳದೆಲೆ ಮೊಗಮುರಿವುದೇಕೋ।
ಬಿಗುಮಾನ ಸಾಕೋ।
ಬಗೆ ಹರಿಸೋ ಈ ಧಗೆಯ ಚಿಲುವರಂಗಯ್ಯ॥ ೧

ಅಂದು ನೀ ಎನ್ನ ಮುಂದೆ ನಗುತ ನಿಂತಾ ನೆನಪು।
ಅಂದುಗೆಯ ಕಾಲ್ಗೆಜ್ಜೆ ನಾದ ತುಂಬಿದ ಇಂಪು।
ಚಿಂದುಟಿಯ ಅಂಚಿನಲಿ ದಂತ ಮೆರೆದಾ ಹೊಳಪು।
ಸುಂದರಾಂಗನೆ ನಿನ್ನ ಸರ್ವಾಂಗ ಸೊಂಪು।
ಕಣ್ ತಣಿವ ಜೋಂಪು ಮನತಣಿವ ತಂಪು।
ಕುಂದದಾನಂದವನೇ ನೀಡು ಬಾ ಪಾಪು॥ ೨

ಮದನ ಮೋಹನ ಬಾರೋ ಸುದತಿ ನಾನಹುದಲ್ಲೋ।
ವದನಕೊಪ್ಪುವ ಕೇಶ ಕುರುಳು ತಿದ್ದುವೆ ನಿಲ್ಲೋ।
ಹದಗೆಡದ ಪಾಲ್ ಮೊಸರು ಬೆಣ್ಣೆ ತಂದಿಹೆ ಮೆಲ್ಲೋ।
ಮೃದುಭಾಷೆ ತೊದಲ್ನುಡಿ ಎನ್ನೆದೆ ಮಿಡಿಸುವುದಲ್ಲೋ।
ಸಂತಸದ ಸೊಲ್ಲೋ ವಸಂತವನೆ ಚೆಲ್ಲೋ।
ಯದುಕುಲೋತ್ತಮ ಶೈಲಜಾನುತನೆ ಪೇಳೋ॥ ೩

೪೩. ಎಂಥ ಪುಣ್ಯವಂತಳೋ

ರಾಗ: ಅಭೇರಿ **ತಾಳ: ಆದಿ**

ಎಂಥ ಪುಣ್ಯವಂತಳೋ ನಿನ್ನಮ್ಮಾ
ಕಂತುಪಿತ ಶ್ರೀಶನ ಮಗನೆಂದಾಡಿಸುವ ॥ ॥ ಪ ॥

ಸ್ವಂತ ಮತಧರ್ಮಗಳ ಸ್ಥಾಪಿಸಿದ ಮಹಾತ್ಮರು ।
ಪಂಥ ಭೇದದಿ ಮನದ ನಿಶ್ಚಿಂತೆ ಕಳೆದರು ॥
ಶಾಂತ ಮನಕೆ ಏಕಾಂತವನರಸುವ ।
ಸಂತ ಸಜ್ಜನರಿಗೂ ನೀ ಕಾಣೆಯೋ ಮಾಧವ ॥ ೧

ಹಗಲಿರುಳು ನಿನ್ನಾರೈಕೆಗೆ ಮನವಿಟ್ಟು ।
ಜಗದೊಡೆಯನೆ ನಿನ್ನ ತೂಗುತ ತೊಟ್ಟಿಲಿಟ್ಟು ।
ಭಗವಂತ ನೀನೆಂದರಿತು ಸಂತಸಪಟ್ಟು ॥
ಸೊಗದಲಿ ದಿನಕಳೆವ ಆ ಭಾಗ್ಯ ಯಾರಿಗುಂಟು ? ॥ ೨

ಕಲಕಲರವದ ನಿನ್ನ ಕೊಳಲನಾದವು ಚೆಂದ ।
ಕುಲುಕುಲು ನಗುವ ನಿನ್ನ ಮುದ್ದು ಮೊಗವು ಚೆಂದ ।
ಘಲುಘಲುರೆನುತ ಹೆಜ್ಜೆಯನಿಕ್ಕುತ ಬಾ ಮುಕುಂದ ।
ಶೈಲಜಾನುತ ನಿನ್ನ ಪಾಡುವುದಾನಂದ ॥ ೩

---

೪೪. ಇದೇ ಎನಗಿದೇ ಮಹಾನಂದ

ರಾಗ: ಅಭೇರಿ **ತಾಳ: ಆದಿ**

ಇದೇ ಎನಗಿದೇ ಮಹಾನಂದ ನಿನ್ನ ।
ಪಾಡುತಿರುವುದೇ ಪರಮಾನಂದ ।
ಪಾಡುತಿರುವುದೇ ಬ್ರಹ್ಮಾನಂದ ॥ ॥ ಪ ॥

ಪದುಮನಾಭ ಪರಾತ್ಪರ ಪಾದ ।
ಮದನ ಮೋಹನ ಮಾಧವ ಮುಕುಂದ ।
ಸುದತಿ ಯಶೋದೆಯ ಆನಂದ ಕಂದ ।
ಮುದದಿಂದರಳೇ ಈ ಹೃದಯಾರವಿಂದ ॥ ೧

ಅಚ್ಯುತಾನಂತ ಗೋವಿಂದ ನಿನ್ನಾಶ್ರಯ।
ಮೆಚ್ಚುವ ಸುಜನರ ಸಂಗ ಲೇಸಯ್ಯ।
ಹುಚ್ಚು ಹಿಡಿವುದೋ ನಿನ್ನ ನಾಮ ಅಪಾಯ।
ಹೆಚ್ಚು ಹೇಳಲು ನಾ ಅರಿಯೆ ಉಪಾಯ॥ ೨

ಮಾನಿನಿ ಎನ್ನ ಶೈಲಜೆ ಎಂತೆಂಬೊರು।
ಅನುದಿನ ಶೈಲಜಾನುತ ನೀನಾಗಿರು।
ಕನವರಿಸುವೆ ಎನ್ನ ಚಿತ್ತದಿ ನೀನಿರು।
ಮನುಜರು ಎನ್ನಲಿಹ ನಿನ್ನನು ಕಾಣರು॥ ೩

---

೪೫. ಬಡತನ ಭುವಿಯಲಿ

ರಾಗ: ಆನಂದ ಭೈರವಿ ತಾಳ: ಆದಿ

ಬಡತನ ಭುವಿಯಲಿ ಬಲು ಕಷ್ಟ। ನಿನ್ನ
ಬಿಡದೆ ಧ್ಯಾನಿಪುದು ಅತಿ ಕಷ್ಟ॥ ॥ಪ॥

ಹೊಟ್ಟೆ ಬಟ್ಟೆಗೂ ಹೋರಾಟವ ನಡೆಸುವ।
ಕೆಟ್ಟ ಜೀವನವಿದೂ ಕಡುಕಷ್ಟ।
ಬಿಟ್ಟಿ ಸಿಗುವ ನಿನ್ನ ನಾಮಾಮೃತವನು।
ಇಷ್ಟ ಪಡದವರ ಕಷ್ಟ ಮಹಾಕಷ್ಟ॥ ೧

ಅರಿಯದ ಕರ್ಮಗಳ ಉರಿಯಲಿ ಬೇಯುವ।
ನರಜನ್ಮವಿದು ಅಯ್ಯೋ ಭಾರಿ ಕಷ್ಟ।
ಹರಿನಿನ್ನಾಶ್ರಯ ಸರಿ ಎಂದೆನದ ಯಾವ
ಸುರನರ ಅಸುರನೂ ಬಗೆಹರಿಯದ ಕಷ್ಟ॥ ೨

ಹಣಗುಣ ಘನತೆ ಗೌರವದಲಿ ಬೀಗುತ (ಸದ್)
ಗುಣಿ ಎಂದೆನುವುದು ಅದೂ ಕಷ್ಟ।
ಮಾನಿನಿ ಶೈಲಜೆಯ ಮನದಿಂಗಿತವನು।
ಜ್ಞಾನಿಶೈಲಜಾನುತ ನೀ ಅರಿಯದಿರೆ ಕಷ್ಟ॥ ೩

೪೬. ಏನು ಮಾಡಲೋ ಹರಿ ನಾನೇನು ಮಾಡಲೋ

ರಾಗ: ತಿಲಕ್ ಕಾಮೋದ್ ತಾಳ: ಆದಿ

ಏನು ಮಾಡಲೋ ಹರಿ ನಾನೇನು ಮಾಡಲೋ।
ಇದು ನಿನ್ನ ಮಾಯೆಯೋ ಈ ಬದುಕಿನೊಳಗ ಭ್ರಾಂತಿಯೋ॥ ॥ಪ॥

ನಿನ್ನ ನೆಲೆ ಅರಿಯದೆಯೆ, ನಿನ್ನಿರವ ಮರೆಯದೆಯೆ।
ಭಿನ್ನ ಭಿನ್ನವಾಗಿಹುದೈ, ಮನಶ್ಶಾಂತಿ ಕಾಣದೆಯೆ॥
ಸನ್ನುತಾಂಗನೆ ಎನ್ನ ಮೊರೆಕೇಳಿ ತೋರೋ ದಯೆ।
ಹೊನ್ನು, ಹಣ ಬೇಡವೋ ನೀನೆನ್ನ ಭವಮಾಯೆ॥ ೧

ತರುಣಿ ನಾನೆಂದು ನೀ ಸರಿಯೆದೂರ, ತರವಲ್ಲ।
ಕರುಣಿಸೆಂದು ನಿನ್ನ ಧರ್ಮ ಚರಣಕೆರಗಿದವಗೆಲ್ಲಾ॥
ಹರಿನಮ್ಮ ಶೈಲಜಾನುತನ ನಾಮದ ಸೊಲ್ಲ।
ನಿರುತ ಪಾಡುವ ಪುಣ್ಯ ಸುಲಭದಲಿ ಸಿಗದಲ್ಲಾ॥ ೨

---

೪೭. ದೂರ ನೀನು ಸರಿದೆ

ರಾಗ: ಯಮುನ್ ತಾಳ: ಆದಿ

ದೂರ ನೀನು ಸರಿದೆ ಅದೇಕೆ
ನಾರಿ ನಾನೆಂಬ ಭಯವು ಏಕೆ?॥ ॥ಪ॥

ನೀರಜಾಕ್ಷ ನೆರೆ ನಿನ್ನ ನಂಬಿದೆ।
ಪಾರುಗಾಣಿಸೋ ಪರಮ ಪುರುಷ ಹರಿ॥ ॥ಅ. ಪ.॥

ವಿನುತಾಸುತನ ನೀ ಕಳುಹೇ ಎನ್ನೆಡೆಗೇ।
ಮನ ಹಿಗ್ಗಿ ಆ ಮಗನ ಕಂಡಾನಂದವಾಗೇ॥
ಏನೀ ಮಾಯೇ, ಅವ ತಿಳಿಯನೋ ಈ ಬಗೆ।
ಇನಿತು ನೀ ಕನಿಕರಿಸೆ ಬರುವ ಅವ ಎನ್ನೆಡೆಗೇ॥ ೧

ರಾಮ ಶ್ಯಾಮ ಸುಖಧಾಮ ನೀನೆಂದೇ।
ಪ್ರೇಮದಿಂದ ಗಾನ ಪಾಡಿ ನಲಿದೆ॥
ತಾಮಸವ ಮಾಡದೆಲೆ ಮುಂದೆ।
ಕ್ಷೇಮದಿಂದ ಕಾಯೋ ಶೈಲಜಾನುತ ತಂದೆ॥ ೨

---

೪೮. ಗುರು ದರುಶನಕೆ

ರಾಗ: ಶ್ರೀಮಣಿರಂಗ್ ತಾಳ: ಆದಿ

ಗುರುದರುಶನಕೆ ಎನಗಡ್ಡಿಯನೊಡ್ಡಿ
ಹರಿ ನೀ ನಗುವೆಯಾ? ಎನ್ನ ನೋಡಿ॥ ॥ಪ॥

ತ್ವರಿತದಿ ಬರುವೆನೋ ಭರದಿಂದೋಡೋಡಿ।
ಗುರುಕೃಪೆ ಸಿಗದಂತೆ ಮಾಡದಿರೋ ಖೋಡಿ॥ ॥ಅ. ಪ.॥

ತುಂಗಭದ್ರಾ ಸೌಪರ್ಣಿಕಾ ಸ್ನಾನದಿಂ।
ಅಂಗಾಂಗವೆಲ್ಲ ಶುದ್ಧ ಬಂಗಾರವಾಯಿತೋ॥
ಮಂಗಳಾಂಗ ವೇಣುಗೋಪಾಲನ ಕಂಡು ಈ।
ಅಂಗನೆ ಕಣ್ಗಳು ಪಾವನವಾಯಿತೋ॥ ೧

ಮೂಕಾಂಬಿಕೆ ತಾಯಿ ಎನ್ನಲಿ ದಯೆತೋರಿ।
ಸಾಕಲ್ಯಕೆ ಸಾಕ್ಷಾತ್ಕರಿಸಿದಳೇ ದಾರಿ॥
ಲೋಕನಾಯಕಿ ಶ್ರೀ ಶೃಂಗೇರಿ ಶಾರದೇ।
ಏಕಾಕ್ಷರದಲಿ ಎನಗೊಲಿವಳೋ ನಿಜದೇ॥ ೨

ಹರಿಯು ನೀನೇ ಎನ್ನ ಗುರುವು ನೀನೇ।
ಹರಿಹರ ಬ್ರಹ್ಮಾದಿ ಸೃಷ್ಟಿ ಸಕಲವು ನೀನೇ॥
ತರುಣಿ ಈ ಶೈಲಜೆಯ ನರನಾಡಿಗಳಲಿ।
ನಿರುತವು ಹರಿಯುವ ಚೈತನ್ಯ ನೀನೇ॥ ೩

---

೪೯. ಇಂದೆನಗೆ ಅರಿವಾಯಿತು

ರಾಗ: ಕಾಂಬೋಧಿ **ತಾಳ: ತಿಶ್ರಗತಿ**

ಇಂದೆನಗೆ ಅರಿವಾಯಿತು ಇಂದಿರೇಶ ನೀ ಎನ್ನ
ಹಿಂದೆನಿಂತು ಕಾಯ್ವೆ ಎಂದು ॥ ॥ ಪ ॥

ಮಂದಮತಿಯು ನಾ ನಿನ್ನ
ನಿಂದಿಸುತ್ತ ದಿನವ ಕಳೆದೆ।
ನೊಂದ ಮನದಿ ಬೇಡುವೆ (ಎನ್ನ)।
ಕುಂದೆಣಿಸದೆ ಕರುಣಿಸೋ।
ಬಂಧುರನಿಹ ಈ ಬದುಕ-
ಚಂದದಿಂದ ಸಾಗಿಸುತ್ತ।
ಒಂದು ಕ್ಷಣವು ನಿನ್ನ ಮರೆಯ-
ದಂದದಿ ಎನ್ನ ಮನದಿ ನೆಲಸೋ ॥ ೧

ಇಂದು ನಮ್ಮ ಕುಲದ ದೈವ।
ಸುಂದರಾಂಗ ವೀರರಾಘವ।
ಎಂದೆಂದೂ ಈ ಭಕ್ತಿಭಾವ।
ಕುಂದದಂತೆ ಕಾಯೋ ದೇವ।
ಅಂದಗೆಡುವ ಈ ಜೀವ-
ಕೆಂದೂ ಕಾಣದಂತೆ ನೋವ।
ಚೆಂದದಿಂದ ಸಲಹೋ ಮಾಧವ।
ಕಂದರ್ಪಿತ ಚೆಲುವ ಕೇಶವ ॥ ೨

ಬಂದ ಭಾಗ್ಯ ಬವಣೆ ಎಲ್ಲಾ।
ಸಂದ ಪಾಪ ಪುಣ್ಯವೆಲ್ಲಾ ಮು-
ಕುಂದಾ ನಿನ್ನಾಟವೆಲ್ಲಾ ಸಂದೇಹವಿಲ್ಲಾ ಆ-
ನಂದದಿಂದ ನಾ ನಿನ್ನ
ಸಂಧಿಸಿ ಪಾಡುವ ಕಾಲ।
ಎಂದಿಗೆನಗೆ ಒದಗಿಪೆ ಗೋ-
ವಿಂದ ಶೈಲಜಾನುತ ಗೋಪಾಲ ॥ ೩

೫೦. ಏನಾದರೇನಯ್ಯ

ರಾಗ: ಮಧ್ಯಮಾವತಿ ತಾಳ: ಆದಿ

ಏನಾದರೇನಯ್ಯ ಇನಿತು ಭಯವಿಲ್ಲಯ್ಯ।
ದಾನವಾಂತಕ ನಿನ್ನ ದಯೆ ಒಂದಿರಲಯ್ಯ॥ ॥ಪ॥

ಚಾರು ಮಂದಿಯೊಳಗೆ ಎನ್ನ ದೂರು ನೀ ಮಾಡುತಲಿ।
ಸಾರ ಸಂಸಾರದೊಳು ನೇರನರಕವ ತೋರಿ।
ಭಾರಿ ಕಾರ್ಯವ ಗೈದ ಪರಿ ನೀ ಬೀಗುತಿರೆ-
ಪಾರುಗಾಣಿಪರಾರೋ ಹರಿಯೇ ನೀ ಮುನಿದರೆ?॥ ೧

ಹುಟ್ಟು ಹೇಗಿರಬಹುದೆಂದು ನೀನರಿತು ಎನ್ನ।
ಹುಟ್ಟಡಗಿಪ ರೀತಿಯೆ, ಇದು ಸರಿ, ಸಂ-
ಕಷ್ಟಕೋಟಲೆ ದಾಟಿ ಸಂತುಷ್ಟಿ ಶಾಂತಿಯಿಂ।
ಹುಟ್ಟು ಸಾರ್ಥಕಗೊಳಿಪ ದಾರಿ ತೋರೋ ಹರಿ॥ ೨

ತರುಣಿ ಶೈಲಜೆ ನಾನು ಈ ಶೈಲಜಾನುತ ನೀನು।
ಕರುಣೆಯಿಂದೆನ್ನ ಮರುಳುತನ ನೀಗುವೆ ಏನು?
ಸರಸಿಜಾಕ್ಷನೆ ಎನ್ನ ಮೊರೆ ಕೇಳದೇನೋ?
ಸರಸರನೆ ಬಂದೆನ್ನ ಪೊರೆಯಬಾರದೇನೋ?॥ ೩

---

೫೧. ನಾನೇನಪರಾಧಗೈದೆನೋ

ರಾಗ: ಸಾರಮತಿ ತಾಳ: ಆದಿ

ನಾನೇನುಪರಾಧ ಗೈದೆನೋ ಹರಿ।
ನೀನೆನ್ನ ಕಡೆಗಾಣಿಸುವಂಥ ಈ ಪರಿ॥ ॥ಪ॥

ಹನಿ-ಹನಿ ನೀರು ಸಾಗರಸೇರುವಂತೆ।
ಕೆನೆ-ಹಾಲಿನಲಿ ನವನೀತ ವಿರುವಂತೆ।
ಗೊನೆಬಾಳೆಯೊಂದರಲಿ ಅಮೃತವಿರುವಂತೆ।
ತನಿಯಾಗೇ ಎನ್ನ ಕರೆದು ಕಾಯೋ ದೊರೆಯೆ॥ ೧

ದಿನದುದಯದೊಳೆದ್ದು ನಿನ್ನ ನಾಮವ ನುಡಿವೆ।
ಅನುಗಾಲವು ನಿನ್ನ ನೆನಪಿರಲೆನುವೆ।
ತನುಮನ ನಿನ್ನದೆಂದು ಜಪಿಸಿ ನಾನರ್ಚಿಸುವೆ।
ಘನತೆ ನಿನಗದೇನೋ? ನಾ ಕರೆಯೆ ಬಾರದಿರುವೆ?॥ ೨

ಪರಮಾತ್ಮ ನೀನೆಂದು ಪರತತ್ತ್ವನರಿಯಲೆಂದು।
ಪರಮಪುರುಷ ನಿನ್ನಡಿಯ ಕಾಣಲೆಂದು।
ಪರಿ ಪರಿ ವಿಧದಲಿ ನಾ ಮೊರೆಯಿಟ್ಟರೂ ನೀನೆ।
ಪರರಂತೆನ್ನ ಪರಿಗಣಿಸದೆ ಶೈಲಜಾನುತನೆ॥ ೩

---

೫೨. ಬಿಗಿದ ಉತ್ತರೀಯದಲಿ

ರಾಗ: ಹಿಂದೋಳ ತಾಳ: ಖಂಡಛಾಪು

ಬಿಗಿದ ಉತ್ತರೀಯದಲಿ ಸಿಗಿದು ಸುತ್ತಿದವಸ್ತ್ರ।
ಮಿಗಿಲಾದ ಅಕ್ಷಯಾಂಬರವ ಇತ್ತಂತೆ॥ ॥ ಪ ॥

ಅಗುಳು ಅನ್ನವ ತಿಂದು, ಉಗುಳು ನುಂಗುತ ನೀನು।
ಬಗೆಮಿಗೆಯ ಅಕ್ಷಯ ಪಾತ್ರೆ ಇತ್ತಂತೆ।
ಮುಗುಳುನಗೆ ಸ್ನೇಹದಲಿ, ಜಗಿದು ಹಿಡಿಯವಲಕ್ಕಿ।
ನಿಗಿನಿಗಿಪ ನಗನಾಣ್ಯ ಸುಧಾಮಗಿತ್ತಂತೆ॥ ೧

ಯುಗಪುರುಷ ಸೊಗಸಿನಲಿ, ಬಗೆಬಗೆಯ ವೇಷದಲಿ।
ನಗುನಗುತ ಹಗೆತನವ ನೀಗಿನಿಂತೆ।
ಮಗುವಾಗಿ, ಮಿಗವಾಗಿ ಮೊಗವಡಿದೆ ಜಗವೆಲ್ಲ।
ಸುಗತ ಸದ್ಗುಣಿ ಎಂದು ಪೊಗಳುವರು ನಿನ್ನೆಲ್ಲ॥ ೨

ಮಿಗಿಲಾದ ಭಕ್ತಿಯಿಂ ಚಿಗುಳಿಕೊಟ್ಟರೂ ನೀನು।
ಜಿಗಿಜಿಗಿದು ಬಂದೆನ್ನ ಬಿಗಿದಪ್ಪಿ ಕೊಳ್ಳಲಿಲ್ಲ।
ಮುಗಿಲಿಂದಿಳಿದು ಈ ಮುಗುದೆ ಮನವಿಯಕೇಳೋ।
ನಿಗಮಗೋಚರ ಎನ್ನೀ ಜಗದ ಜಂಜಡಸೀಳೋ॥ ೩

ಹಗಲಿರುಳು ನಿನ್ನಿರವು ಪಗಿಲಾಗೆ ಈ ಮನವು।
ತಗದು ತಗದೋ ಭಕ್ತಿ ಗಗನಕೇರಿದೆ ನಿಜವು।
ಖಗವಾಹನ ನೀನು ತಗಲೂಫಿ ಮಾಡದೆಲೆ।
ಅಗಣಿತ ಮಹಿಮನೆಂದಿಹಪರ ಕಾಯ್ದುಕೊಳ್ಳೋ—
ಈ ಶೈಲಜಾನುತನೇ॥ ೪

೫೩. ಭವದ ಋಣ

ರಾಗ: ಕನ್ನಡ **ತಾಳ: ಖಂಡಛಾಪು**

ಭವದ ಋಣ ಎನಗಂಟದಂತೆ ನೀ ಕಾಯೋ ಶ್ರೀ-
ಧವ ನಿನ್ನ ನಾಮ ಎನ ನರನಾಡಿ ನುಡಿಯಲೋ॥ ॥ಪ॥

ನಿನ್ನ ಕರುಣೆ ಎನಗಿರಲು ಈ ಜಗದ ಜೀವನ।
ತನ್ನಿರವ ತನಗಿಟ್ಟು ತೋರಲೆನಗಾತ್ಮನ।
ಎನ್ನೊಳಗೆ ನೀ ನಿಂತು ತನುಮನವನಾಡಿಸುತ।
ಕನ್ನಡಿಯ ಮುಂದೆ ಚಿನ್ನಾಟವಾಡುಗೇ ಸತತ॥ ೧

ಸತಿ ಸುತರು ಪತಿ-ಪುರುಷ ಪ್ರಕೃತಿ ಕುಣಿಸಿದ ಪಾತ್ರ।
ಅತಿ ಮಧುರ ಪ್ರೇಮ ಸುಧಾರಸವೇ ಜೀವನ ಮಿತ್ರ।
ಮತಿಗೆಟ್ಟು ತನ್ನ ತಾ ಮರೆತು ಬಾಳುವ ಸೂತ್ರ।
ಕ್ಷಿತಿಯೊಳಗೆ ನೀನಾಡುವಾಟ ಚಿತ್ರ-ವಿಚಿತ್ರ॥ ೨

ಒಳಿತೆನಿತೋ ಕೆಡುಕೆನಿತೋ ಕಳವಳಗಳೆನಿತೋ।
ಕೊಳಕಾದ ಮನದೊಳಗೆ ತಳಮಳದ ಹೊಳೆಎನಿತೋ।
ಗಳ ಶುದ್ಧವಿರಿಸುತ್ತ ತಲೆ ಬಿಸಿಯ ಮರೆಸುತ್ತ।
ನಳಿನನಾಭನೆ ನಿನ್ನ ನೆನೆದು ಪಾಡುವುದೇ ಹಿತ॥ ೩

ಹಗಲಿರಲಿ ಇರುಳಿರಲಿ ಬಿಗಿವ ಜಂಜಡವಿರಲಿ
ಮುಗಿಲೆ ಮೇಲೆರಗುವ ಕಷ್ಟ-ಸುಖವಿರಲಿ
ಜಗದೊಳಗೆ ಈ ನಾನು ಶೈಲಜಾನುತನಲ್ಲಿ।
ನಗುನಗುತ ಒಂದಾಗೆ ಋಣಭಾರವಿನ್ನೆಲ್ಲಿ?॥ ೪

೫೪. ಉಗಾಭೋಗಗಳು

ರಾಗ: ಕೀರವಾಣಿ

ಯೋನಿ ಹಲವಲಿ ಎನ್ನ ಜೀವಾತ್ಮವಿರಿಸಿ।
ನಾನನೇಕ ಜನ್ಮದಾತರನು ಅರಸಿ।
ಏನೇನೋ ಕರ್ಮಗಳ ತನುಮನಗಳಿಂದೆಣಿಸಿ।
ನಾನು, ನನ್ನದನು ನಾಯಿ ಕೊಡೆಯಂತೆ ಬೆಳೆಸುಳಿಸಿ॥

ರಾಗ: ಸಿಂಹೇಂದ್ರ ಮಧ್ಯಮ

ನಾನಾರ ಋಣ ತೀರಿಸಲೋ ಈ।
ಭವದಭಿಮಾನ ನಾನೆಂತು ತೊರೆಯಲೋ।
ನಾನಾವ ರೀತಿಯಲಿ ನಿನ್ನ ಸೇರಲೋ।
ಹೀನಾಯವೆಂದೆನಿಪ ಈ ಬದುಕು ಸಾಕೆಲೋ॥

ರಾಗ: ಧನ್ಯಾಸಿ

ನಾನು ನೋಡುವ ನೋಟ ನಿನ್ನದಾಗಿರಲಿ।
ನಾನುಣುವ ಊಟವದು ನಿನಗಾಗೆ ಆಗಲಿ।
ನಾನು ಕೂಡುವ ಕೂಟ ನಿನ್ನನೇ ಕೂಡಿರಲಿ।
ನಾನು ಹಾಡುವ ಹಟವು ನಿನ್ನ ನಾಮದಲಿರಲಿ॥

ರಾಗ: ಕನ್ನಡ

ನಾನು ನೀನಾಗಿರಲು ಎನಗಾರ ಋಣವಿಲ್ಲ।
ಮಾನಾಭಿಮಾನಕ್ಕೆ ನೀನಾಗೇ ಹೊಣೆಯೆಲ್ಲ।
ಜ್ಞಾನಗೋಚರ ಶೈಲಜಾನುತನೇ ಎನ್ನೆಲ್ಲ।
ಧ್ಯಾನ ಮೌನವು ಕರ್ಮದ್ವಯವ ದಾಟೀ ಭಯವಿಲ್ಲ॥

ರಾಗ: ಶುಭಪಂತುವರಾಳಿ

ಬೇಡಿದರೆ ನಿನ್ನನೇ ಬೇಡುವೆನಯ್ಯ।
ಕಾಡಿದರೆ ನಿನ್ನನೇ ಕಾಡುವೆನಯ್ಯಾ।
ಪಾಡಿದರೆ ನಿನ್ನನೇ ಪಾಡುವೆನಯ್ಯ।
ಆಡಿದರೆ ನಿನ್ನೊಡನಾಡುವುದು ಸರಿಯಯ್ಯ॥

ಕಾಡಿ ಬೇಡಿ ಪಾಡಿ ನಲಿದಾಡಿ ಎ-
ನ್ನೊಡಲ ಬೇಗುದಿಯ ದೂಡಿಕೊಂಬುವೆನೋ।
ಓಡಿ ಹೋಗದಿರಯ್ಯ ಎನ್ನೊಡನಾಡಿಯಾಗಿರಯ್ಯ।
ನೋಡಿ ಇದೆಂತಹುದಯ್ಯ ಶೈಲಜಾನುತ ಅಯ್ಯ॥

ರಾಗ: ಸರಸಾಂಗಿ

ನೀ ತೋರುವ ಕರುಣೆ ಎನಗಿನಿತು ಸಾಲದಯ್ಯ।
ನೀ ಪೊರೆವ ಪರಿ ಎನಗೆ ಸರಿ ಇಲ್ಲಯ್ಯ॥

ಗಂಡ ಮಕ್ಕಳ ಕೊಟ್ಟು ಬಂಡಿ ಅನ್ನವವಿಟ್ಟು।
ಉಂಡು ಮಲಗೇಳಲು ಉಪ್ಪರಿಗೆ ಮನೆಕೊಟ್ಟು।
ದುಂಡುಮಲ್ಲಿಗೆ ಹೂವ ಮನೆಮಾಡಗಳಿಗಿಟ್ಟು।
ಚೆಂಡಾಟವಾಡುತಿಹೆ ಎನ್ನ ಜೀವದಲಿ ನೋವಿಟ್ಟು॥

ಏನು ಕೊಟ್ಟರೂ ಸರಿಯೇ ಏನ ಕೊಡದಿರೆ ಸರಿಯೇ।
ಅನವರತ ಎನ್ನ ಮನದಲಿರು ಶೈಲಜಾನುತ ಹರಿಯೇ॥

ರಾಗ: ಹಿಂದೋಳ

ನಿನ್ನ ನಾಮವು ಎನ್ನ ನಾಲಿಗೆಯಲಿ ನಲಿಯುತಿರಲಯ್ಯ।
ನಿನ್ನ ಕೀರುತಿ ಎನ್ನ ಕಿವಿಯ ತುಂಬಿರಲಯ್ಯ।
ನಿನ್ನ ಮೂರುತಿ ಎನ್ನ ಕಣ್ಣಲಿರಲಯ್ಯಾ।
ಘನ್ನಮಹಿಮ ಶೈಲಜಾನುತ ನಿನ್ನ ಭಕ್ತಿ-ಪ್ರೀತಿ ಎನಗಿರಲಯ್ಯ॥

ರಾಗ: ಕಾಂಬೋದಿ

ಎನ್ನ ಮೊರೆ ನೀ ಕೇಳುವೆ ಎಂದರಿತ ಬಳಿಕ।
ನಿನ್ನ ಕಾಣಬೇಕೆಂಬ ಎನ್ನ ಈ ತವಕ।
ಮುನ್ನಿಗಿಂತಲೂ ಇಂದು ಆಗಿಹುದು ಅಧಿಕ।
ನಿನ್ನ ಹೊರತು ಸೊನ್ನೆ ಈ ಭವ ಸುಖ॥

ಹೊನ್ನಿರಲಿ ಹಣವಿರಲಿ ಚೆನ್ನಾದ ಮನೆ ಇರಲಿ।
ಬಣ್ಣ ಬಣ್ಣದ ಬದುಕು ಬಂಗಾರವೇ ಆಗಿರಲಿ।
ಮಣ್ಣಿನಲಿ ಮಣ್ಣಹುದೋ ಜಗದ ಜೀವನ ಗಾಲಿ।
ಎನ್ನ ಕಣ್‌ತೆರೆಸು ಶೈಲಜಾನುತ ಎಂದೆ ನಾ ಕನಲಿ॥

ರಾಗ: ತೋಡಿ

ತಾಸು ತಾಸೂ ನಿಂತು, ಕೂಸು ಕಂತೆಯ ಹೊತ್ತು।
ಕಾಸು-ಕಳಶ, ಮುತ್ತು ಮಾಣಿಕ್ಯ ತಂದಿತ್ತು।
ಏಸು ಜನ್ಮದ ಪಾಪವ ನೀಸಿಕೊಂಬೆವು ಎಂದು।
ವಾಸುಕಿಶಯನನ ಭೂವೈಕುಂಠ ನೀನೇ ಎಂದು॥

ದಾಸದಾಸರ ದೈವ ಶ್ರೀನಿವಾಸನೆ ನಿನ್ನ।
ಭೂಸುರರು-ಭಕ್ತ ಜನರು ಆರಾಧಿಸುವುದೇ ಚೆನ್ನ।
ಸಾಸಿರನಾಮದೆ ಶೈಲಜಾನುತ ನಿನ್ನ।
ಲೇಸಾಗಿ ಪಾಡಿ ಪೊಗಳಲು ಬಂದೆ ನಾ॥

ಇಂದು ಇಂದಿಗೆ ಸರಿದೂ ಮುಂದೆ ನಾಳೆಯೂ ಬಂದು।
ಒಂದು ಲೆಕ್ಕಕ್ಕೂ ಸಿಗದ ಬಂಧನದ ಬಾಳಿದೂ।
ನೊಂದು ಬೆಂದು ಬೇಸತ್ತ ಮಂದಮತಿ।
ಈ ಶೈಲಜೆಯ ಕುಂದೆಣಿಸದೆ ಕಾಯೋ ಶೈಲಜಾನುತ ಕೃಷ್ಣಾ॥

೫೫. ಬಾರೋ ಗೋಪಾಲಕೃಷ್ಣ

(ಕೋಲಾಟದ ಹಾಡು)

ರಾಗ: ತೋಡಿ (ಮಧ್ಯಮಶ್ರುತಿ) ತಾಳ: ಚತುರಶ್ರನಡೆ

ತಾನೋ ತಂದಾನೋ ತಾನೋ।
ತಾನೋ ತಂದಾನೋ ತಾನೋ।
ತಾನೋ ತಂದಾನೋ ತಾನಂದನೋ।
ತಾನೋ ತಂದಾನೋ ತಾನಂದನೋ॥ ॥ಪ॥

ಬಾರೋ ಗೋಪಾಲಕೃಷ್ಣ ಬಾರೋ ಬಂಗಾರ ಕೃಷ್ಣ।
ಬಾರೋ ಬೆಣ್ಣೆಯ ಕೃಷ್ಣ ಬಾರಯ್ಯ।
ಬಾರೋ ಕೋಲಾಟವಾಡೋಣ।
ಬಾರೋ ಕೋಲಾಟವಾಡೋಣ॥ ॥ಪ॥

ನಿನ್ನಾ ಕಂಡೋಡಿ ಬಂದೆ, ಅನ್ನ ಉಣ್ಣದೆ ಬಂದೆ।
ಸಣ್ಣ ತುಂಡನ್ನೇ ಸುತ್ತಿ ಬಂದೆ।
ದುಂಡು ಮಲ್ಲಿಗೆ ದಂಡೆ ಬಿಟ್ಟು ಬಂದೆ ॥ಬಾರೋ॥

ಅಂದಾರು ನೆರೆಹೊರೆ-ಬಂದಾರು ನನ್ನ ದೊರೆ।
ಮಂದೀ ಮೆಚ್ಚಾದಿರೆ ಕುಂದಹುದೋ (ಬಾಳು)।
ಮಂದೀ ಮೆಚ್ಚಾದಿರೆ ಕುಂದಹುದೋ॥ ॥ಬಾರೋ॥

ಮಕ್ಕಾಳು ಅಳುತವೆ ಚಿಕ್ಕಮ್ಮ ಒಳಗವ್ಳೆ।
ಇಕ್ಕಾಳು ಊಟವ ಅವಳೆನಗೆ-
ಮುಕ್ಕಣ್ಣ ಶಿವನೇ ಗತಿ ಎನಗೆ॥ ॥ಬಾರೋ॥

ಅಮ್ಮಾ ಯಶೋದೆ ಬಂದ್ಲು ನಮ್ಮವ್ನ ಕಂಡ್ಯಾ ಎಂದ್ಲು।
ಅಮ್ಮಾ ನಾ ಕಾಣೆನೇ ಎಂದಂದೇ।
ಸುಮ್ಮಾನೇ ಬಾರೋ ನನ್ನ ಹಿಂದೇ॥ ॥ಬಾರೋ॥

ಹಿಟ್ಟು ಕುಟ್ಟಾಬೇಕು, ರೊಟ್ಟಿ ತಟ್ಟಬೇಕು।
ತೊಟ್ಟಿ ಮನೆಯ ಕಸ ಒಟ್ಟಬೇಕೋ। ನನ್ನ-
ರಟ್ಟೆ ಮುರಿಯಾ ಕೆಲ್ಸ ಮಾಡಬೇಕೋ॥ ॥ ಬಾರೋ ॥

ಅತ್ತೆಯು ಪಕ್ಕದ್ಮನೆ ಮೆತ್ತೆ ಮಂಚಾದ್ ಮ್ಯಾಗೆ।
ಹೊತ್ತೂ ಹೋಗಾದ್ ಹರಟೇಗ್ ಕುಂತವಳೇ।
ಮತ್ತೆ ಪಗಡೇಯ ಆಟವ ಆಡುತವ್ಳೆ॥ ॥ ಬಾರೋ ॥

ನೀಲವರ್ಣನೆ ನಿನ್ನ ಲೀಲೆಯ ಪಾಡುತ।
ಕೋಲಾಟವಾಡುವ ಶುಭದಿನವೂ ಬಲು-
ಸಂತಸವೀವುದೋ ನಮಗೆಲ್ಲವೂ॥

ಕೋಲು ಬಣ್ಣದ ಕೋಲು ಕೋಲು ಚಿನ್ನದ ಕೋಲು।
ಕೋಲು ರನ್ನದ ಕೋಲು ಕೋಲಣ್ಣಾ ನಮ್ಮ।
ಬೆಣ್ಣೆಯ ಕೃಷ್ಣನ ಕಡಗೋಲು॥

ಶೈಲಜಾ ಸೋದರ ಶೈಲಜೆ ನಾನಹುದೋ।
ಶೈಲರೂಪವ ಬಿಟ್ಟು ಬಾ ಇಲ್ಲಿ ನೀ।
ನಲಿದಾಡೋ ಎನ್ನಯ ತೋಳಲ್ಲಿ॥

---

೫೬. ಭವರೋಗವೈದ್ಯ

ರಾಗ: ಹುಸೇನಿ **ತಾಳ: ಚತುರಶ್ರನಡೆ**

ತಾನೋ ತಂದನೋ ತಾನೋ ತಂದಾನೋ॥ ॥ ಪ ॥

ಭವರೋಗವೈದ್ಯ ನೀನೆಂಬೊರು।
ಆವುಗಳಕಾವ ಗೋವಳ ನೀನೆಂಬೊರು।
ಕಾವದೈವವು ನೀನೇ ಎಂಬೊರು।
ದೇವದೇವಕಿ ಕಂದ ನೀ ನೀನೆಂಬೊರೋ॥ ೧

ಅಲ್ಲಿ ಇಲ್ಲಿ ಎಲ್ಲೆಲ್ಲು ನೀನಂತೆ।
ಎಲ್ಲ ಕಲ್ಲು ಕಂಬ ಕಾಡು ನಿನ್ನದಂತೆ।
ಫುಲ್ಲಲೋಚನ ನಿನ್ನ ಜನ ನಂಬಿಹರಂತೆ।
ಮೆಲ್ಲನೆ ಬಂದು ನಮ್ಮ ಗೋಳು ಕಳೆವೆಯಂತೆ॥ ೨

ನನ್ನನೀಪರಿ ಏಕೆ ನೀ ಕಾಡುವೇ।
ನನ್ನನಳಿಸಿ ನೀ ಏಕೆ ನಲಿದಾಡುವೆ।
ಅನ್ನ ಗಳಿಸೆ ನಿನ್ನ ನಾಮ ನಾ ಪಾಡುವೆ।
ಮನ್ನಿಸಿ ನೀ ಎನ್ನ ಕಾಯೋ ಶ್ರೀಗುರುವೆ॥ ೩

ಶೈಲಜೆಯ ಅಣ್ಣ ನೀನಹುದೋ ಕೇಳು। ಶ್ರೀ-
ಶೈಲಪತಿ ಶ್ರೀಕಂಠನಿಗೇ ಹೇಳು।
ಶೈಲಜೆ ನಿನ್ನನೇ ನಂಬಿಹಳೆಂದೂ ಹೇಳು।
ಶೈಲಮನವ ಬಿಟ್ಟು ಬೇಗ ಬರಹೇಳು॥ ೪

---

೫೭. ಹಟ್ಟೀಲಿ ಕೂತರೆ

ರಾಗ: ಮುಖಾರಿ ತಾಳ: ಆದಿ

ಹಟ್ಟೀಲಿ ಕೂತರೇ ಹೊಟ್ಟೆಗೂ ಹಾಕುವೆನೂ।
ಕಟ್ಟುಬುತ್ತಿಯ ನಿಂಗೆ ಕೊಟ್ಟೇನೂ ಬಾರೋ।
ಕೆಟ್ಟ ಹೈಕಳ ಕೂಡಿ ಆಡಬೇಡವೋ ರಂಗ।
ಕೆಟ್ಟು ನೀ ದುಷ್ಟನೆಂದೆನಿಸಬೇಡವೋ ರಂಗ॥

ಹೊಯ್ ಹೊಯ್ಯಾ ಹೊಯ್ಯಾ ಹೊಳ್‌ಳ್‌ಳ್ಳಾಯಿ।
ಹೊಯ್ ಹೊಯ್ಯ ಹೊಯ್ಯಾ ಹೊಳ್ಳಾಯಿ ಗುಳ್ಳಾಯಿ॥ ॥ ಪ ॥

ಪಟ್ಟೆಪೀತಾಂಬರಾ ಉಟ್ಟುಕೊಳ್ಳೆಂದರೆ।
ಸೊಟ್ಟಮೋರೆಯಿಂದೆನ್ನ ದಿಟ್ಟಿಸುವೆಯೋ (ರಂಗ)।
ಸೊಂಟಪಟ್ಟಿಯ ಕಟ್ಟಿ ಪುಟ್ಟ ಕಿರೀಟವಿಟ್ಟು।
ಜುಟ್ಟುಕಟ್ಟಿದರೆಷ್ಟು ಚೆಂದಕಾಣುವೆಯೋ॥ ॥ ರಂಗ ॥

ತೊಟ್ಟಿ ಮನೆಯಲ್ಲಿ ಪುಟ್ಟ ಬಾಲೆಯರು।
ಪಟ್ಟೆ ಚೌಕಾಭಾರ ಗುಟ್ಟಿನಲ್ಲಾಡುವರು।
ಪುಟ್ಟ ಹೆಜ್ಜೆಯನಾದ ಬೆನ್ನಟ್ಟಿ ಬರುತಿರೆ।
ರಟ್ಟೆ ಎಳೆದು ನಿನಗೆ ಪೆಟ್ಟು ಕೊಡುವರೊ॥ ॥ರಂಗ॥

ಗಟ್ಟಿಪಾಲ್ಕೊಸರ ಬಿಟ್ಟು ನೀ ಓಡಿದರೆ।
ತೊಟ್ಟಿಲ ಆಟ ರೊಟ್ಟಿ ನಿನಗಿಲ್ಲವೋ।
ಕುಟ್ಟಾಣಿ ಕುಟ್ಟುವ ಆ ಕೆಟ್ಟ ಮುದುಕಿ।
ಘಟ್ಟದ ಹುಲಿಯ ಹೊರಗೆ ಕಟ್ಟಿರುವಳೊ॥ ॥ರಂಗ॥

ಪುಟ್ಟ ಬಾಲಾ ಶೈಲಜಾ ಸಹೋದರ ನಿನಗೆ।
ಬಟ್ಟಲ ಹಾಲು ಈ ಶೈಲಜೆ ನೀಡಲು।
ಪುಟ್ಟ ಕಡಗೋಲು ಹೊತ್ತು ಶೈಲರೂಪದಿ ಉಡುಪಿ-
ಭಟ್ಟನ ಬಂದಿ ನೀ ಶೈಲಾಗಾರದಿ॥

---

೫೮. ಡಿಂಗ್ ಡಿಂಗ್ ಡಿಂಗ

ರಾಗ: ದುರ್ಗಾ ತಾಳ: ಆದಿ

ಡಿಂಗ್ ಡಿಂಗ್ ಡಿಂಗ ಬಾರೋ ಬೇಗ ರಂಗ।
ಅಲ್ಲಿ ನೋಡೊ ಮಂಗ ನೀನೆ ನರಸಿಂಗ।
ಹೊಯ್ ಹೊಯ್ (೮ ಸಾರಿ) ಹೋ ಹೋ।
ಹಾ....ಹಾ....(೮ ಸಾರಿ) ಹಾ....ಹಾ....॥

ಅಲ್ಲಿ ನೋಡೋ ಬೆಣ್ಣೆಯ ಪಾತ್ರೆ।
ಇಲ್ಲಿ ನೋಡೋ ದನಗಳ ಜಾತ್ರೆ।
ಅಲ್ಲಿ ಇಲ್ಲಿ ಈ ಜಗದಲ್ಲಿ ಪಾಡುವರಯ್ಯಾ ನಿನ್ನ ಚರಿತ್ರೆ॥

ಅಯ್ಯಯ್ಯಯ್ಯಯ್ಯಯ್ಯಯ್ಯ.....ನೀ ಏಕೆ ಹೀಗೇ।
ಓಡಿಓಡಿ......ಓಡಿ ಬಾ ಮನೆಗೇ ॥ಡಿಂಗ್ ಡಿಂಗ್ ಡಿಂಗ॥

ಅದು ಸರಿ ಏನೋ ನಿನ್ನೀ ವೇಷ।
ಅದರಲ್ಲಿಹುದೇ ನಿನ್ನ ಸಂತೋಷ।
ಮುದದಿಂದ ಈ ಹುಲಿವೇಷ।
ಕುಣಿದರೆ ಇಲ್ಲಾ ಕೋಪಾವೇಷ॥

ಅಬ್ಬಬ್ಬಬ್ಬಬ್ಬಬ್ಬಬ್ಬ......ಏನೀ ಕುಣಿತ।
ಸಾಕು ಸಾಕು ಸಾಕು ಸಾಕು....ಸಾಕು ಬಾ ಮೆರೆತ
॥ ಡಿಂಗ್ ಡಿಂಗ್ ಡಿಂಗ॥

ನಿನ್ನ ವೇಣುಗಾನದ ಇಂಪು।
ನಿನ್ನ ಸುತ್ತಲು ಸೇರಿಸೆ ಗುಂಪು।
ಚೆನ್ನಾಗಿ ಬರಿಸೆ ನಿದ್ರೆಯ ಜೊಂಪು।
ಕಣ್ಮನಗಳಿಗದು ಸೊಂಪು ತಂಪು॥

ತಾನಂ ತಾನಂ ತಾನಂ ತಾನಂ ಮೋಹನರಾಗ।
ತಾನಂ ತಾನಂ ತಾನಂ ತಾನಂ ನುಡಿಸೋ ಬೇಗ।

ಶಿಲೆಯಲ್ಲಿಲ್ಲವೋ ನಿನ್ನಯ ಭಕ್ತಿ।
ಕಲೆಯಲ್ಲಿಹುದೋ ನಿನ್ನಯ ಪ್ರೀತಿ।
ಶೈಲಜಾನುತ ನಿನ್ನಯ ಕೀರ್ತಿ।
ತಾಳರಾಗದಿ ಪಾಡುವ ರೀತಿ॥

ಬಲ್ಲೆ ಬಲ್ಲೆ ಬಲ್ಲೆ ಬಲ್ಲೆ ನಿನ್ನ ಯುಕ್ತಿ।
ಕೊಡು ಕೊಡು ಕೊಡು ಕೊಡು ನಿನ್ನ ಭಕ್ತಿ॥

೫೯. ಕೃಷ್ಣ ಮುದ್ದುಕೊಡೋ

ರಾಗ: ಹರಿಕಾಂಬೋದಿ ಛಾಯೆ ನಿಷಾದ ವರ್ಜಕ ತಾಳ: ತ್ರಿಶ್ರನಡೆ

ಕೃಷ್ಣಾ ಮುದ್ದುಕೊಡೋ ಕೃಷ್ಣಾ ಮುದವನೀಡೋ।
ಕೃಷ್ಣಾ ಎನ್ನೊಡನಿದ್ದು ಸಂತಸನೀಡೋ॥ ॥ಪ॥

ನಿನ್ನ ನೋಡಿ ಮಾತನಾಡಿ। ನಿನಗಾಗಿ ಹಾಡಹಾಡಿ।
ನಿನ್ನೊಡನೆ ಕೂಡಿ ಆಡಿ। ನಾ ಬಂದೆ ಮತ್ತೆ ಓಡಿ॥ ೧

ನೀನೆ ನನ್ನ ಮುದ್ದುಬಾಲ। ನೀನೆ ನನ್ನ ನಾದಲೋಲ।
ತೋರೊ ನಿನ್ನ ಪ್ರೇಮಲೀಲ। ಬಾರೊ ನನ್ನ ಗೋಪಾಲ॥ ೨

ಅಂದು ನೀನು ಎಲ್ಲೊ ಇದ್ದೆ। ನಿಂದು ನಾ ಕಾದಿದ್ದೆ।
ಇಂದು ಬಂದು ನನ್ನ ಮುಂದೆ। ಕಂದ ಮುತ್ತ ನೀಡೋ ಎಂದೆ॥ ೩

ಜಪವನರಿಯೆ ತಪವನರಿಯೆ। ಕಪಟ ಕುಹಕ ಒಂದು ಅರಿಯೆ।
ವಿಪರೀತ ಪ್ರೇಮವಿಟ್ಟು। ಉಪಚರಿಸುವೆ ಬಾರೋ ಮಗುವೆ॥ ೪

ದುಂಡು ಮಡಕೆ ತುಂಬ ಹಾಲು। ದಂಡವಾಗಲಿಹುದೊ ಕೇಳು।
ಉಂಡು ನೀ ಮಲಗೆ ಮೇಲು। ಚಂಡಿತನವ ಬಿಟ್ಟು ಏಳು॥ ೫

ಸಜ್ಜಿಗೆ ಸಕ್ಕರೆ ಹೋಳಿಗೆ। ಬಜ್ಜಿ ಬೆಣ್ಣೆ ಹಸಿ ಮಜ್ಜಿಗೆ।
ಕಜ್ಜಾಯ ದ್ರಾಕ್ಷಿ ಲಡ್ಡಿಗೆ। ಬೊಜ್ಜು ತುಂಬೋ ಭಾರಿ ಅಡಿಗೆ॥ ೬

ಸುಪ್ಪತ್ತಿಗೆ ತೊಟ್ಟಿಲಿರಿಸಿ। ಅಪ್ಪ ಕೊಟ್ಟ ಶಾಲು ಹೊದಿಸಿ।
ಒಪ್ಪವಾಗಿ ತೋಳಬಳಸಿ। ಅಪ್ಪಿ ಜೋಗುಳವ ಪಾಡ್ವೆ॥ ೭

ಶೈಲ ಪತಿ ಶ್ರೀಕಂಠ ನಿನಗೆ ಬಲು ಪ್ರೀತಿಯ ಮಿತ್ರನೇನೋ
ಶೈಲಜಾ ಸಹೋದರನೆ ಬಾಲೆ ನಾ ಕರೆವೆ ಬಾರೋ॥ ೮

೬೦. ಅತ್ತ ಓಡಲು ನಾ ಬಿಡಲೊಲ್ಲೆ

ರಾಗ: ಹರಿಕಾಂಬೋದಿಛಾಯೆ ತಾಳ: ಚತುರಶ್ರನಡೆ

ಅತ್ತ ಓಡಲು ನಾ ಬಿಡಲೊಲ್ಲೆ।
ಇತ್ತ ಅಡಗಲು ನಾ ಬಿಡಲೊಲ್ಲೆ।
ಅತ್ತ ಇತ್ತ ಎತ್ತ ನೋಡಲು।
ನಾ ನಿಂದೆ, ನಿನ ಹಿಂದೆ।
ಓ....ಓ.....ಗೋವಿಂದಾ ಗೋವಿಂದಾ ಗೋವಿಂದಾ॥

ಹತ್ತು ಹಸುಗಳ ಹಾಲನುಂಡು।
ಇಪ್ಪತ್ತು ಮಡಕೆಯ ಬೆಣ್ಣೆಯ ಮೆದ್ದು।
ಮತ್ತೆ ಮೋರೆ ಒರೆಸುತ ನಿಂದು।
ಕತ್ತು ತಿರುಗಿಸೆ ಓಡಲೆಂದು।
ನಾ ನಿಂದೆ, ನಿನ ಹಿಂದೆ॥ ॥ಓ ಗೋವಿಂದಾ॥

ನೀರೆಯರು ನೀರಾಟಕಿಳಿಯಲ್।
ಸೀರೆಗಳನು ಕೊಂಡೊಯ್ದೆ।
ದೂರು ಮಾಡುವರೆಂದು ಹೆದರಿ।
ಮರವನೇರುವೆನೆಂದು ಓಡೆ।
ನಾ ನಿಂದೆ, ನಿನ ಹಿಂದೆ॥ ॥ಓ ಗೋವಿಂದ॥

ಮುದ್ದು ಬಾಲಕ ನೀನೆಂದು।
ಮೊದ್ದು ಗೋಪಿಯು ಮುದ್ದಾಡೆ।
ಪೆದ್ದು ಮಾಡುವಳಾ ಪಾಲ್ಗೊಸರಾ
ಕದ್ದು ಗೆದ್ದೇನೆಂದು ಓಡೇ।
ನಾ ನಿಂದೆ, ನಿನ ಹಿಂದೆ॥ ॥ಓ ಗೋವಿಂದಾ॥

ಅಂದು ಆ ಯಶೋದೆ ನಂದರ।
ಕಂದನೆನಿಸಿ ಆನಂದಿಸಿದೆ।
ಮಂದಮತಿ ಈ ಶೈಲಜೆಯ।
ನಂದಾದೀಪ ನೀನಾಗೆಂದು।
ನಾ ನಿಂದೆ, ನಿನ ಮುಂದೆ॥ ॥ಓ ಗೋವಿಂದಾ॥

೬೧. ಸುಮ್ಮನೆ ಬಾರೋ ರಂಗ

ರಾಗ: ಆಹರ್ ಭೈರವ್ ತಾಳ: ಆದಿ

ಸುಮ್ಮನೆ ಬಾರೋ ರಂಗ ಸುಮ್ಮನೆ ಬಾರೋ।
ಅಮ್ಮಯ್ಯ ಕರೀತಾಳೆ ಸುಮ್ಮನೆ ಬಾರೋ।
ಗುಮ್ಮಯ್ಯ ಬರುತಾನೆ ದಮ್ಮಯ್ಯ ಬಾರೋ॥

ಚಿಕ್ಕಮ್ಮ ಕರೀತಾಳೆ ಚಕ್ಕುಲಿ ಕೊಡುತಾಳೆ।
ಹಕ್ಕಿ ಪುಕ್ಕವ ನಿನಗಿಕ್ಕಿ ಜಡೆ ಹೆಣೆತಾಳೇ॥

ಏನಯ್ಯ ರಂಗಯ್ಯ ನೀನ್ಯಾಕೆ ನಿಂತ್ಯಯ್ಯ।
ಮೀನಲೋಚನೆ ರಾಧೆ ಕಣ್ಣಲ್ಲೆ ಕರೆದಳಯ್ಯ॥

ನೀನೀಗ ಕೊಳಲಪಿಡಿದು ತಾನೋ ತಂದಾನೋ ಎಂದು।
ಗಾನವ ನುಡಿಸು ಬಂದು ನಾ ಕೇಳ್ವೆನಿಂದು॥

ವೇಣುಗೋಪಾಲ ಎನ್ನ ಕಣ್ ತುಂಬತಾವೆ ಚಿನ್ನ।
ಜಾಣನಾದರೆ ನೀ ನಾ ಬೆಣ್ಣೆ ಕೊಡುವೆನಣ್ಣ॥

ಅನ್ನವಿಕ್ಕುವೆ ಬಾ ಮಣ್ಣು ಮುಕ್ಕದೆ ಬಾ।
ಸುಣ್ಣ ಬಣ್ಣವ ನೀ ಮುಟ್ಟದೆ ಬಾ॥

ಜಾಲಮಾಡದೆ ಬಾ ಛಲವ ನೀ ಬಿಟ್ಟು ಬಾ।
ಕಾಲಲಂದಿಗೆ ಗೆಜ್ಜೆಯ ಘಲು ಘಲುವೆನಿಸುತ ಬಾ॥

ನೀಲವರ್ಣದವನಂತೆ ಕಾಳಿಂಗನ ತುಳಿದೆಯಂತೆ।
ಬಾಲೆ ಗೋಪಿಯರಂತೆ ಈ ಶೈಲಜೆ ನಿನ್ನವಳಂತೆ॥

೬೨. ಎನ್ನ ಮನದ ಚಿಂತೆ ನೀಗಲಾರೆಯಾ

ರಾಗ: ಯಮನ್ **ತಾಳ: ಆದಿ**

ಎನ್ನ ಮನದ ಚಿಂತೆ ನೀಗಲಾರೆಯಾ ಸ್ವಾಮಿ।
ಎನ್ನೀ ಕಳವಳಕೆ ನೀನಾದೆ ನೇಮಿ।
ಎನ್ನಂತರಂಗವದು ನೀ ಕುಣಿವ ರಂಗಭೂಮಿ।
ಎನ್ನಾತ್ಮ ನಿನದಾಗೆ ನೀನಾದೆ ಎನ್ನ ಪ್ರೇಮಿ॥ ೧

ಹಗಲಿರುಳು ಹರಿಸ್ಮರಣೆ ಕಾಲಕಳೆಯಲಾಧಾರ।
ಸೊಗಸಾದ ಗಾನ ಸುಧಾರಸ ಪಾನವಾಹಾರ।
ನಿಗಮಗೋಚರ ನಿನ್ನ ಮಹಿಮೆಗಿಲ್ಲ ಪಾರಾವಾರ।
ಹಗೆಬೇಡ ಎನ್ನಲ್ಲಿ ದಾಟಿಸು ಈ ಭವಸಾಗರ॥ ೨

ಎನ್ನ ನರನಾಡಿಯಲಿ ಎನ್ನೆಲ್ಲ ಧಮನಿಯಲಿ।
ಎನ್ನ ಮನದಾ ಪ್ರೇಮ ಕಾಮ ಕಾಮನೆಯಲ್ಲಿ।
ಎನ್ನ ಕಷ್ಟಸುಖದಲ್ಲಿ ನಲಿವು ನೋವುಗಳಲ್ಲಿ।
ಸನ್ನುತ ಶೈಲಜಾನುತ ನೀ ಒಂದಾಗು ಎನ್ನಲ್ಲಿ॥ ೩

---

೬೩. ಜಯ ಜಯ ರಾಮ ಎನ್ನಿರೋ
(ಭಜನೆ)

ರಾಗ: ನವರೋಜ್ **ತಾಳ: ಆದಿ**

ಜಯ ಜಯ ರಾಮ ಎನ್ನಿರೋ ಹರುಷದಿ।
ಜಯಗೀತೆಯ ಪಾಡಿರೋ॥ ॥ಪ॥

ಶ್ರೀರಾಮ್ ಜಯರಾಮ್ ಜಯ ಜಯ ರಾಮ್॥ (೨ ಬಾರಿ)

ರಾಮನವಮಿ ಬಂದಿತು ನೋಡೋ।
ರಾಮ ಪಾಯಸ ಮಾಡೋ ನೀನೀಗ।
ರಾಮ ಜಪವ ಮಾಡೋ॥ ೧

ಕಾಮಕ್ರೋಧಗಳ ನೀ ಮರೆತು।
ನೇಮದಿಂದ ಪಠಿಸು ನೀನೀಗ।
ರಾಮನಾಮ ಜಪಿಸು॥ ೨

ಭಕುತರ ಕಾಮಧೇನು ರಾಮನು।
ಏಕಸತೀವ್ರತನು ನಮ್ಮಯ
ಶೋಕವ ಕಳೆಯುವನು॥ ೩

ಮಾರುತಿ ಸ್ತುತಿನುತನು ನಮಗಿಂದು।
ಮೂರುತಿಯಾಗಿ ನಿಂತನು ರಾಮನು।
ಮೂರುಲೋಕದಿ ಖ್ಯಾತನು॥ ೪

ಶೈಲಜಾ ಸೋದರನು ರಾಮನು।
ಈ ಲೋಕವನಾಳ್ವನು ನಮ್ಮಯ
ಬಾಳಲಿ ನಲಿಯುವನು॥ ೫

---

೬೪. ರಾಮಚಂದ್ರ ಸಾರ್ವಭೌಮ

ರಾಗ: ನವರೋಜ್ ತಿಶ್ರನಡೆ, ತಾಳ: ಆದಿ

ರಾಮಚಂದ್ರ ಸಾರ್ವಭೌಮ ರಾಜಿತಾ ಮನೋಹರ।
ಶ್ಯಾಮಸುಂದರಾಗ ದೇವ ನಿನಗೆ ಮಂಗಳಂ॥ ॥ಪ॥

ನೇಮದಿಂದ ನಿನ್ನ ನಾಮ ಸ್ಮರಣೆ ಮಾಡಿ ಭಜನೆಗೈವೆ।
ಕ್ಷೇಮದಿಂದ ಕಾಯೋ ದೇವ ನಿನಗೆ ಮಂಗಳಂ॥ ॥ಅ॥ಪ॥

ಕಾಮಜನಕ ಶೇಷಶಯನ ಕಮಲನಾಭ ಜಲಜನಯನ।
ಕಾಮಿತಾರ್ಥಗಳನು ಈವ ದೇವಮಂಗಳಂ।
ಸೋಮಶೇಖರನ ಮಿತ್ರ ರಮಣಿ ಕೌಸಲ್ಯ ಪುತ್ರ।
ಭಾಮೆಸೀತ ಪ್ರಾಣಪಾತ್ರ ದೇವಮಂಗಳಂ॥ ೧

ದಾಸಶ್ರೇಷ್ಠರೆಲ್ಲ ನಿನ್ನ ಪಾದಕಮಲಪಾಡಿ ಪೊಗಳಿ।
ಈಸಿ ಹೋದರೈಯ್ಯ ನಿನ್ನ ಕರುಣೆ ಕೋರುತಾ।
ಏಸುಜನ್ಮ ಬಂದರೇನು ದಾಸಿಯಾಗಲಿಲ್ಲ ನಾನು।
ವಾಸುದೇವ ಶೈಲಜಾನುತನೆ ಮಂಗಳಂ॥ ೨

ಶಿವ

೭೫. ಕರುಣದಿಂದ ಕಾಯೋ ನಮ್ಮ ಮಂಜುನಾಥ

ರಾಗ: ಕೇದಾರ **ತಾಳ: ತ್ರಿಶ್ರನಡೆ**

ಕರುಣದಿಂದ ಕಾಯೋ ನಮ್ಮ ಮಂಜುನಾಥ।
ವರವ ಬೇಡಿಕೊಂಬೆನಯ್ಯ ವಿಶ್ವನಾಥ॥ ॥ಪ॥

ಪಾಪಗಳನು ಪರಿಹರಿಸುವ ಪಶುಪತಿ ನೀನೆ।
ತಾಪತ್ರಯಗಳ ತೀರಿಪ ತ್ರಯಂಬಕನು ನೀನೆ।
ಸರ್ಪಭೂಷಣ ಶಿವನೇ ಶಶಿಧರ ಶಂಕರನೇ।
ಕೋಪ ಮಾಡದೆನ್ನಮೇಲೆ ಕಾಯೋ ಕಾಲಭೈರವನೇ॥ ೧

ಕಲ್ಲುಮುಳ್ಳು ಮಣ್ಣು ಮರಳು ಎಲ್ಲ ನೀನೇ।
ಮಲ್ಲೆಹೂವ ತಂದೆನಲ್ಲೋ ಎಲ್ಲಿಡಲೋ ಶಿವನೇ।
ಬೆಲ್ಲಕಾಯಿ ಹಣ್ಣು ಹಾಲು ತಂದೆನಯ್ಯ ನಿನ್ನಾಣೇ।
ಒಲ್ಲೆ ಎಂದು ದೂಡಿ ನನ್ನ ಕೊಲ್ಲಬೇಡ ನನ್ನಾಣೆ॥ ೨

ಹರಿಯು ನೀನೆ ಹರನು ನೀನೆ ಮುರಹರ ನೀನಯ್ಯ।
ಚರಣಸೇವೆಗೆಂದು ಬಂದು ಕಾದು ನಿಂದಿಹೆನಯ್ಯ।
ಕರವಮುಗಿದು ಬೇಡಿಕೊಂಬೆ ನಿನ್ನ ಭಕ್ತಿ ನೀಡಯ್ಯ।
ನರಜನ್ಮ ಸ್ಥಿರವಲ್ಲ ನಿನ್ನ ಸೇವೆ ಭಾಗ್ಯವಯ್ಯ॥ ೩

ಸುಲಲಿತದಲಿ ಗಂಗೆ ಹರಿವ ಕಾಶಿ ನಿನ್ನದಯ್ಯ।
ಜಲಧಿಗೆದುರು ನಿಂದ ಗೋಕರ್ಣ ಮಹಾಬಲಯ್ಯ।
ಹಾಲಾಹಲವನುಂಡು ನಲಿದ ನಂಜುಂಡ ನೀನಯ್ಯ।
ಬಾಲೆ ಶೈಲಜಾನುತನೆ ಎನಗೊಲಿಯೋ ಕೇದಾರಯ್ಯ॥ ೪

೬೬. ಮಂಗಳವ ಪಾಡುತ್ತ ಅಂಗಳವ ಸಾರಿಸುತ

(ದ್ವಾದಶ ಜ್ಯೋತಿರ್ಲಿಂಗ ಸ್ತುತಿ)

ಮಂಗಳವ ಪಾಡುತ್ತ ಅಂಗಳವ ಸಾರಿಸುತ।
ಮಂಗಳಾಂಗಿ ಗೌರೀ ಪತಿಯ ಸ್ಮರಿಸುತ್ತ।
ರಂಗವಲ್ಲಿಯನಿಡುತ ನೆನೆದು ದ್ವಾದಶಜ್ಯೋತಿ-
ರ್ಲಿಂಗದೊಳಗೆನ್ನ ಮನವಿಡುವೆ ಸತತ॥ ॥ಪ॥

ಸೌರಾಷ್ಟ್ರ ದೇಶದೊಳು ಸೋಮನಾಥಗೆ ನಾನು
ನೀರಾಜನವಿತ್ತು ಇಲ್ಲಿ ಬಂದಿಹೆನು।
ರಾರಾಜಿಸಿದ ಶ್ರೀ ಶೈಲಮಲ್ಲಿಕಾರ್ಜುನನು
ನಾರಿ ಎನ್ನೊಳು ನಿಂದು ದಾರಿ ತೋರುವನು॥ ೧

ಉಜ್ಜಯಿನಿಯಲ್ಲಿವನು ಮಹಾಕಾಲ ಸುರೇಶ
ಸಜ್ಜನರಿಗೊಲಿಯುವನು ಆವಂತಿಕಾಧೀಶ।
ಸಜ್ಜಾದ ನರ್ಮದಾ ಕಾವೇರಿ ಸಂಗಮೇಶ।
ಸುಜ್ಯೋತಿ ಓಂಕಾರ ಅಮಲೇಶ್ವರೇಶ॥ ೨

ವೈದ್ಯನಾಥನು ಪಾರಲಿಕೆಯಲ್ಲಿಹ ಶಿವನು।
ಆದ್ಯನು ಡಾಕಿನಿಯ ಭೀಮ ಶಂಕರನು।
ವಿದ್ಯೆ ವರ್ಧನು ದಾರುಕೆಯೀಶ ನಾಗನಾಥನು ಅ-
ಸಾಧ್ಯನು ಸೇತು ಬಂಧದಲಿ ರಾಮೇಶ್ವರನು॥ ೩

ವಾರಣಾಸಿಯ ವಿಶ್ವನಾಥನನು ಸ್ಮರಿಸುತ್ತ।
ಸಾರ ಸಂಸಾರ ಸ್ವಾರಸ್ಯ ವರಿವೆ।
ನೇರಮಾರ್ಗದ ಗೋದಾವರೀ ತೀರದಲಿ।
ಶೌರಿ ಸಖ ತ್ರ್ಯಂಬಕನ ಕಂಡು ಬರುವೆ॥ ೪

ಹಿಮಾದ್ರಿಯಲ್ಲಿವನು ಕೇದಾರನೆಂದಿವನು।
ಕಾಮಾರಿ ಧಿಷಣೇಶ ಮಾಪುರಿವಾಸನು।
ಹೇಮಾದ್ರಿಯಲ್ಲಿವನು ಶ್ರೀಕಂಠನಾಗಿಹನು।
ಕಾಮಿನಿ ಶೈಲಜೆಯ ಪೊರೆಯುತಿಹನು॥ ೫

ಮಂಗಳವು ಮಹಲಿಂಗ ಮಂಗಳವು ಶಿವಲಿಂಗ।
ಮಂಗಳವು ಜ್ಯೋತಿರ್ಲಿಂಗಸಂಗ।
ಅಂಗನಾಮಣಿ ಶೈಲಜಾನುತೆಯ ಪದಭೃಂಗ।
ಸಂಗೀತ ಚಿಮ್ಮಿಸಿದ ಭಾವಾಂತರಂಗ॥ ॥೬॥

---

೬೭. ಕಲ್ಲಿನ ಗುಡಿಯಲ್ಲಿ

ರಾಗಃ ಹರಿಕಾಂಬೋಧಿ ಛಾಯೆ ತಾಳಃ ಚತುರಶ್ರನಡೆ

ತಾನಿ ತಂದಾನೋ ತಾನಿ ತಂದಾನೋ.....ತಾನಿ ತಂದಾನೋ।
ತಾನಂದನೋ ತಾನಿ ತಂದಾನೋ ತಾನಂದನೋ ॥ಪ॥

ಕಲ್ಲಿನ ಗುಡಿಯಲ್ಲಿ ಕಲ್ಲು ಕಂಭಗಳಲ್ಲಿ।
ಕಲ್ಲಾಗಿ ನಿಂದಿಹೆಯಾ ಕಲ್ಲೇಶಾ।
ಕಲ್ಲುಕಲ್ಲೆಂದೇ ಜನರೆಲ್ಲಪೇಳಲು।
ಕಲ್ಲಿಂದ ಮೆಲ್ಲನೆ ಬಾರೋ ಮಲ್ಲೇಶ॥ ೧

ಮಲ್ಲೆ ಮಲ್ಲಿಗೆ ಜಾಜಿ ಸಂಪಿಗೆ ಸುಮಗಳ।
ನಿಲ್ಲು ನಿಲ್ಲೆಂದು ನಿನ್ನ ಶಿರದ ಮ್ಯಾಲಿಡಲು।
ಒಲ್ಲೆ ಒಲ್ಲೆ ನಾನೆಂದು ನೀನದ ದೂಡೆ।
ಬಿಲ್ಲಾಗಿಬಗ್ಗಿ ಕರಮುಗಿಯುವರೋ॥ ೨

ಕಲ್ಲುಸಕ್ಕರೆ ಕಬ್ಬು ಹಣ್ಣು ಹಾಲನ್ನೆಲ್ಲಾ।
ಹಲ್ಲಿಲ್ಲದ ನಿನಗೆ ಎಡೆ ಇಕ್ಕುವರೋ।
ಎಲ್ಲಾ ನಿನ್ನಯ ವರ ಪ್ರಸಾದವೆಂದು।
ಮೆಲ್ಲಲು ತಾವೇ ಮೊದಲಾಗುವರೋ॥ ೩

ಕಲ್ಲಿಂದ ನೀ ಬಂದು ಮೆಲ್ಲನೆ ನೀ ತಿಂದು।
ಗುಳ್ಳೇ ನರಿಯಂತೆ ಕಲ್ಲ ನೀ ಸೇರೇ।
ಡೊಳ್ಳು ಪೂಜಾರಿಯ ಪೊಳ್ಳು ಕಾರ್ಯವಿದೆನುತ।
ಘೊಳ್ಳೆಂದು ನಕ್ಕು ಸುಳ್ಳಾಡುವರೋ॥ ೪

ಪೇಳಯ್ಯ ಪರಮೇಶ ಪೇಳಯ್ಯ ಲೋಕೇಶ।
ಪೇಳಯ್ಯ ನಿನ್ನ ನೊಲಿಸುವ ಪರಿಯಾ।
ತಾಳಮೇಳದ ಗಾನ ಭಾವ ಭಕ್ತಿಯಲಿರಿಸೆ
ಕೇಳಿ ಒಲಿಯುವೆ ಏನೋ ಎನ್ನೊಡೆಯಾ॥ ೫

ಶೈಲ ಗಿರಿಯವಾಸ ಕರಮುಗಿದು ಬೇಡುವೆ।
ಶೈಲ ಸುತೆಯ ಈಶ ಯೋಗೀಶ।
ಶೈಲಜೆ ಎಂತೆಂಬೋ ಪೆಸರು ಪೊತ್ತಿಹೆ ನಾನು।
ಶೈಲ ರೂಪವ ಬಿಟ್ಟು ಕರುಣಿಸೆನ್ನಾ॥ ೬

---

೬೮. ಓಹೋ ಆ ದೇವಾ ಆಹಾ ಈ ದೇವಾ

ರಾಗ: ಹರಿಕಾಂಬೋಧಿ ಛಾಯೆ ತಾಳ: ತ್ರಿಶ್ರನಡೆ

ಓಹೋ ಆ ದೇವಾ ಆಹಾ ಈ ದೇವಾ।
ದೇವ ಈ ದೇವ ಮಾದೇವನೆನ್ನುವರೋ।
ಯಾವ ರೂಪವೋ ನಿನಗೆ ತಿಳಿಯದೋ ಎನಗೆ।
ತಾನಿ ತಂದಾನೋ ತಾನೋ ತಾನೀ ತಂದಾನೋ॥ ॥ಪ॥

ಅನ್ನ ಕೊಡುವ ದೇವನೊಬ್ಬನಿಹನೆನ್ನುವರೋ।
ಚಿನ್ನಕಾಗಿ ಬೇರೆ ದೇವನಿಹನೆನ್ನುವರೋ।
ಹೆಣ್ಣು ಹೊನ್ನು ಮಣ್ಣು ಸುಣ್ಣ ಬಣ್ಣ ಬಣ್ಣ ಬಾಳಿಗಾಗಿ।
ಸಣ್ಣತನದಿ ಪೂಜಿಪರಿಗೆ ಮಣ್ಣುಗೊಂಬೆ ನೀನಹುದೋ॥ ೧

ಕೂತು ತಿಂಬೋ ಸೋಮಾರಿಗೆ ಮೈಗಳ್ಳನಿಗೇ।
ಹೊತ್ತು ಕಳೆವ ಸಾಧು ಸಂತ ಮಂತ್ರವಾದಿಗೇ।
ತುತ್ತು ತಿರಿದು ತಿಂಬೋ ತಿರುಕ ಕುರುಡ ಹೆಳವಗೇ।
ಮತ್ತೆ ನಿನ್ನ ನಾಮ ಸುಲಭ ಅವರ ಬಾಯಿಗೇ॥ ೨

ದೇವಸ್ಥಾನದಲ್ಲಿ ಪೂಜಾರಿ ಬಾಯಲ್ಲಿ ಮಂತ್ರ।
ಅವನ ಸಂಸಾರ ನಡೆಸಲಿಹುದು ಧರ್ಮಛತ್ರ।
ಕಾವದೈವ ನೀನೆಂದು ಪೇಳ್ವುದೊಂದೆ ಅವನ ಸೂತ್ರ।
ಅವನ ತಲೆ ನಿನ್ನ ಸಹಸ್ರ ನಾಮ ಕಲಿತ ದೊಡ್ಡ ಯಂತ್ರ॥ ೩

ಶಿಲೆಯಲ್ಲಿಹೆಯೋ ನೀನು ಕಲೆಯಲ್ಲಿಹೆಯೊ।
ಶಿಲೆ ಕಲೆ ಎಂಬ ಬಲೆ ನಿನಗೆಲ್ಲಿದೆಯೋ।
ತಾಳ ಮೇಳ ಭಾವ ಭಕ್ತಿ ಪ್ರೀತಿ ಎನ್ನ ಗಾನಕಿದೆಯೊ।
ಶೈಲಜೆಗೆ ಒಲಿದು ನೀ ಗಾನರೂಪಿಯಾಗೋ ಶಿವನೆ॥ ೪

---

೭೯. ಮನೆಯ ತುಂಬಿಸಿಕೊಂಡ ಶಿವನು

ರಾಗ: ಹಂಸಧ್ವನಿ **ತಾಳ: ತ್ರಿಶ್ರನಡೆ**

ಮನೆಯ ತುಂಬಿಸಿಕೊಂಡ ಶಿವನು ತನ್ನ ಮನದ ರಂಭೆಯ।
ಮನದ ಮುದವ ತಡೆದು ನುಡಿದ ಕಾಣುತವರ ಕಳಕಳಿಯ॥ ॥ಪ॥

ಜೋಗಿ-ಬೈರಾಗಿ-ಯೋಗಿ ನಾನೆಂದು ಹೆದರದಿರಿ।
ಯೋಗವಿದುವೆ ನಿಮ್ಮ ಮಗಳ ಧಾರೆ ಎನಗೆ ಎರೆದಿರಿ।
ತ್ಯಾಗ-ಭೋಗ-ರಾಗ ಜೀವನಕೀ ನಾರಿ ಮಾದರಿ।
ಭಾಗ್ಯವು ತ್ರಿಜಗನ್ಮಾತೆಯ ಹೆತ್ತವರು ನೀವಾದಿರಿ॥ ೧

ಲೋಕದೊಳಗೆ ಪ್ರಳಯರುದ್ರ ನಾನೆಂದು ನೀವರಿತು।
ಮೂಕರಾದೀರೆ? ಸಂದೇಹಿಸಿ ಮುಕ್ಕಣ್ಣನಿನಿತು।
ಶೋಕಪಡದಿರಿ ಲೋಕನಾಯಕಿಯ ಕುರಿತು।
ವ್ಯಾಕುಲ ದೂರಾಗಿಸಿ, ನಮ್ಮ ಕಳಿಸಿ ನೀವು ನೋವ ಮರೆತು॥ ೨

ಶೈಲಸುತೆಯ ಪಡೆದು ಹೊರಟ ಶಿವಗಣಗಳ ಹೊರಡಿಸುತ।
ಕಾಲಕೂಟನುಂಡ ನೀಲಕಂಠ ತನ್ನ ಸತಿ ಸಹಿತ।
ಕೈಲಾಸವೇ ಸಂಭ್ರಮದಲಿ ಮೆರೆಯುವುದನು ಕಂಡು ನಗುತ।
ಶೈಲಜಾಪತಿ ಶ್ರೀಕಂಠ ಈ ಶೈಲಜಾನುತನಾಗಿ ನಿಂತ॥ ೩

೭೦. ಹೆಣ್ಣನ್ನೊಪ್ಪಿಸಿದ ಹಿಮವಂತ

ರಾಗ: ಆನಂದಭೈರವಿ ತಾಳ: ಖಂಡಛಾಪು

ಹೆಣ್ಣನ್ನೊಪ್ಪಿಸಿದ ಹಿಮವಂತ ಸುತೆಯ
ಕಣ್ಣೊರಸುತ್ತ ತನ್ನ ಸತಿಯ ಸಂತೈಸುತ್ತ ॥ ॥ ಪ ॥

ಬಹುದಿನದ ತಪದ ಫಲ ನನ್ನ ಈ ಮಗಳು।
ಬಹುವಾಗಿ ಬಳಲಿದಳು ಶಿವ ನಿನ್ನ ಪಡೆಯಲು।
ಸಿಹಿಯೂಟ ಹಣ್ಣು ಹಾಲುಣಿಸಲು ತಂದಿಹಳು।
ಸಹಕರಿಸಿ ನಿನ್ನ ಬಾಳ ಬೆಳಗಲು ಬಂದಿಹಳೆಂದು ॥ ೧

ತಾಯಿ ಮೇನಕೆಯ ಮುದ್ದಿನರಗಿಣಿ।
ಮಾಯೆ ಮೋಸವ ಕಂಡರಿಯದ ಗುಣಮಣಿ।
ನ್ಯಾಯ ನೀತಿಯಲಿವಳೇ ನಿನ್ನ ಸಹಧರ್ಮಿಣಿ।
ತೋಯಜಾಕ್ಷಿ ನಿನ್ನ ಕೈಲಾಸದ ರಾಣಿ ॥ ೨

ಧನಕನಕ ವಸ್ತು ವಾಹನಗಳ ಸಹಿತ।
ಮನೆ ಚಾಕರರ ಆಕಳು ಕರುಗಳ ನೀಡುತ।
ದಿನಮಣಿಯಂತಹ ಸುಕುಮಾರರ ಪಡೆ ಎಂದೆನುತ।
ಅನುರಾಗದ ಸುಖ-ಸಂಸಾರಕೆ ಹೆಸರಾಗೆನುತ ॥ ೩

ಶ್ರೀಸುಬ್ರಹ್ಮಣ್ಯಸ್ವಾಮಿ

೭೧. ಸುಬ್ರಹ್ಮಣ್ಯಕೆ ಹೋಗುವ ಬನ್ನಿ

ರಾಗ: ಜಂಜೂಟಿ **ತಾಳ: ಚತುರಶ್ರನಡೆ**

ಸುಬ್ಬ ಸುಬ್ಬ ಗೋವಿಂದ ಸುಬ್ರಹ್ಮಣ್ಯ ಗೋವಿಂದ ॥ ಪ ॥

ಸುಬ್ರಹ್ಮಣ್ಯಕೆ ಹೋಗುವ ಬನ್ನಿ।
ಸುಬ್ಬಣ್ಣನ ನಾವ್ ಕಾಣುವ ಬನ್ನಿ।
ಶುಭ್ರಮನವ ಹೊತ್ತು ತನ್ನಿ।
ಹಬ್ಬದೂಟವ ಮಾಡಬನ್ನಿ॥

ಪರಶುರಾಮ ತಪಗೈದಿದ ಕ್ಷೇತ್ರ।
ಋಷ್ಯಶೃಂಗರು ನೆಲೆಸಿದ ಕ್ಷೇತ್ರ।
ಧರಣೀಪತಿ ಸುಧರ್ಮರಾಜನ।
ಘೋರ ಶಾಪ ವಿಮೋಚನ ಕ್ಷೇತ್ರ॥ ॥ ಸುಬ್ಬ ಸುಬ್ಬ ॥

ಕುಷ್ಠರೋಗದಿ ನರಳಿದ ಬ್ರಾಹ್ಮಣ।
ಕೆಟ್ಟ ಶಾಪವ ಹೊತ್ತ ಈ ತರುಣ। ಉ-
ಚ್ಛಿಷ್ಠದಲ್ಲಿ ಹೊರಳಿದ ಕಾರಣ।
ಶ್ರೇಷ್ಠರಾದರು ಕೇಳೋ ಜಾಣ॥ ॥ ಸುಬ್ಬ ಸುಬ್ಬ ॥

ಶೈಲಜಾಪತಿ ಶ್ರೀಕಂಠನಿಗೇ।
ಬಾಲನಾದ ಈ ಶರವಣಭವಗೇ।
ಇಳೆಯೊಳು ನಮ್ಮ ಬಾಳು ಕೊನೆಗೇ।
ಶೈಲಜಾನುತನೊಲಿಸುವ ಕಡೆಗೇ॥ ॥ ಸುಬ್ಬ ಸುಬ್ಬ ॥

೭೨. ಅಕ್ಕತಂಗಿಯರೇ ನೀವು ಬನ್ನಿ

ರಾಗ: ಮೋಹನ ತಾಳ: ಆದಿ

ಅಕ್ಕತಂಗಿಯರೇ ನೀವು ಬನ್ನಿ।
ಮಿಕ್ಕೆಲ್ಲ ಜನರಾ ಕರೆತನ್ನಿ॥ ॥ಪ॥

ಚಿಕ್ಕ ಊರಾದರು ಕುಕ್ಕೆ ಸುಬ್ರಹ್ಮಣ್ಯ।
ದಿಕ್ಕು ದಿಕ್ಕಿನ ಜನರ ಆಕರ್ಷಣ ತಾಣ।
ಸಿಕ್ಕಲಾರದು ಮತ್ತೆ ಕಳಕೊಂಡ ಈ ಪುಣ್ಯ।
ಬಿಕ್ಕ ಬೇಡಿ ಬೇಗ ಬನ್ನಿ ಇಂದೇ ಸುದಿನ॥ ॥ಅ. ಪ.॥

ಕಾಮಿನಿಯರು ನಾವ್ ಪಾಪವ ತೊಳೆಯಲು।
ಕುಮಾರ ಧಾರೆಯು ಕೈ ಬೀಸಿ ಕರೆಯಲು।
ನೇಮದಿಂದಲಿ ಸ್ವಾಮಿಯ ಸೇವಿಸಲು।
ಕಾಮಿತಾರ್ಥವನೀವ ಸ್ಕಂದನ ನೋಡಲು॥ ೧

ದೇವಸೇನಾಪತಿ ವಾಸುಕಿಯಲ್ಲಿ ನಿಂದು।
ಜೀವ ಜಂತುಗಳ ಪೊರೆಯುವನೆಂದೆಂದು।
ಕಾವದೈವ ನೀನೆಂದು ಭಾವಶುದ್ಧಿಯಲಿ ಬೇಡಿ।
ಶಿವಶಕ್ತಿಯರ ಸುತ ಶೈಲಜಾನುತನ ನೋಡಿ॥ ೨

---

೭೩. ಚಿಂತಾಮಣಿ ಗಣಪ

ಚಿಂತಾಮಣಿ ಗಣಪ ಶಾಂತಮೂರುತಿ ನಿನ್ನ ಏ-
ಕಾಂತದಲಿ ನಾ ಭಜಿಸುವೇ ಏ-
ಕಾಂತದಲಿ ಭಜಿಸಿ ಪೂಜಿಸುವೆ ಎನಗೊಲಿದು।
ಸಂತತವು ದಯತೋರಿ ವರವ ನೀಡು॥ ೧

ನಿನ್ನ ಕರುಣೆಯ ಕೋರಿ ಶ್ರೀ ಕ್ಷೇತ್ರ ಮಹಿಮೆಯು।
ಎನ್ನ ನಾಲಿಗೆಯಿಂದ ಉಲಿಯಲಯ್ಯಾ....।
ಎನ್ನ ನಾಲಿಗೆಯಿಂದ ಉಲಿದ ಸ್ವಾಮಿಯ ಮಹಿಮೆ
ಉನ್ನತದ ಹಿರಿಮೆಯಾ ಪಡೆಯಲಯ್ಯ॥ ೨

ಕುಕ್ಕೆ ಸುಬ್ರಹ್ಮಣ್ಯ ಕನ್ನಡ ನಾಡೊಳು।
ಮಿಕ್ಕಿ ಮೀರಿದ ಪುಣ್ಯ ಕ್ಷೇತ್ರವಿದು ಕೇಳು।
ಮಿಕ್ಕಿ ಮೀರಿದ ಪುಣ್ಯ ಕ್ಷೇತ್ರವಿದು ಬಂದವರ।
ಎಕ್ಕಿದ್ದ ಪಾಪಗಳ ಕಳೆವುದಯ್ಯ॥ ೩

ಶರವಣನ ಶಕ್ತ್ಯಾಯುಧದ ರಕ್ತವ ತೊಳೆದ
ನೀರಿದುವೆ ಕುಮಾರ ಧಾರೆಯಹುದು।
ನೀರಿದುವೆ ಕುಮಾರ ಧಾರೆಯಲಿ ಮಿಂದವಗೆ
ಸಾರ ಸಂಸಾರವೇ ನೇರ ಸ್ವರ್ಗ॥ ೪

ತಾರಕಾಸುರ ಸಿಂಹ ವಕ್ತ್ರಗಜಾಸುರ।
ಶೂರ ಪದ್ಮಾಸುರರ ಶಿರವ ತರಿದೂ।
ಶೂರ ಪದ್ಮಾಸುರರ ತರಿದಾ ಶಿಶುವು।
ಕಿರಿದಾದರೋ ಬಹಳ ಧೀರ ಮಗುವೂ॥ ೫

ರಾಕ್ಷಸರ ಸಂಹರಿಸಿ ವಿಹಾರವನೆ ಬಯಸಿ।
ತಕ್ಷಣದಿ ಸೋದರರ ಸಹಿತನಾಗಿ।
ತಕ್ಷಣದಿ ಸೋದರರ ಸಹಿತ ಷಣ್ಮುಖಸ್ವಾಮಿ।
ಕುಕ್ಷಿಯಲಿ ಕುಮಾರ ಗಿರಿಗಿಳಿದನೂ॥ ೬

ದೇವಸೇನಯ ತಂದು ಮುಂದೆ ನಿಲಿಸುತ ಬಂದು।
ದೇವರಾಜನು ತನ್ನ ಅಳಿಯನಾಗೆಂದಾ।
ದೇವರಾಜನು ತನ್ನ ಅಳಿಯನಾಗೆನುತಲೇ।
ದೇವಸೇನೆಯ ಕರವ ಮುದದಿ ಪಿಡಿದಾ॥ ೭

ತಪವ ಗೈಯ್ಯುತ ಕುಳಿತ ವಾಸುಕಿಯ ಪ್ರಾರ್ಥನೆಯು।
ವಿಪರೀತವಾಗೆ ಈ ಗೌರಿಸುತನು।
ವಿಪರೀತವಾಗೆ ಈ ಗೌರಿಸುತನು ಆಗ
ಉಪಸ್ಥಿತನು ಆದ ಶ್ರೀ ಕ್ಷೇತ್ರದಲ್ಲೀ॥ ೮

ಆದಿ ಸುಬ್ರಹ್ಮಣ್ಯದಲ್ಲಿರುವ ಹುತ್ತವು।
ಉದಯದೊಳು ದರುಶನಕೆ ಬಲು ಪುಣ್ಯವು।
ಉದಯದೊಳು ದರುಶನಕೆ ಬಲು ಪುಣ್ಯ ಅಲ್ಲಿಂದ
ಆದ್ಯಂತ ಶ್ರೀ ಕ್ಷೇತ್ರ ನೋಟ ಚಂದಾ॥ ೯

ಬಂದ ಬಂದವರೆಲ್ಲ ಕುಮಾರ ಧಾರೆಯೊಳು।
ಮಿಂದು ಮಡಿಯುಟ್ಟು ಬಲು ಭಕ್ತಿಯಿಂದಾ।
ಮಿಂದು ಮಡಿಯುಟ್ಟು ಬಲು ಭಕ್ತಿಯಲಿ ಮುಡಿಹೊರಳಿ
ಸ್ಕಂದ ಸ್ವಾಮಿಯ ಚರಣಕರ್ಪಿಸುವರೋ॥ ೧೦

ನಾನಾರೀತಿಯ ಪಾಪ ನಾನಾ ರೀತಿಯ ಶಾಪ।
ನಾನಾರೀತಿಯ ಕೋಪ ತಾಪದಿಂದಾ।
ನಾನಾರೀತಿಯ ಕೋಪ ತಾಪದಲಿ ಬೆಂದವರು।
ದೀನ ದಾರಿದ್ರರು ವರವ ಕೋರುವರು॥ ೧೧

ಶೈಲ ಸುತೆಯಾ ಪುತ್ರ ಸುಬ್ರಹ್ಮಣ್ಯ ಕ್ಷೇತ್ರ।
ಈ ಲೋಕದೊಳಗೆಲ್ಲ ಬಹು ಪುಣ್ಯವೂ।
ಈ ಲೋಕದೊಳಗೆಲ್ಲ ಬಹು ಪುಣ್ಯ ಕ್ಷೇತ್ರವಿದು।
ಶೈಲಜಾನುತನೊಲಿವ ತಾಣವಹುದು॥ ೧೨

---

೭೪. ಸ್ವಾಮಿ ಅಯ್ಯಪ್ಪನ ಗೀತೆ

ಹರಿ ಶರಣು ಹರ ಶರಣು ಹರಿಹರನ ಮಗ ಶರಣು॥ ॥ಪ॥

ದಯೆತೋರಿ ಪೊರೆಯಯ್ಯ ಸ್ವಾಮಿ ಅಯ್ಯಪ್ಪ।
ಭಯಭಕ್ತಿಯಿಂದ ನಾ ನಮಿಪೆನಪ್ಪ॥

ಹರಿಯು ತರುಣಿಯರೂಪ ತಳೆಯೆ ತಾನಾಗಿ।
ಪರಶಿವನ ವ್ಯಾಮೋಹ ಹರಿಯ ಮೇಲಾಗಿ।
ಹರಿಹರರು ಒಂದಾಗಿ ಧರೆಗೆ ನೀ ಬರಲಾಗಿ।
ನರರ ನಲ್ಮೆಯ ದೈವ ನೀನಾದೆ ನಿಜವಾಗಿ॥ ೧

ಜೀವನವು ಅತಿಘೋರವೆಂದವರಿಗೆಲ್ಲ।
ಭವಮಾಯೆ ಅರಿಯದೆಯೆ ನೊಂದವರಿಗೆಲ್ಲ।
ಭಾವಶುದ್ಧಿಯ ತಳೆದು ಭಜಿಸಿದವಗೆಲ್ಲಾ।
ಕಾವದೈವವು ನೀನೆ ಬೇರೆ ಗತಿಯಿಲ್ಲ॥ ೨

ಆಬಾಲವೃದ್ಧರಿಗು ನೀನು ಬೇಕಂತೆ।
ಅಬಲೆಯರ ಕಂಡರೆ ಕೋಪಗೊಳ್ಳುವೆಯಂತೆ।
ಶಬರಿಗಿರಿಯಲ್ಲಿ ನೀ ತಪವಗೈಯ್ಯುವೆಯಂತೆ।
ಶೋಭನಾಂಗಿಯು ಈ ಶೈಲಜಾನುತನಂತೆ॥ ೩

ಶ್ರೀ ರಾಘವೇಂದ್ರ ಸ್ವಾಮಿ

೭೫. ಸುಪ್ರಭಾತವು ನಿನಗೆ

ರಾಗ: ರೇವತಿ **ತಾಳ: ಖಂಡಛಾಪು**

ಸುಪ್ರಭಾತವು ನಿನಗೆ ಗುರುರಾಘವೇಂದ್ರ॥ ॥ಪ॥

ಸುಲಭದಲಿ ಒಲಿಯುವ ಗಣಪತಿಗೆ ನಮಿಸುತ್ತ।
ಕಲಿಸಿದ ಗುರುವಿನ ಪದಕೆ ನಾನೆರಗುತ್ತ।
ಕುಲದೈವ ವೀರ ರಾಘವನ ಸ್ಮರಿಸುತ ।
ಲಲನೆ ಶೈಲಜೆ ನಾನು ಹರಿಯಲಿರಿಸಿದೆ ಚಿತ್ತ॥ ೧

ಹರಿಭಕ್ತನೆನಿಸಿ ಶ್ರೀ ಹರಿಯ ನಿನ್ನಲೆ ಕಂಡು।
ಕರುಣೆಯಿಂದಲಿ ಭಕ್ತರಾರಾಧನೆಯನುಂಡು।
ವರವ ಕೋರಿದ ಜನಕೆ ನೀ ದೀನಬಂಧು।
ಗುರುಕೃಪೆಯ ಬೇಡುವೆ ನೀ ನೀಡು ಎನಗಿಂದು॥ ೨

ಕಾಲಕಾಲಕು ಧರ್ಮ ಕ್ಷಯವಾಗದಂತೆ।
ಕಾಲಪುರುಷನು ತನ್ನ ನ್ಯಾಯಬಿಡದಂತೆ।
ಮೇಲೆನಿಪ ಅವತಾರ ಪುರುಷ ನೀನಿರುವಂತೆ।
ಈ ಲೋಕದಲ್ಲಿರಿಸೆನ್ನ ನಿನ್ನ ನೆನಪಿರುವಂತೆ॥ ೩

ಆ ತುಂಗೆ ನದಿಯಾಗಿ ಹರಿಯುವ ತೀರದಲಿ।
ಆತುರಾತುರದಿ ಮಿಂದು ಮಡಿಯುಟ್ಟು ಮುದದಲಿ।
ಮಾತು ಮಾತಿಗೂ ನಿನ್ನ ಸ್ಮರಿಸುವರು ಮನದಲ್ಲಿ।
ಕೂತು ನಿಂತು ಮತ್ತೆ ಮುಡಿಹೊರಳಿ ಭಕ್ತಿಯಲಿ॥ ೪

ನಿಜದಿ ಮಂತ್ರಾಲಯವು ಅತಿ ಪುಣ್ಯಕ್ಷೇತ್ರ।
ದ್ವಿಜರೆಲ್ಲ ನಿನಗಾಗಿ ನುಡಿಯೆ ವೇದಮಂತ್ರ।
ಸುಜನ ಜೀವನಕೆಲ್ಲ ನೀನೀಡುವ ಪಾತ್ರ।
ಭಜಿಸಿ ನಿನ್ನ ಕಂಡಾಗ ಧನ್ಯ ಈ ನೇತ್ರ॥ ೫

ಮಿಂದು ಮಡಿಯುಟ್ಟವರು ತಂದ ಶುದ್ಧೋದಕ।
ಅಂದವಾದ ಶುಭ್ರ ಸ್ಫಟಿಕ ಮಾಲಾ ಪದಕ।
ಮಂದಹಾಸದ ತುಳಸಿ ಮಲ್ಲಿಗೆಯ ಮಾಲಿಕ।
ಚಂದದಿಂ ನಿನ್ನ ಬೃಂದಾವನಕಿರಿಸುವರು ತಿಲಕ॥ ೬

ಶ್ರೀಗಂಧ ಪೂಸಿದಾ ಶೀತಲವು ನಿನಗಿರಲಿ।
ದುರ್ಗಂಧದಾವರಣ ಈ ಹೃದಯದಿಂದೋಡಲಿ।
ಮಾಗಿದಾ ಫಲಪುಷ್ಪ ನಿನ್ನ ಸೇವಿಸಲಿ।
ತ್ಯಾಗಯೋಗದ ಭಾವ ಈ ಮನದಲಿರಲಿ॥ ೭

ಧೂಪವಾಘ್ರಾಣಿಸುತ ದೀಪದಾರತಿ ನೋಡು।
ಭೂಪರು ಭೂಷಣಗಳನಿತ್ತಿಹರು ನೋಡು।
ಕೋಪಿಸದೆ ಎನ್ನಪರಾಧ ಕ್ಷಮಿಸಿ ಕಾಪಾಡು।
ಈ ಪರಿಯಿಂ ನಿನ್ನ ನಾ ಭಜಿಸುವಂತೆ ಮಾಡು॥ ೮

ಕರ್ಪೂರದಾರತಿಯ ಮಂಗಳಾರತಿಯು।
ಕರ್ಪೂರ ವೀಳ್ಯವೂ ಶುಭದ ಸಮ್ಮತಿಯು।
ಕರ್ಪೂರ ತಾನುರಿದು ಬೆಳಗಿದಾ ಜ್ಯೋತಿಯು।
ಸರ್ಪಶಯನನ ಭಕ್ತ ನಿನಗಿದೋ ಅಕ್ಷತೆಯು॥ ೯

ಹಾಕಿದಾ ದಕ್ಷಿಣೆಯು ಪ್ರದಕ್ಷಿಣೆಯ ಜನರು।
ನೂಕಿದಾ ರೀತಿಯಲಿ ನಿನ್ನ ನೋಡಿ ಬರುವರು।
ಏಕೋ ಏನೋ ತಿಳಿಯೆ ನೀ ಮಾತ್ರ ಎನ್ನಲಿರು।
ಹಾಕಲಾರೆನೋ ಸುತ್ತು ನೀಡು ನೀ ಉಸಿರು॥ ೧೦

ವ್ರತನೇಮ ಉಪವಾಸ ನಾ ಮಾಡಲಾರೆ।
ಶ್ರುತಿ ಶಾಸ್ತ್ರ ಸಂಹಿತೆಯ ಅರ್ಥೈಸಲಾರೆ।
ಅತಿ ಭಕ್ತಿ ಭಾವದಲಿ ನಾನಿನ್ನ ಪಾಡುತಿರೆ।
ಗತಿ ನೀನೆ ತೋರೋ ಹರಿಯೆ ನಾ ನಿನ್ನ ಬಿಡಲಾರೆ॥ ೧೧

ಸಂಸಾರದಿಂ ಸಂನ್ಯಾಸ ಸಾಧ್ಯವೆಂದೆನಿಸಿದೆ।
ಸಂಸ್ಕಾರ-ಸುಜ್ಞಾನ-ಸದ್ಭಕ್ತಿ ಸಾಕೆಂದೆ।
ಕಂಸಾರಿ ಕೃಷ್ಣನ ವೀಣೆಯಲಿ ಕುಣಿಸಿದೆ।
ಧ್ವಂಸಗೊಳಿಸೋ ಎನ್ನಾರುಶತ್ರುಗಳ ಹೇ ತಂದೆ॥ ೧೨

ಕಲಿಯುಗದ ಕಲ್ಪತರು ಕಾಮಧೇನುವು ನೀನು।
ಸುಲಭದಲಿ ಸಲಹುವ ದಯಾಸಿಂಧುವು ನೀನು।
ಜಲಜನಾಭನ ಕಂಡ ಆತ್ಮಜ್ಞಾನಿಯು ನೀನು। (ಈ)
ಶೈಲಜಾನುತ ನೀನು ನಿನ್ನ ನಾ ಪಾಡುವೆನು॥ ೧೩

---

೭೬. ಗುರುರಾಯರ ಭಜನೆ ಮಾಡೋ ಮನುಜ

ರಾಗ: ಕಲಾವತಿ **ತಾಳ: ಆದಿ**

ಗುರುರಾಯರ ಭಜನೆ ಮಾಡೋ ಮನುಜ।
ಹರಿಯ ನೊಲಿಸಿ ಶ್ರೀ ಹರಿಯೇ ತಾನಾದ॥ ॥ಪ॥

ತುಂಗಾ ತೀರದಿ ನೆಲಸಿದ ವೈಣಿಕ।
ಅಂಗಜ ಜನಕನ ಭಕ್ತರ ಮಾಣಿಕ್ಯ।
ಅಂಗನೆಯರ ಅಭೀಷ್ಟಫಲದಾಯಕ।
ಮಂಗಳಮೂರುತಿ ಸುಜನ ಸಂಪೋಷಕ॥ ೧

ಜಗದೊಳು ಮಂತ್ರಾಲಯ ಬೃಂದಾವನ।
ಯೋಗಿ ವರೇಣ್ಯ ಶ್ರೀ ರಾಘವೇಂದ್ರ ದರುಶನ।
ಅಗಣಿತ ಮಹಿಮ ಈ ಶೈಲಜಾನುತನ।
ಪೊಗಳುವ ಜನಮವೇ ಪರಮಪಾವನ॥ ೨

---

೭೭. ದಯೆತೋರೋ ನೀ ರಾಘವೇಂದ್ರ

ರಾಗ: ಮೋಹನ ತಾಳ: ಆದಿ

ದಯೆತೋರೋ ನೀ ರಾಘವೇಂದ್ರ।
ಭಯಭಕ್ತಿಯಲಿ ನಾ ಕರೆವೆ ಮುನೀಂದ್ರ॥ ॥ಪ॥

ಕಾಯಶುದ್ಧಿಯಲಿ ಕೈ ಪೂಜೆಯ ಮಾಡಿ (ಭವ)
ಮಾಯೆಯ ಕಳೆಯೆಂದು ಮೊರೆಯಿಡುತಿಹೆನಾ।
ತಾಯಿ ಪ್ರೇಮದಿ ತನ್ನ ಕಂದನ ಸಲಹುವೋಲ್
ನ್ಯಾಯರೀತಿಯಲಿ ಎನ್ನ ಕಾಯಬೇಕಯ್ಯಾ ಗುರುವೇ॥ ೧

ವರಮಂತ್ರಾಲಯ ಶ್ರೀಕ್ಷೇತ್ರನಿವಾಸ।
ಕರಮುಗಿದು ಬೇಡುವೆ ಪೊರೆ ನೀ ಯೋಗೀಶ।
ತರುಣಿ ಶೈಲಜಾನುತ ಶ್ರೀಕಮಲೇಶನ।
ದರುಶನ ಪಡೆದ ನರ ಭಕ್ತಾಗ್ರೇಸ॥ ೨

---

೭೮. ಗುರುರಾಘವೇಂದ್ರನ ದರುಶನ ಪುಣ್ಯ

ರಾಗ: ಹಂಸಧ್ವನಿ ತಾಳ : ಆದಿ

ಗುರುರಾಘವೇಂದ್ರನ ದರುಶನ ಪುಣ್ಯ ಈ।
ಕಾರುಣ್ಯ ಮೂರ್ತಿಯ ಕಂಡವ ಧನ್ಯ॥ ॥ಪ॥

ತನಮನ ತೊಳೆಯುವ ತುಂಗಾಸ್ನಾನ।
ಜನುಮ ಜನುಮದೊಳಿ ಪರಮಪಾವನ।
ವೀಣಾಪಾಣಿ ಈ ಯೋಗಿವರೇಣ್ಯನ।
ನಾನಾ ವಿಧದಿ ಸ್ತುತಿಸುತಿರಲಿ ಈ ಮನ॥ ೧

ಏಸು ಜನ್ಮಗಳ ನೀಸಿದ ಜೀವವು।
ವಾಸುದೇವನನು ಕಾಣಲಿಲ್ಲವು।
ವಾಸುಕಿಶಯನ ಕೇಶವಗೆ ನಿನ್ನಾತ್ಮವು।
ವಾಸಾಸ್ಥಾನವೆಂದರಿತು ಬಂದೆವು ನಾವು॥ ೨

ಹರಿದಾಸರೆಲ್ಲ ಶ್ರೀಹರಿಯ ಕಂಡವರು।
ಹರುಷದಿ ಪಾಡಿ ಪೊಗಳಿ ನಲಿದಾಡಿದರು।
ತರುಣಿ ಈ ಶೈಲಜೆಯ ಮೊರೆಕೇಳ್ವರಾರು?
ಮರೆಯದೆ ಪೊರೆಯುತ ಶೈಲಜಾನುತನಾಗಿರು॥ ೩

---

೭೯. ನಿನ್ನ ದಯೆ ಎನಗಿರಲಿ ಗುರುರಾಘವೇಂದ್ರ

ರಾಗ: ನಾವನಾಮಕ್ರಿಯ ತಾಳ: ಖಂಡಛಾಪು

ನಿನ್ನ ದಯೆ ಎನಗಿರಲಿ ಗುರುರಾಘವೇಂದ್ರ।
ನನ್ನ ಕಡೆ ನೀ ನೋಡೋ ಯೋಗಿ ಮುನೀಂದ್ರ॥ ॥ಪ॥

ಮನೆಯ ಗಂಗಾಸ್ನಾನ ತುಂಗಾಸ್ನಾನ ಸಮಾನ।
ಹಣೆಯ ಕುಂಕುಮ ತಿಲಕ ಶ್ರೀರಕ್ಷೇ ಸಾಧನ।
ಮನವು ನಿನ್ನನು ನೆನೆವ ಈ ಜನ್ಮ ಪಾವನ।
ಕ್ಷಣಕ್ಷಣವು ಹಂಬಲಿಸಿ ನೀಡೋ ದರುಶನ॥ ೧

ಪುರವು ಮಂತ್ರಾಲಯವು ನಿನಗಿರುವುದಂತೆ।
ಪರಮ ಪುಣ್ಯಕ್ಷೇತ್ರವದು ಎನುವರಂತೆ।
ಮೊರೆಯಿಡುತ ಭಕ್ತಜನ ನಿನ್ನ ಸೇವಿಪರಂತೆ।
ತ್ವರಿತದಲಿ ಕರುಣಿಸುವ ಇಹದೈವ ನೀನಂತೆ॥ ೨

ಎನ್ನ ಮನೆ ಬೃಂದಾವನವೆಂದು ತಿಳಿಯುತ್ತ।
ನಿನ್ನ ನಿಲ್ಲಿಯೆ ನಾನು ಭಜಿಸಿ ಪೂಜಿಸುತ।
ಎನ್ನ ಮಾನಸ ಪೂಜೆ ಸ್ವೀಕರಿಸೊ ಎಂದೆನುತ ಈ
ಕನ್ಯೆಗೊಲಿನೀ ಗುರುರಾಯ ನೀನೆಂದೆನುತ॥ ೩

ಆಂಜನೇಯ ಸ್ವಾಮಿ

೮೦. ಜಿತಬುದ್ಧಿ ನೀಡೋ ಹನುಮ

ರಾಗ: ಕಲ್ಯಾಣವಸಂತ ತಾಳ: ಮಿಶ್ರಛಾಪು

ಜಿತ ಬುದ್ಧಿ ನೀಡೋ ಹನುಮ। ಎನ್ನ
ಚಿತ್ತವು ನಿನ್ನನು ನೆನೆಯಲೊ ಭೀಮ ॥ ॥ ಪ ॥

ನತಜನ ಪರಿಪಾಲ ಶೃತಗಾನ ಲೋಲ।
ಸ್ಮಿತಮುಖ ಕಮಲ ಸನ್ನುತಗುಣಶೀಲ ॥ ೧

ರಾಮಾರಾಮಾ ಎಂಬ ಆ ಮಂತ್ರ ಜಪಿಸುತ್ತ।
ಭಾಮೆ ಸೀತೆಯ ಮನಕೆ ರಾಮಪ್ರೇಮವನರುಹಿದೆ ॥ ೨

ಪ್ರಬಲ ಕಪಿಸೈನ್ಯ ಸೇರಿಸಿ ಜಯತಂದ ಹನುಮ।
ಆಬಾಲವೃದ್ಧರಿಗೆಲ್ಲ ಆರೋಗ್ಯಧಾಮ ॥ ೩

ಗುರುರಾಘವೇಂದ್ರ ಎಂದೆನಿಸಿ ನಿಜ ಭಕುತರ।
ಪೊರೆಯುವ ನಮ್ಮ ಈ ಶೈಲಜಾನುತ ಹನುಮ ॥ ೪

---

೮೧. ಗುಡ್ಡದಹಳ್ಳಿಯ ಹನುಮ

ಗುಡ್ಡದ ಹಳ್ಳಿಯ ಹನುಮಾ ನಿನಗೆ।
ಅಡ್ಡವ ಬೀಳುತ ಬೇಡುವೆ ಭೀಮಾ।
ಅಡ್ಡಲಾಗುವ ಅಡ್ಡಿ ಆತಂಕವ।
ಕಡ್ಡಿಯಲಿ ನೂಕಿ ಕಾಯೋ ನಿಸ್ಸೀಮಾ ॥ ೧

ರಾಮನಾಮವ ಜಪಿಸುತ ನೀನು।
ಭಾಮೆ ಸೀತೆಗೆ ಸಂತಸ ತಂದವನು।
ಪ್ರೇಮ ಪಾತ್ರನು ಶೀಲವಂತನು।
ನಮ್ಮಂಥವರ ಕುಲ ದೈವವು ನೀನು ॥ ೨

ಹರಕೆ ಹೊತ್ತು ನಿನ್ನ ಬಳಿ ಬಂದವರು।
ಚರಣಕೆರಗುತ ಕರ ಮುಗಿಯುವರು।
ಸುರುಟಿ ನಿಲ್ವೋರು ಮರುಗಿಮೊರೆವರೋ।
ವರವ ಕೋರುತ ಕರುಣೇಸೆಂಬೋರು॥ ೩

ಕಪಿಯ ರೂಪದಿ ನಿಂತಿಹ ಧೀರ।
ಕಪಟಕುಹಕವ ಸಹಿಸದ ಶೂರ।
ಆಪ್ತಬಾಂಧವ ಸುಪ್ತ ಸೈಂಧವ।
ತೃಪ್ತಜೀವನ ಕರುಣಿಸು ಬಾರ॥ ೪

ಕಲ್ಲುಕಂಬದ ಗುಡಿಯಲ್ಲಿಹೆಯೋ।
ಇಲ್ಲಿ ಎನ್ನಲ್ಲಿ ನೆರಳಾಗಿಹೆಯೋ।
ನಾನೇ ನೀನೆಯೋ ನೀನೆ ನಾನೆಯೋ।
ಶೈಲಜಾನುತನಾಗಿ ನೀ ಎನ್ನ ಕಾಯೋ॥ ೫

ಶ್ರೀದೇವೀಸ್ತುತಿ

೮೨. ತುಂಗಭದ್ರಾ ತೀರದೇ

ರಾಗ: ಯಮನ್ (ಅಥವಾ ಕಲ್ಯಾಣಿ)

ತುಂಗಭದ್ರಾ ತೀರದೇ ಇರುವ ಶಾರದೇ।
ಮಂಗಳಾಂಗಿ ನೀನೊಲಿದು ಬಾ ಶುಭವರದೇ॥ ॥ಪ॥

ಭಂಗವಿರದ ಭಕ್ತಿ ಬೇಡುತ ನಿನ್ನಲಿ। ಅ-
ಭಂಗವ ಪಾಡುವ ಭಕ್ತರ ನೋಡಿದೆ।
ಲಂಗರು ಹಾಕಿದ ನೌಕೆ ತಾ ನಿಲ್ಲುವಂತೆ ಎನ್ನ
ಮಂಗ ಬುದ್ಧಿಯ ಶುದ್ಧಾಂಗವಾಗಿ ನೀಗಬಾರದೇ॥ ೧

ಅಜನ ಪಟ್ಟದ ರಾಣಿ ದ್ವಿಜರ ವಿದ್ಯಾಮಣಿ।
ಸುಜನ ಜೀವನಕೆ ಸನ್ಮಾರ್ಗದರ್ಶಿನಿ।
ಈ ಜಗ ಜಂಜಡ ಮಾಣಿಸು ಕಲ್ಯಾಣಿ।
ನಿಜದಲಿ ನಿನ್ನ ನಾಮವ ನುಡಿವೆನೆ ವಾಣಿ॥ ೨

ಗುರುಹಿರಿಯರ ನಾ ಸೇವಿಪದಾದೆನೆ।
ನೆರೆ ಜನರಿಗೆ ನಿನ್ನ ನುಡಿ ಪೇಳಲಾರೆನೆ।
ಕರುಣೆಯಿಂದೆನ್ನ ಈ ಕರೆಯ ಕೇಳುತ ನಿನ್ನ।
ಶರಣರ ಸಲಹು ಶೈಲಜಾನುತೆ ಶಶಿವದನೆ॥ ೩

---

೮೩. ಎನ್ನ ಮೊರೆ ಕೇಳಿಸದೇ

ರಾಗ: ಹಿಂದೂಸ್ತಾನಿ ತೋಡಿ ತಾಳ: ಮಿಶ್ರಛಾಪು

ಎನ್ನಮೊರೆ ಕೇಳಿಸದೇ ತಾಯೆ ಶಾರದೇ
ಮನ್ನಿಸುತ ನನ್ನ ಈ ನಾಲಿಗೆಯಲಿರಬಾರದೇ॥ ॥ ಪ ॥

ನಿಂತಲ್ಲಿ ಕುಳಿತಲ್ಲಿ ನಾನಿರುವ ಸ್ಥಳದಲ್ಲಿ।
ಸ್ವಂತ ಜನರ ಬೆರೆವ ಈ ಜಂಜಾಟದಲ್ಲಿ।
ಕಂತುಪಿತನನು ನೆನೆದು ಒಲಿದು ನಾ ಪಾಡುತಲಿ।
ಚಿಂತೆ ಮರೆವ ಸೌಭಾಗ್ಯ ಎನಗಿರಲಿ॥ ೧

ಸರಸವಾಣಿಯೆ ನಿನ್ನ ಕರುಣಾಕಟಾಕ್ಷವು।
ಗುರುಹಿರಿಯರನುಗ್ರಹವು ದೊರೆತ ದಿನವದು ಶುಭವು।
ಹರಿ ಹರರ ಕೃಪೆ ಪಡೆದ ಆಹಾರ ಅಮೃತವು।
ಹರಿನಾಮ ಪಾಡುತಿರೆ ಈ ಜನ್ಮ ಸಾರ್ಥಕವು॥ ೨

ನೀನೊಲಿದ ನಾಲಿಗೆಗೆ ಮೃಷ್ಟಾನ್ನ ರುಚಿಯಿಲ್ಲ।
ನೀನಿರುವ ತಾಣವದು ಸ್ವಚ್ಛಸುಂದರವೆಲ್ಲ।
ಮಾನಿನಿ ಈ ಶೈಲಜೆಯ ಮಾನಾಭಿಮಾನಕೆಲ್ಲ।
ನೀನೆ ಕಾರಣ ತಾಯೆ ಆ ಶೈಲಜಾನುತನಿದಬಲ್ಲ॥ ೩

೮೪. ವರವಕೊಡು ವರಲಕ್ಷ್ಮಿ

ರಾಗ: ಕಾನಡ **ತಾಳ: ಖಂಡಛಾಪು**

ವರವಕೊಡು ವರಲಕ್ಷ್ಮಿ ಕರುಣೆದೋರಿ।
ಸೆರಗೊಡ್ಡಿ ಬೇಡುವೆನೆ ನಿನ್ನೆಡೆಗೆ ಸಾರಿ॥ ॥ಪ॥

ಶ್ರಾವಣ ಮಾಸದಲಿ ಸರಿ ಶುಕ್ರವಾರ।
ಲಾವಣ್ಯವತಿ ನೀನು ಸಿರಿತರುವ ವಾರ।
ಕಾವ ದೈವವು ನೀನೆ ಎಂದು ಪೂಜಿಪ ಜನರ।
ಭಾವನೆಯ ನರಿತು ನೀ ಹರಿಸು ಹರುಷದ ಪೂರ॥ ೧

ಆದಿ ಮಧ್ಯಾಹ್ನದಲಿ ಅಭ್ಯಂಜನವಗೈದು।
ಆದಿ ಹದಿನಾರು ಫಲ-ಪುಷ್ಪ-ಗಂಧವ ತಂದು।
ಆದ್ಯಂತ ಅಂಗಾಂಗ ನಾಮ ಪೂಜೆಯ ಗೈದು।
ಆದರದ ಮಂತ್ರೋಪಚಾರದಲಿ ಕರೆದು॥ ೨

ರತ್ನಸಿಂಹಾಸನದಿ ಸ್ತ್ರೀರತ್ನರೂಪದಲಿ।
ರತ್ನೋಪದಾದಿಯಲಿ ಶೋಭಿಸುವ ರೀತಿಯಲಿ।
ನಿತ್ಯನೈವೇದ್ಯವನು ಧೂಪ ದೀಪಗಳಲ್ಲಿ।
ಸತ್ಯಲಕ್ಷ್ಮಿಯೇ ನೀ ಸ್ವೀಕರಿಸು ಸೌಮ್ಯದಲಿ॥ ೩

ಈ ಶುಕ್ರವಾರದಲಿ ಈ ಪೂಜೆ ಸಂಭ್ರಮ।
ಆಸೆ ಮಹದಾಸೆಗಳ ಕೋರುವ ಮಾಧ್ಯಮ।
ಏಸು ಜನ್ಮಗಳಲ್ಲೂ ಸಿಗದ ಮುಕ್ತಿಧಾಮ।
ವಾಸುದೇವನ ಸತಿಯೆ ಸೌಭಾಗ್ಯ ನೀಡಮ್ಮ॥ ೪

ನೀರಜಾಕ್ಷಿಯೆ ನಿನ್ನ ನೇರದಲಿ ಅರ್ಚಿಸಿ।
ನಾರಿಯರು ವರಲಕ್ಷ್ಮಿ ನಿನ್ನ ಭಜಿಸಿ।
ಭೂರಿ ದಕ್ಷಿಣೆ ಸಹಿತ ತಾಂಬೂಲವಿರಿಸಿ।
ಕೋರುವರು ಸುಖಶಾಂತಿ ಸಂತಸವನರಸಿ॥ ೫

ನಾನೇನ ಬೇಡಲೇ ತಾಯಿ ಜಗದಂಬೆ।
ನೀನೆ ಎನಗಿತ್ತು ಭವಸುಖದ ಕೈಗೊಂಬೆ।
ನೀನೆ ತೋರಿದ ಜೀವ ಭಾವದಲೆಮುದಗೊಂಬೆ।
ಎನ್ನೆದೆಯೆ ಶೈಲಜಾನುತೆ ನಿನ್ನ ಮನೆಯೆಂಬೆ॥ ೬

---

೮೫. ನಂಬಿ ಬಂದೆನೆ ನಿನ್ನ ಪಾದಾರವಿಂದವನೆ

ರಾಗ: ಮಧುವಂತಿ ತಾಳ: ಆದಿ

ನಂಬಿ ಬಂದೆನೆ ನಿನ್ನ ಪಾದಾರವಿಂದವನೆ।
ಅಂಬಿಕೆ ದೇವಿ ಹೇ ಜಗದಂಬೆ॥ ॥ಪ॥

ಹೊಂಬಿಸಿಲ ತಂಪು ತಾಯೆ ನಿನ್ನ ಮಡಿಲಪ್ಪು।
ಜಂಬುನೇರಳೆ ಸೊಂಪು ನಿನ್ನ ನಾಮದ ನೆನಪು।
ಅಂಬುಜಾಕ್ಷಿ ನಿನ್ನ ಕರುಣಾಕಟಾಕ್ಷವು।
ಅಂಬರಕೇರಿದ ಇಂಬಿನ ಹಂಬು॥ ೧

ತನು ನಿನ್ನದು ಈ ತನ್ನತನ ನಿನ್ನದು।
ಅನುಗಾಲವು ಮನ ನಿನ್ನಲಿರುವುದು ಈ।
ತನುನಡೆಸುವ ಸಕಲ ಸರ್ವಕಾಲಿಕ ಕಾರ್ಯ।
ಕನವು ಆಕ್ಷೇಪದ ಚಿತ್ತವೃತ್ತಿ ನಿನ್ನದು॥ ೨

ಕರುಣೆಯಿಂದ ಎನ್ನ ಕರವ ಪಿಡಿದು ಈ।
ಮೊರೆಯ ಕೇಳಿ ಪೊರೆಯೆ ತಾಯೆ।
ಹರುಷದಿಂದ ಈ ಶಿರದಮೇಲೆ।
ನಿನ್ನಭಯ ಹಸ್ತ ಇರಿಸೀ ಕಾಯೇ॥ ೩

ಸರಸಿಜ ನೇತ್ರೆ ಸುಜನ ಸುಮಿತ್ರೆ।
ಸರಸವಾಣಿ ಈ ಶೈಲಜಾನುತೆ।
ಸುಚರಿತೆ ಶುಭಗಾತ್ರೆ॥ ೪

೮೬. ಶರಣು ಮಂಗಳೆ ಮಹಾದೇವಿಯೆ

ರಾಗ: ನವರೋಜು ತಾಳ: ಮಿಶ್ರಛಾಪು

ಶರಣು ಮಂಗಳೆ ಮಹಾದೇವಿಯೆ ನಿರತ ನಿನ್ನನು ಭಜಿಸುವೆ। ನಿನ್ನ
ಚರಣಸೇವೆಯ ಭಾಗ್ಯ ಕರುಣಿಸಿ ಪೊರೆಯೆಯಮ್ಮನು ಗಿರಿಜೆಯೇ॥ ೧

ಸಾಮಗಾನ ವಿನೋದಿನೀ ಶಿವೆ ಕಾಮಜನಕ ಸಹೋದರಿ।
ಸೋಮಶೇಖರ ಪ್ರಾಣವಲ್ಲಭೆ ಕಾಮಿನೀ ಶುಭದಾಯಿನಿ॥ ೨

ಪಂಚದಶಿ ಷೋಡಶೀ ಮಂತ್ರ ಸ್ವರೂಪಿಣೀ ಭಯಹಾರಿಣೀ।
ವಂಚನೆಯ ಮಾಡದೆಲೆಎನ್ನ ಮನದಾ ಚಂಚಲತೆಯಾ ತೊಳೆಯೆ ನೀ॥

ಕಾದಿವಿದ್ಯಾ ಹಾದಿವಿದ್ಯಾ ಶ್ರೀವಿದ್ಯಾ ಸೊಬಗಿನೀ।
ಬೋಧರೂಪಿಣಿ ಮನೋನ್ಮಣಿ ಸೌಭಾಗ್ಯ ಬ್ರಹ್ಮವಿದ್ಯಾದಾಯಿನಿ॥ ೪

ನಿತ್ಯಸತ್ಯವ ಸ್ವಚ್ಛದಲಿ ತೋರಿಸುವ ಸಚ್ಚಿದ್ರೂಪಿಣೀ।
ಅತ್ಯಧಿಕದಲಿ ನಿನ್ನ ನಾಮವ ಜಪಿಸುವೆನೆ ಕಾತ್ಯಾಯಿನಿ॥ ೫

ರಕ್ತಬೀಜಾಸುರನ ರಕ್ತವ ಯುಕ್ತಿಯಲಿ ಕುಡಿದ ಶಕ್ತಿಯೇ।
ಭಕ್ತಿಯಿಂದಲಿ ಭಜಿಸುವಗೆ ಸನ್ಮುಕ್ತಿ ಕರುಣಿಪ ಮಾತೆಯೆ॥ ೬

ಚಂಡಮುಂಡರ ರುಂಡವ ಚೆಂಡಾಡಿದ ಚಾಮುಂಡಿಯೇ।
ಭಂಡ ದೈತ್ಯರ ಖಂಡಖಂಡವ ತುಂಡರಿಸಿದ ಪ್ರಚಂಡಿಯೇ ೭

ಮಹಿಷಮರ್ದಿನಿ ಸಿಂಹವಾಹಿನಿ ಮಹಾಕಾಳಿ ಮಹೇಶ್ವರಿ।
ಮಹಾಪಾತಕ ನಾಶಿನಿ ಮದಶಾಲಿನಿ ಶಿವೆ ಶಂಕರಿ॥ ೮

ನಾಡಹೊರಗಡೆ ನೆಲೆಸಿ ಭಕುತರ ಸಲಹುತಿಹ ಅನ್ನಪೂರ್ಣೆಯೇ।
ಹೊರನಾಡಕ್ಷೇತ್ರದ ಸೊಬಗ ಸವಿಯುತ ಸಡಗರದಿ ನೀ ನಿಂತೆಯೇ ॥

ನೀಲನೇತ್ರಳೆ ನೀಲಚಿಕುರೆ ನಿರಾಕಾರ ನಿರಂತರೇ।
ಬಾಲೆ ಶೈಲಜೆ ನಾನೆ ತಾಯೆ ಶರಣು ಹೊಕ್ಕೆನೆ ನೀ ಪೊರೆ॥ ೧೦

೮೭. ಚೌಡೇಶ್ವರಿ ಸುಪ್ರಭಾತ

ರಾಗ: ಹಿಂದೂಸ್ತಾನಿ ಕಾಪಿ ತಾಳ: ಖಂಡಛಾಪು

ಕರಿಮುಖಗೆ ಎರಗಿ ನಾ ಸಿರಿದೇವಿ ಶಾರದೆಗೆ।
ಕರಮುಗಿದು ಗುರುಕೃಪೆಯ ಕೋರಿ ಹರಿಗೇ।
ಕರಮುಗಿದು ಗುರುಕೃಪೆಯ ಕೋರಿ ಹರಿಗೇ ನಮಿಸಿ।
ವರವ ಕರುಣಿಪ ವೀರ ರಾಘವನ ಸ್ತುತಿಪೇ॥ ೧

ವೀರರಾಘವ ಎನ್ನ ಕುಲದೈವ ನೀನಾಗೆ।
ತೋರೋ ದಾರಿಯ ನಿನ್ನ ಪಾಡುತಿಹ ಎನಗೆ।
ತೋರೋ ದಾರಿಯ ಎನಗೆ ದೇವಿ ಚೌಡೇಶ್ವರಿಯ।
ಭಾರಿ ಮಹಿಮೆಯ ಸಾರಲಿರುವೆ ಜಗಕೇ॥ ೨

ಸುಪ್ರಭಾತವು ದೇವಿ ಚೌಡೇಶ್ವರೀ ದೇವಿ।
ಅಪ್ರತಿಮ ಲಾವಣ್ಯ ಸುಭಗೆ ದೇವಿ।
ಅಪ್ರತಿಮ ಲಾವಣ್ಯ ದೇವಿಯೆ ನಿನ್ನ।
ಕ್ಷಿಪ್ರದಲಿ ಸೇವಿಸುವ ಪರಿಯೆ ಚೆನ್ನ॥ ೩

ನಂದರಾಜನ ದಯದಿ ನಿಂದು ನಂದಾವರದಿ।
ನಂದವೈದಿಕ ಜನರ ಕುಲಕೆ ಮುದದಿ।
ನಂದವೈದಿಕ ಜನರ ಕುಲಕೆ ಮುದದಲಿ ಹರಸಿ।
ಸಾನಂದ ಸೌಭಾಗ್ಯ ನೀಡಿದವಳೇ॥ ೪

ದಶವಂತ ರಾಯನ ಕುಲದೇವಿ ನೀನಾಗಿ।
ದಸರಿಘಟ್ಟದ ಜನಕೆ ಜನನಿಯಾಗಿ।
ದಸರಿಘಟ್ಟದ ಜನಕೆ ಜನನಿ ನಿನ್ನ ಭಕುತರ ಕರೆಗೆ।
ಹೆಸರ ತರುತಲಿ ಬಂದೆ ಮತ್ತೀಕೆರೆಗೆ॥ ೫

ಅತ್ತಿತ್ತ ನೋಡುತಲಿ ಎತ್ತೆತ್ತ ಹೋದವರು।
ಮತ್ತಿಕೆರೆಯಲಿ ನಿನ್ನ ಕಾಣಬಯಸುವರು।
ಮತ್ತಿಕೆರೆಯಲಿ ನಿನ್ನ ಕಾಣಬಯಸುವ ಜನರು।
ಮತ್ತೆಲ್ಲೂ ಹೋಗದೆಲೆ ನಿನ್ನ ಸೇವಿಪರು॥ ೬

ಇರಳು ಕಳೆದು ನಸುಕು ಮೂಡಿ ಹೊತ್ತೇರಿತು।
ಅರಳುಮಲ್ಲಿಗೆ ಕುಸುಮ ಪರಿಮಳವ ಹೊತ್ತು।
ಅರಳುಮಲ್ಲಿಗೆ ಕುಸುಮ ಪರಿಮಳವ ಹೊತ್ತು ನಿನ್ನ।
ಚರಣ ಕಮಲದ ಪೂಜೆ ಕಾಯುತಿದೆ ಕುಳಿತು॥ ೭

ಹಕ್ಕಿ ಪಕ್ಷಿಗಳೆಲ್ಲ ಕೊಕ್ಕು ಚಾಚುತ ತಮ್ಮ।
ಚೊಕ್ಕದನಿಯಲಿ ನಿನ್ನ ಕರೆಯುತಿಹವು।
ಚೊಕ್ಕದನಿಯಲಿ ನಿನ್ನ ಕರೆದು ತಮ್ಮಲೆ ಹರ್ಷ।
ಉಕ್ಕೇರಿ ಸೊಕ್ಕಿನಲಿ ತಿರುಗುತಿಹವು॥ ೮

ಗಂಗೆ ಗೋದಾವರಿ ತುಂಗಭದ್ರೆ ಕಾವೇರಿ।
ಅಂಗನೆಯರಾರತಿಯ ಕೈಯ ಸೇರಿ।
ಅಂಗನೆಯರಾರತಿಯ ಕೈಸೇರಿ ಮುದಬೀರಿ।
ಮಂಗಳಾಂಗಿಯೆ ನಿನ್ನ ಬಳಿ ಬರಲು ಸಾರಿ॥ ೯

ಕಪಿಲೆ ನಂದಿನಿ ಕಾಮಧೇನುವೇ ಮೊದಲಾಗಿ।
ಅಪರೂಪದವರೆಲ್ಲ ನಿಂದಿಹರು ಸಾಲಾಗಿ।
ಅಪರೂಪದವರೆಲ್ಲ ಬಂದು ನಿಂದಿರೆ ಕ್ಷೀರ।
ವಿಪರೀತ ಸುರಿಯುತಿದೆ ಹಾಲ ಹೊಳೆಯಾಗಿ॥ ೧೦

ಭಾವ ಪರವಶರಾಗಿ ಯಕ್ಷ ಗಂಧರ್ವರೂ।
ನೋವು ನಲಿವನು ಮರೆತ ನರರು ಕಿನ್ನರರು।
ನೋವು ನಲಿವನು ಮರೆತ ನರರು ಕಿನ್ನರರೆಲ್ಲ।
ದೇವಿ ನಿನ್ನ ಗುಣಗಾನ ಮಾಡುತಿಹರು॥ ೧೧

ಲಲಿತ ದುರ್ಗಾ ಮಾರ್ವಭೂಪಾಳಿ ತೋಡಿ।
ಕಲಿತ ಭೈರವಿ ಮಾಲವಿಯಲಿ ಪಾಡಿ।
ಸುಲಲಿತದಿ ವಾಗಧೀಶ್ವರಿಯ ಪಾಡುವ ಜನರ।
ಅಲೆಅಲೆಯ ನಾದದಲಿ ನಿನ್ನಿರವ ನೋಡಿ॥ ೧೨

ಗೌರಿ ಮನೋಹರಿಯೆ ದುರ್ಗಿ ಪರಮೇಶ್ವರಿಯೆ।
ಶೌರಿ ಸಖ ಶಂಕರನ ಪ್ರಾಣಸಖಿಯೆ।
ಶೌರಿ ಸಖ ಶಂಕರನ ಪ್ರಾಣಸಖಿ ಇದು ನಿನ್ನ।
ತೌರು ಮನೆ ಉಪಚಾರವೆಂದು ತಿಳಿಯೆ॥ ೧೩

ಚಂಡ ಮುಂಡರ ರುಂಡ ಚಂಡಾಡಿದಾ ತಾಯೆ।
ಭಂಡರನು ಖಂಡಿಸಿದ ಚಾಮುಂಡಿಯೆ।
ಭಂಡರನು ಖಂಡಿಸಿದ ಚಾಮುಂಡಿ ನಿನ ಮೇಲೆ।
ಖಂಡುಗದ ಪ್ರೀತಿ ಎನಗಿಹುದು ಕಾಯೆ॥ ೧೪

ಮಂತ್ರಿಣೀ ದಂಡಿನೀ ವಾಗ್ದೇವಿ ಮೊದಲಾದ।
ಮಂತ್ರ ತಂತ್ರದ ಸಾರ ಸನ್ನುತೆಯ ಪಾದ।
ಮಂತ್ರ ತಂತ್ರದ ಸಾರ ಶುಭವು ಎಮಗನುದಿನದ।
ಯಂತ್ರವಾಹಕವಾಗೆ ಸುಖ ಸಂಪದ॥ ೧೫

ತನುಮನದ ಶುದ್ಧಿಯಲಿ ನಿನ್ನ ಸೇವಿಪ ಜನರ।
ಅನುಭವದ ಸಾರ ಈ ಕವನಕಾಧಾರಾ।
ಅನುಭವದ ಸಾರ ಈ ಕೃತಿಯಲಿರೆ ಎನ್ನ ನೀ।
ಅನವರತ ಪೊರೆಯುವುದು ನಿನ್ನ ಭಾರ॥ ೧೬

ಸಾಮಗಾನವ ನುಡಿಸಿ ವೇದಪಾಠವ ಪಠಿಸಿ।
ಸೋಮಶೇಖರನರಸಿ ನಿನ್ನ ಸ್ತುತಿಸಿ।
ಸೋಮಶೇಖರನರಸಿ ನಿನ್ನ ಸ್ತುತಿಸುತ ಎನ್ನ।
ಈ ಮಧುರ ಗಾನದಿಂದೆಚ್ಚರಿಸುವೆ॥ ೧೭

ಶೈಲಜಾನುತೆ ನೀನು ಕಾಲವೆಷ್ಟುರುಳಿದರೂ।
ಶೈಲಜಾನುತ ಹರಿಯ ಎನಗೆ ತೋರು।
ಶೈಲಜಾನುತ ಹರಿಯ ಎನಗೆ ತೋರುತ ನಿನ್ನ।
ಶೈಲರೂಪದೊಳು ನಿನ್ನಿರವ ಸಾರು॥ ೧೮

೮೮. ಸರ್ಪಾಭರಣ ಭೂಷಿತಾಮ್ (ಶ್ಲೋಕ)

ರಾಗ: ರೇವತಿ

ಸರ್ಪಾಭರಣ ಭೂಷಿತಾಂ।
ಮಣಿಮಯ ಮಕುಟಾಂ।
ಸಾಲಂಕೃತಾಂ ಶೋಭಿತಾಂ।
ಪುಷ್ಪಾಲಂಕೃತ ಸುಂದರ ಸುದೇಹ ಧಾರಿಣೀಂ।
ಹೇಮಾಂಬರ ಭೂಷಿಣೀಂ॥

ಖಡ್ಗಾಯುಧಂ ಚ ತ್ರಿಶೂಲ ಡಮರು ಧರೀಂ।
ಕರೇ ಕುಂಕುಮ ಪಾತ್ರಾ ಧಾರಿಣೀಂ।
ಶ್ರೀ ಚೌಡೇಶ್ವರಿ ದೇವತಾಂ ಭಗವತೀಂ।
ಧ್ಯಾಯಾಮಿ ಸದಾ ಶಂಕರೀ॥

---

೮೯. ಈ ಭಜನಾನಂದ

ರಾಗ: ರೇವತಿ **ತಾಳ: ಆದಿ**

ಈ ಭಜನಾನಂದ ಚಿತ್ಸುಖದಾನಂದ।
ಈ ಭಜನಾನಂದ ಚಿತ್ಸುಖದಾನಂದ॥ ॥ಪ॥

ಆ ಜನ್ಮದೊಳಗೆ ಈ ಜೀವದಿನವು।
ಆಧ್ಯಾತ್ಮ ಮನವ ಪೊಂದಿ ತಾ।
ಈ ಜಗನ್ಮಾತೆ ಚೌಡೇಶ್ವರಿಯಲಿ।
ತನುಮನ ನಿಲಿಸುತ ಪಾಡುತ॥ ೧

ಪಾದಪದ್ಮದಾ ಪದ್ಮರೇಖೆಯನು।
ಪದ್ಮಪುಷ್ಪದಿಂ ಪೂಜಿಸುತಾ ಆ-
ಪಾದಮಸ್ತಕದ ದಿವ್ಯತೇಜವನು।
ಪದ್ಮನಯನದಲಿ ಕಾಣುತಾ॥ ೨

ಸರಸಿಜಾಕ್ಷಿಯನು ಸರಸ ಸಾರಸದಿ।
ಸಹಸ್ರ ಕಮಲವ ತಂದು ನಾ।
ಸರಸಸ್ವರನೆ ಕಟ್ಟಿ ತರತರದ ಮಾಲೆ।
ಸ್ಮರಹರನರಸಿಯ ಸ್ತುತಿಪದಿನ॥ ೩

ಕನಕ ರತ್ನಗಳು ಕಂಠಾಭರಣವು।
ದಿನಕರ ತೇಜದಿ ಶೋಭಿಸಿರೆ।
ಅನುಪಮದ ವೇಷ ಭೂಷಣ ಅಂಗದಿ।
ಚಂದ್ರಕಿರಣಗಳ ಸೂಸುತಿರೆ॥ ೪

ಸರ್ಪಸ್ವರೂಪಿ ಕುಮಾರ ಸ್ಕಂದನ।
ಜನನಿ ಈ ದೇವಿಯ ಮಕುಟದಿಂದ।
ಸರ್ಪರಾಜ ತನ್ನ ಸರ್ಪಮಣಿಪ್ರಭೆಯ।
ದರ್ಪದಿಂದಲೇ ತೋರಿನಿಂದ॥ ೫

ಖಡ್ಗಧಾರಿಣಿಯ ಡಮರುಗ ತ್ರಿಶೂಲ।
ಕುಂಕುಮ ಪಾತ್ರೆಯು ಕೈಯಲಿಹ ಈ।
ಖಡ್ಗದೇವಿಯನು ಖಡ್ಗಮಾಲೆಯೊಳು।
ಖಡ್ಗಮಂತ್ರದಿಂ ಜಪಿಸುತಿಹ॥ ೬

ವಿಘ್ನನಿವಾರಿಣಿ ವಿದ್ಯಾದಾಯಿನಿ।
ವಿವಿಧ ಕ್ಲೇಶ ನಿವಾರಿಣಿ।
ಭಗ್ನಮನದ ಅಜ್ಞಾನವ ಹರಿಸುವ।
ಸಾನುರಾಗ ಸುಖದಾಯಿನಿ॥ ೭

ಆದಿಪರಾಶಕ್ತಿ ಅಖಿಲಾಂಡೇಶ್ವರಿ।
ಆದಿಮಧ್ಯಾಂತ ಕಾರಿಣಿ।
ಆದಿ ಲಕ್ಷ್ಮಿ ಮಹಲಕ್ಷ್ಮಿ ವಿಜಯದಾ।
ಹಾದಿ ತೋರೆ ಚಿದ್ರೂಪಿಣೀ॥ ೮

ಶೈಲಜಾಪತಿಯ ಪರಶಿವಮೂರ್ತಿಯ।
ಪರಮಪ್ರಾಣ ಸಖಿ ದೇವಿಯೆ ಈ।
ಶೈಲಜಾವಿನುತೆ ಶಿವಕಾಮೇಶ್ವರಿ।
ಚೌಡೇಶ್ವರಿ ಜಗನ್ಮಾತೆಯೇ॥ ೯

೯೦. ಚಂದ್ರವದನಾಂ ಚಂದ್ರಭಾಸಾಂ (ಶ್ಲೋಕ)

ಚಂದ್ರವದನಾಂ ಚಂದ್ರಭಾಸಾಂ।
ಚಂದ್ರಹಾರ ಸುಶೋಭಿತಾಂ।
ಚಂದ್ರಸೂರ್ಯಾಗ್ನಿ ನಯನಾಂ। ವಂದೇ
ಚಂದ್ರಪ್ರಭಾ ಸಮನ್ವಿತಾಂ॥

ಚಂದ್ರಿಕಾ ಧವಳ ವಸನಾಂ।
ಚಂದ್ರಶೀತಲ ವರ್ಷಿತಾಂ।
ಚಂದ್ರಚೂಡ ಸತೀಂ ಸದಾ ವಂದೇ।
ಚೌಡೇಶ್ವರೀ ದೇವತಾಂ॥

---

೯೧. ಕಾಶಿಯಿಂದಲಿ ನಡೆದುಬಂದ

ರಾಗ: ಸೂತ್ರಧಾರಿ **ತಾಳ: ಖಂಡಛಾಪು**

ಕಾಶಿಯಿಂದಲಿ ನಡೆದುಬಂದ ನಂದಾದೇವಿ।
ಘಾಸಿಗೊಂಡಿಹೆ ಏನೇ ಚೌಡೇಶ್ವರೀ ದೇವಿ।
ದೇಶದಾಚೆಯ ಜನರು ನಿನ್ನ ಪೂಜಿಸುತಿಹರು।
ವೇಷಭೂಷಣ ತಂದು ನಿನಗೊಪ್ಪಿಸುತಿಹರು॥ ೧

ನಂದರಾಜನ ಪುಣ್ಯ ನಮಗೆಂದು ಒದಗುವುದು।
ಸಂದಂಥ ಪಾಪಗಳ ತೊಳೆವ ದಿನ ಎಂದಿಹುದು।
ಕುಂದೆಣಿಸದೆ ಎನ್ನ ಮಂದಮತಿಯಲಿ ನಿಂದು।
ಚಂದದಾನಂದವನು ಕರುಣಿಸೇ ಎನಗಿಂದು॥ ೨

ಘಾಸಿಗೊಂಡಿಹ ನಿನ್ನ ಪಾದಕಿಂದು ಶ್ರೀಗಂಧ।
ಪೂಸಿ ತಂಪನು ನೀಡಿ ಉಪಚರಿಸಲಿವನಿಂದ।
ಮಾಸಿ ಹೋಯಿತೆ ನಿನ್ನ ಪೀತಾಂಬರದ ಅಂದ।
ಬೇಸರಿಸದಿರು ಕನಕವಸ್ತ್ರವ ತಂದವ ಬಂದ॥ ೩

೯೨. ನಿನ್ನ ನಾನೆಂತು ಉಪಚರಿಸಲೇ

ರಾಗ: ಕಲ್ಯಾಣವಸಂತ ತಾಳ: ಆದಿ

ನಿನ್ನ ನಾನೆಂತು ಉಪಚರಿಸಲೇ ತಾಯೆ।
ನಿನ್ನನಾದರಿಪ ಪರಿ ತಿಳಿಯೆನೆ ಮಾಯೇ॥ ॥ಪ॥

ತಳಿರು ತೋರಣ ಸಂಭ್ರಮ-ಶೃಂಗಾರ।
ಕಳಕಳಿಸುವ ಮಂದಾಸನದಾಗರ।
ಕುಳಿರ್ಗಾಳಿಯಿಂ ತಂಪು ಬೀಸುವ ಚಾಮರ।
ದಳದಳಿಸುವ ಮಂದಾರ ತರಲಾರೆ ಭವದೂರ॥ ೧

ಕಣ್ಣು ಕೋರೈಸುವ ದೀಪಾಲಂಕಾರವಿಲ್ಲ।
ಬಣ್ಣ ಬಣ್ಣದುಡುಗೊರೆ ವಸ್ತ್ರ ವೈಭವವಿಲ್ಲ।
ಹಣ್ಣು ಹೂವು ಭಕ್ಷ-ಭೋಜ್ಯ ಏನೊಂದೂ ಇಲ್ಲವಲ್ಲ।
ಸಣ್ಣದಾದ ಹಾಡೊಂದ ನಿನಗಾಗಿ ಹಾಡುವೆನಲ್ಲ॥ ೨

ನೀನಾಗೆ ಬಂದಾಗ ನಾ ಬೇಡವೆನಲಾರೆ।
ನಾನಾಗೆ ಕರೆದು ನಿನ್ನುಪಚರಿಸಲಾರೆ।
ನಾನು ನೀನು ಒಂದಾಗೇ ಬೇಕೆ ನಿನಗೀಕರೆ?
ಜಾಣೆ ಶೈಲಜಾನುತೆ ನಿನ್ನ ಭಕ್ತಿಯೊಂದೇ ಎನ್ನಾಸರೆ॥ ೩

---

೯೩. ಮಹಾಲಕ್ಷ್ಮಿಮಹಾಕಾಳಿ

ರಾಗ: ಪೂರ್ವಿಕಲ್ಯಾಣಿ ತಾಳ: ಖಂಡಛಾಪು

ಮಹಾಲಕ್ಷ್ಮಿ ಮಹಾಕಾಳಿ ಚೌಡೇಶ್ವರಿ ನಮ್ಮ ಚೌಡೇಶ್ವರೀ।
ಮಹದೇವ ಶಂಕರನ ಪ್ರಾಣೇಶ್ವರಿ॥

ಉದಯದೊಳು ನಮಿಸುತ್ತ ಅವಳ ಧ್ಯಾನದಿ ಚಿತ್ತ।
ಮುದಗೊಂಡು ಅನುದಿನದ ಕಾರ್ಯಮಾಡುವುದುಚಿತ।
ಪದುಮನಾಭನ ಚರಿತ ಪಾಡುತಲಿ ನಿರುತ।
ಹದವಾದ ಹೃದಯವಿರೆ ಬಾಳಿನಲಿ ಸತ್ಪಥ॥ ೧

ಆರು ಮೂರು ಗುಣದ ಲೋಕಗಳು ಹದಿನಾಲ್ಕು।
ದಾರಿ ತೋರುವ ವಿದ್ಯೆ ಅರವತ್ತುನಾಲ್ಕು।
ಮೇರೆ ಮೀರಿದ ಧೈರ್ಯದೊಳಗುಪಾಯವು ನಾಲ್ಕು।
ದೂರಿಬಂದವರ ನೀ ಮೇಲೆತ್ತಿದರೆ ಸಾಕು॥ ೨

ಜಾತಿ ರೀತಿಯ ನೀತಿ ಅದು ನಿನಗೆ ಸಲ್ಲ।
ಭೀತಿಗೊಂಡವರ ಭಯ ಕಳೆಯಬಲ್ಲ।
ಜ್ಯೋತಿ ನೀ ಶ್ರುತಿ ಶಾಸ್ತ್ರ ವೇದ ಬೇಕಿಲ್ಲ ವಿ-
ಖ್ಯಾತೆ ಜಗದಂಬೆ ನಿನ್ನ ಮಹಿಮೆ ಬಲ್ಲವರಿಲ್ಲ॥ ೩

ಏಳೇಳು ಜನ್ಮದೊಳು ನಿನ್ನ ನೆನಪಿರಲಮ್ಮ।
ಹಾಳಾದ ಜೀವಗಳ ನೀನು ಉದ್ಧರಿಸಮ್ಮ।
ಬೋಳಾದ ಬಾಳಿನಲಿ ನಿನ ಭಕ್ತಿ ಬೇಕಮ್ಮ।
ಹೋಳಾದ ಮನಗಳಿಗೆ ತಂಪು ನಿನ್ನ ನಾಮ॥ ೪

ತಾಯೆ ನಮ್ಮನು ಪೊರೆಯೆ ಹರಸಿ ಭವಮಾಯೆ।
ಕಾಯೆ ಶಿವಜಾಯೆ ಅತಿ ಸರಸಕಾಯೆ।
ಕಾಯಕವ ನಡೆಸಿ ಶ್ರೀ ಹರಿಯ ಕಾಣುವ ಸಿರಿಯೆ।
ಧ್ಯೇಯ ಎನಗಿರಲಮ್ಮ ಶೈಲಜಾನುತೆ ತಾಯೆ॥ ೫

ನಾನು ತಾನೆಂತೆಂಬ ಭೇದವದು ಬೇಡ।
ತಾನು ತನ್ನದೆಂಬ ಈ ಭವಪಾಶ ಬೇಡ।
ತಾನೇ ತನ್ಮಯತೆಯ ತರಿಸಿ ಎನ್ನಲಿಹಾಡ।
ಗಾನಿಸುತೆ ತೋರು ನಾ ನಿನ್ನ ಸೇರುವ ಜಾಡ॥ ೬

೯೪. ಆದಿಪರಾಶಕ್ತಿ

ರಾಗಃ ನವರೋಜ್ ತಾಳಃ ಚತುರಶ್ರನಡೆ

ಆದಿ ಪರಾಶಕ್ತಿ ಬಾರಮ್ಮ।
ನಿನ್ನನಾದರಿಸುವೆವು ನಾವಮ್ಮ।
ಭೇದವೆಣಿಸದೇ ಮೋದ ಪ್ರಮೋದದ।
ನಾದಲಹರಿಯ ಸವಿಯಮ್ಮ॥ ೧

ಪಂಚಾಮೃತದ ಅಭಿಷೇಕ ಈ।
ಕಂಚುಕ ಕುಂಕುಮ ಕಸ್ತೂರಿ ತಿಲಕ।
ವಂಚನೆ ಮಾಡದೆ ಪೂಜಿಸಿ ಚಂಪಕ।
ಪಂಚಾಕ್ಷರಿಯೆ ನಿನ್ನ ದರುಶನ ಸಾರ್ಥಕ॥ ೨

ಧೂಪ ದೀಪ ನೈವೇದ್ಯವ ನೀಡುತ।
ಪಾಪ ಹಾರಿಣೀ ನಮಿಪೆವು ನಿರುತ।
ಕೋಪಗೊಳ್ಳದೇ ನಗುನಗುತಲಿ ನಮ್ಮ।
ತಾಪಗಳನೆಲ್ಲ ನೀ ತೀರಿಸು ಸತತ॥ ೩

ಮಂಗಳಾರತಿಯ ಈ ಕೈಂಕರ್ಯ ಸು-
ಮಂಗಲಿಯರು ತಂದಿತ್ತ ಸುವೀಳ್ಯ।
ಅಂಗಜ ಜನಕನ ಸೋದರಿ ನಿನ್ನಯ।
ಮಂಗಳ ರೂಪವ ಕಂಡವ ಧನ್ಯ॥ ೪

ಮಂತ್ರಪುಷ್ಪವನು ಪಾದ ಪದ್ಮದಲಿ।
ಮಂತ್ರಘೋಷಗಳ ನಾದ ಮಧ್ಯದಲಿ।
ಮಂತ್ರಸ್ವರೂಪಿಣಿ ಬೇಡುತ ನಿನ್ನಲಿ।
ಮಂತ್ರಾಕ್ಷತೆಯಿಂ ಪೂಜಿಪೆ ಮುದದಲಿ॥ ೫

ವಜ್ರೇಶ್ವರಿ ನಿನ್ನ ನಾಮಸಹಸ್ರವು।
ವಜ್ರಕವಚವು ಪಠಿಸುತ ದಿನವು।
ವಜ್ರವೈಡೂರ್ಯವು ಬೇಕಿಲ್ಲವು ನಾವ್।
ವಜ್ರಮನ ಪಡೆದು ಬಾಳ ಬಾಳುವೆವು॥ ೬

ದುರ್ಗಿಯೆ ಚಂಡಿಯೆ ಚೌಡೇಶ್ವರಿಯೆ।
ಸ್ವರ್ಗಾಪವರ್ಗದ ಸುಖ ಸಾಧಕಿಯೆ।
ನಿರ್ಗುಣರೂಪದ ನಿರುಪಮ ಛಾಯೆ।
ದುರ್ಗಮ ನಿನ್ನನು ಅರಿಯುವ ಮಾಯೆ॥ ೭

ಏಕಾಕ್ಷರಿ ನಿನ್ನ ಏಕೈಕ ನಾಮವು।
ಶೋಕ ನಿವಾರಣ ಸುಖ ಸಾಧನವು।
ಲೋಕ ನಾಯಕಿಯೆ ಶೈಲಜಾನುತೆಯ।
ನೀ ಕರುಣೆಯಿಂದಲಿ ನಮ್ಮನು ಕಾಯೆ॥ ೮

---

೬೫. ಉತ್ಸವ ಉತ್ಸವ

ರಾಗಃ ದುರ್ಗಾ **ತಾಳಃ ತ್ರಿಶ್ರನಡೆ-ಆದಿ**

ಉತ್ಸವಾ ಉತ್ಸವಾ ಉತ್ಸವಾ।
ವಾರ್ಷಿಕೋತ್ಸವಾ ವೈಭವೋತ್ಸವಾ॥ ॥ಪ॥

ನಮ್ಮ ತಾಯಿ ಮಹಾಕಾಳಿ ಚೌಡೇಶ್ವರೀ ದೇವಿ।
ಹಮ್ಮಿನಿಂದ ನಡೆದು ಬರುವ ವೈಭವೋತ್ಸವ। ಈ ದೇವಿ ಉತ್ಸವ॥

ತಾಳ ಮೇಳ ಡೋಲು ಕೋಲು ಮೇಳದವರು ನುಡಿಸೆ ಕೊಳಲು।
ಜೋಲು ಮುಖಕೂ ಕಳೆಯ ಕೊಡುವ ದೇವಿ ಉತ್ಸವ
ಈ ವಾರ್ಷಿಕೋತ್ಸವ॥

ಸಾಲು ಸಾಲು ಸರಿಸುತ ಕೈ ಕಾಲು ಮೈಯ ಕುಲುಕಿ ಮೊಗದ।
ಮೇಲೆ ನಗೆಯ ಬುಗ್ಗೆ ತರುವ ದೇವಿ ಉತ್ಸವ ಈ ವೈಭವೋತ್ಸವ॥ ೧

ರಾಗಭಾವ ಭಕ್ತಿಯಲಿ ಸುರಾಗ ಶ್ರುತಿಯ ಸೇರಿಸುತ ಸ-
ರಾಗದಿಂದ ಪಾಡಿ ಕುಣಿವ ದೇವಿ ಉತ್ಸವ ಈ ವೈಭವೋತ್ಸವ॥
ಭೋಗಿಜನರ ವೈಭವವನು ಯೋಗದಿಂದ ಸ್ವೀಕರಿಸುತ।
ತ್ಯಾಗಯೋಗ ಭೋಗರಾಗ ಪಡೆದ ಉತ್ಸವ ಈ ದೇವಿ ಉತ್ಸವ॥ ೨

ಹೂವು ಮಾಲೆ ಹಣ್ಣುಕಾಯಿ ಬೇವು ಬೆಲ್ಲ ಹೊತ್ತ ಕೈಯ।
ತಾವು ಮುಂದು ನಾವು ಮುಂದು ಎನುವ ಉತ್ಸವ ಈ ದೇವಿ ಉತ್ಸವ॥
ಮಾವು ಹಲಸು ಕರ್ಜಿಕಾಯಿ ತಿಂದ ಮಕ್ಕಳ ಕೈಬಾಯಿ।
ನೋವು ಮರೆತು ಕಲೆತು ಕುಣಿವ ದೇವಿ ಉತ್ಸವ
ಈ ವೈಭವೋತ್ಸವ॥ ೩

ಕನಕಕುಂಡಲ ರತ್ನಾಭರಣ ದಿನಕರ ಸೋಮ ಸುಲೋಚನ।
ಹಣೆಯ ತಿಲಕ ಸೂಸುತಿದೆ ಶೀತಲಕಿರಣ ಈ ದೇವಿಯ ಸ್ಮರಣ॥
ತನನ ತಾನ ನುಡಿಸುತ ಜನ ತನ್ನತಾನ ಮರೆಸುತ ಮನ।
ಹನಿಹನಿಸುತ ಸಿಹಿಯಜೇನ ಅಮೃತಪಾನ ಈ ದೇವಿಗೆ ನಮನ॥ ೪

ಶೈಲಜೆ ಶಿವೆ ಶಂಕರಿ ಶ್ರೀ ಚೌಡೇಶ್ವರಿ ಪರಮೇಶ್ವರಿ।
ಕಲಕಲರವ ಹರಿಸುವ ಭಾವ ಲಹರಿ ಈ ದಿನದ ವೈಖರಿ
ಘಲು ಘಲು ಗೆಜ್ಜೆಯನಾದಕೆ ಕುಲುಕುತ ಬಾಗುತ ಮುಂದಕೆ।
ಶೈಲಜಾನುತೆ ಹರಸುವ ಈ ಮಂದಿರಕೆ ನೀ ಬಾ ಉತ್ಸವಕೆ॥ ೫

೯೬. ಗುಟ್ಟಿನ ವಿದ್ಯೆಯ ಬಲ್ಲಿರಾ

ತತ್ತ್ವದ ಧಾಟಿ

ಗುಟ್ಟಿನ ವಿದ್ಯೆಯ ಬಲ್ಲಿರಾ?
ಸೃಷ್ಟಿಯೊಳು ಚೌಡೀ ಎಂದರೆ ಅರ್ಥೈಸುವಿರಾ?

ಕಟ್ಟು ಹಾಕಿಸಿಕೊಂಡ ಕುಂಡಲಿನೀ ಶಕ್ತಿಯ।
ಮೆಟ್ಟಿಲುಗಳ ದಾಟಿ ಸ್ಫೋಟಿಸುವ ಧಾಟಿಯ।
ನಿಷ್ಠೆಯಲಿ ಕಲಿತು ಸಂತುಷ್ಟಿ ಪಡೆಯುವ ಗತಿಯ।
ಗುಟ್ಟಿನಲರುಹಿ ಭಾವಪಾಶವ ಕಳಚುವ ಯುಕ್ತಿಯ॥ ೧

ಕೆಟ್ಟ ಅಹಂಕಾರ ತನ್ನ ತನವ ತಿಂದಿದೆ ನೋಡಿ।
ಹುಟ್ಟಿನಿಂ ಭವ ಮಾಯೆ ಕಾಡಲು ಹಾಕಿದೆ ಮೋಡಿ।
ಸೊಟ್ಟಬುದ್ಧಿಯ ಸುಟ್ಟು ಅದ ನೆಟ್ಟಗೆ ತಾ ಮಾಡಿ।
ಘಟ್ಟಿಯಾಗಿ ಚೌಡಮಾತ ಎಂದರೆ ಬಿಡುವುದು ಓಡಿ॥ ೨

'ಚೌಡ' ಎಂಬುದು ಆತ್ಮವಿದ್ಯೆಯ ಹೆಸರು।
'ಚೌಡೀ' ಎಂದ್ ಕುಂಡಲಿನೀ ಗುಟ್ಟೊಡೆಯುವ ಹಸಿರು।
'ಚೌಡ'ವಾದ್ಯ ವಾಣಿ ಹಿಡಿದ ರುದ್ರವೀಣೆ ಹೆಸರು।
ಚೌಡತನವೆಂಬೋದು ಅಹಂಕಾರದ ಉಸಿರು॥ ೩

ಚೌಡಾಸುರನೆಂದೊಬ್ಬನ ನಾಮಧೇಯ, ಅವನ।
ಚೌಡತನವ ತಡೆಯುವುದೇ ದೇವೇಂದ್ರನ ಧ್ಯೇಯ।
ಚೌಡೇಶ್ವರಿ ಧರಿಸಿದ ಚೂಡಾಮಣಿ ಪ್ರಭೆಯ (ಅದ)।
ನೋಡಿ ಭಸ್ಮವಾದ ತನಗೆ ತಾನೇ ಎಂಥಾ ಮಾಯ!॥ ೪

ಚೌಡತನ ಕಳೆವ ದೇವಿ ನಮ್ಮ ಚೌಡೇಶ್ವರಿ।
ಚೌಡವಾದ್ಯ ನುಡಿಸುವವಳೇ ನಮ್ಮ ಚೌಡೇಶ್ವರಿ।
ಚೌಡ ವಿದ್ಯೆಯೇ ಆತ್ಮ ಸಾಕ್ಷಾತ್ಕಾರಕೆ ದಾರಿ।
ಚೌಡಮಾತೆ ಸಲಹು ಎಂದು ಶರಣಾಗತರಾಗಿರಿ॥ ೫

ಚೌಡೇಶ್ವರಿ ಈ ಮನೆಯಲಿ ಮನದಲಿ ತುಂಬಿರಲಿ।
ಚೌಡಮಾತರಂ ವಂದೇ ಎಂದೆಲ್ಲರೂ ನುಡಿಯಲಿ।
ಚೌಡಾಂಬ ಈ ಲಲನೆ ಶೈಲಜೆಯ ನಾಲಿಗೆಯಲಿ।
ಎಡಬಿಡದೆ ಮೃಡಸತಿ ಈ ಶೈಲಜಾನುತೆ ಎನಿಸಲಿ॥ ೬

---

೯೭. ತಿಂಗಳೊಪ್ಪತ್ತು ಪೂಜೆಗೆ

ರಾಗ: ಯಮನ್

ತಿಂಗಳೊಪ್ಪತ್ತು ಪೂಜೆಗೆ ನಾ ಬಂದೆನೆ।
ತಂಗಳು ತಿಂದರೂ ಎನ್ನಂಗಳ ತುಂಬಿಸುವೆ ಏನೆ॥ ॥ಪ॥

ಅಂಗ ಭೋಗೋಪಚಾರ ಷೋಡಷೋಪಚಾರ।
ಕಂಗೊಳಿಸುವ ವಜ್ರ ವೈಡೂರ್ಯ ಬಂಗಾರ।
ಅಂಗನೆ ನಾ ತರಲಾರೆ ಅಂದದ ಪೀತಾಂಬರ।
ಮಂಗಳಾಂಗಿ ಒಪ್ಪಿಸಿಕೋ ಈ ಸಿಂದೂರ॥ ೧

ಅಣುರೇಣು ತೃಣಕಾಷ್ಟ ಹಣ ಋಣವಿರದಿರಲಿ।
ಕಣಕಣ ರಕ್ತವು ನಿನ್ನನ್ನೇ ಸ್ತುತಿಸಲಿ।
ಕ್ಷಣಕ್ಷಣವೆನ್ನಮನ ನಿನ್ನ ಧ್ಯಾನದಲಿರಲಿ।
ಮಿನು ಮಿನುಗುತ ಎನ್ನಾತ್ಮ ನಿನ್ನ ಸೇರಲಿ॥ ೨

ಹರಿಸೋದರಿ ಹರಿದ್ರಾಕುಂಕುಮಾಂಕಿತೆ।
ಹರಿಹರ ಸುರ ಸಂಸೇವಿತೆ ಮಾತೆ ವಿಖ್ಯಾತೆ।
ಹರಸತಿ ಪರಶಿವೆ ಪರತರ ವಿನುತೇ।
ಹರುಷದಿ ಹರಸಿ ಕಳುಹೆನ್ನ ಶೈಲಜಾನುತೆ॥ ೩

---

೯೮. ಕೊಟ್ಟ ವರವ ಕಿತ್ತುಕೊಳ್ಳುವುದು

ಜನಪದ ಧಾಟಿ

ಕೊಟ್ಟ ವರವ ಕಿತ್ತುಕೊಳ್ಳುವುದು ಸರಿಯೇನು।
ತಾಯೆ ವರವ ಕಿತ್ತುಕೊಳ್ಳುವುದು ಸರಿಯೇನು।
ಗುಟ್ಟೇನು ರಟ್ಟೇನು ನೀನಿಟ್ಟ ಶಾಪವೇನು?॥ ॥ಪ॥

ಅಂದು ನೀನಾಡಿದ ಮಾತೊಂದೊಂದೂ ನೆನಪಿಸಲೇನು?।
ಕುಂದೆಣಿಸದೆ ನಡೆಸು ನಿನ್ನ ವಾಗ್ದಾನವನು।
ಎಂದೆಂದೂ ಕೈ ಬಿಡಬೇಡ ತಾಯಮ್ಮ ನೀನು।
ಮಂದಮತಿ ನಿನ್ನ ನಂಬಿ ಬಂದಿಹೆ ನಾನು॥ ೧

ಇಂತು ನೀ ತೋರಿಸೆ ಕೋಪ, ನಿನ್ನ ಭಕ್ತರ ತಾಪ।
ಚಿಂತೆ ತೀರಿಸಿ ಸ್ವಾಂತನ ನೀಡುವರಿಲ್ಲವೆ ಪಾಪ।
ಶಾಂತಳಾಗೇ ತಾಯೆ ಕೊಡದಿರು ಶಾಪ।
ಹಂತಹಂತಕೂ ನೀನೇ ನಮ್ಮ ದಾರಿದೀಪ॥ ೨

ಮಕ್ಕಳು ಮರಿ ಹೆದರುವರಮ್ಮ ಚಿಕ್ಕಮ್ಮ ಒದರುವಳಮ್ಮ।
ಅಕ್ಕ ಪಕ್ಕ ನೋಡಿ ನಗೆಗೀಡು ಮಾಡುವರಮ್ಮ।
ಎಕ್ಕಡದ ಸೇವೆ ನಾ ತಾಳೆನಮ್ಮ।
ಚಿಕ್ಕ ತಪ್ಪೊಂದಾಯಿತೇ ತಾಯೆ ಕ್ಷಮಿಸಮ್ಮ॥ ೩

ಹಟವ ಮೊಂಡಾಟವ (ನಾ) ಮಾಡೆನು ನಿನ್ನನೊಲಿಸಲು।
ಕಟು ಸಂಸಾರಕೀ ಜುಟ್ಟು ನೀ ಕಟ್ಟಿರಲು।
ವಟವಟವೆಂದರೂ ನಿನ್ನ ಹೆಸರೇ ಪಟ್ಟಾಗಿರಲಿ।
ಕಟುಸತ್ಯವಿದು ತಾಯಮ್ಮನೇ ಕೇಳು।
ನಟನೆ ಇದಲ್ಲವೇ ಬೇಡ ನೀನಿಲ್ಲದ ಬಾಳು॥ ೪

ಹಲುಬುವುದೆನ್ನ ಪರಿ ಇಂತಿರಲು ಒಲುಮೆಯ ನೀ
ತೋರಲಾರೆ ಏನು?
ಕಲಕಿಹೆ ನೀ ಮನದ ಪ್ರಶಾಂತತೆಯನು ಎನ್ನ।
ಕಲಕಲರವದ ಗಾನ ನೀನೊಲ್ಲೆ ಏನು?
ಶೈಲಜಾನುತೆ ಎಂಬ ಬಿರುದು ಸಾಕೇನು?॥ ೫

೯೯. ಹುಸಿಯಾಯಿತೆ ತಾಯೆ

ರಾಗ: ಹಿಂದೂಸ್ತಾನಿ ತೋಡಿ

ಹುಸಿಯಾಯಿತೇ ತಾಯೆ ನಿನ್ನ ಪ್ರೀತಿ।
ಹಸಿಯಾಯಿತೇ ಈ ಎನ್ನಯ ಭಕ್ತಿ॥ ॥ಪ॥

ಹಸನಾದ ಬಾಳಿನಲಿ ಬುಸುಬುಸು ಬಂದೋ।
ಬಿಸುಜಾಕ್ಷಿ ಹರಿಸೋದರಿ ನೀನೆಂದುಸುರಿದೆ।
ಹಸುಗೂಸನಾದರಿಸುವ ವೋಲ್ ಎನ್ನನೋಲೈಸಿದೆ।
ಹುಸಿಮುನಿಸು ತೋರುತಲೀಗ ಹೊಸ ಪರಿಯಲಿನಿಂದೆ॥ ೧

ಹಗಲಿರುಳು ನಿನ್ನ ಧ್ಯಾನದೆ ನಾ ಮರುಳಾದೆ।
ಮಿಗಿಲಾದ ಕಾರ್ಯವಿದೆಂದು ನಾನೆಣಿಸಿದೆ।
ಹಗೆ ಏನೆ ಎನ್ನ ಮೇಲೆ ನಾನರಿಯದಾದೆ।
ಮುಗಿಲು ಮುಟ್ಟಿಹುದೇ ಎನ್ನ ಗೋಳು ನೀನಿಲ್ಲದೇ॥ ೨

ಬಿಡುಬಿಡು ನಿನ್ನೀ ಹುಸಿಮುನಿಸು।
ಕೊಡುಕೊಡು ನಿನ್ನ ಭಕ್ತಿಯ ತಿನಿಸು।
ಇಡು ಇಡು ನಿನ್ನ ನಾಮಸ್ಮರಣೆಯ ಸೊಗಸು।
ಎಡಬಿಡದೆ ಶೈಲಜಾನುತೆ ಒಲಿದೆನ್ನ ಸಂತೈಸು ೩

---

೧೦೦. ಭಜನೆಯ ಮಾಡಬನ್ನಿರೋ

ರಾಗ: ಮಿಶ್ರಕಾಪಿ ತಾಳ: ಆದಿ

ಭಜನೆಯ ಮಾಡ ಬನ್ನಿರೋ।
ಭಜನೆಯ ಮಾಡ ಬನ್ನಿ ದೇವಿ ತ್ರಿಜಗನ್ಮಾತೆಯ।
ಅಜಭವ ಶಿವಶಕ್ತಿ ಶ್ರೀ ಚೌಡೇಶ್ವರಿಯ॥ ॥ಪ॥

ಭಜನೆಯ ಮಾಡುತ ಸುಜನರ ಕೂಡುತ।
ನಿಜ ತತ್ತ್ವವರಿತು ಸಹಜ ಭಕ್ತಿರಸ ಕುಡಿಯುತ॥ ॥ಅ. ಪ.॥

ತಾಮಸ ಗುಣಗಳ ಸುಮ್ಮನಿರಿಸಿ।
ಸಾಮಗಾನದಿಂ ಶ್ಯಾಮನನು ಸ್ತುತಿಸಿ।
ಸೋಮಶೇಖರಸತಿ ಕಾಮಿನಿಯ ಕರೆಸಿ।
ನೇಮದಲಿ ಪಂಚೋಪಚಾರವ ಸಲಿಸಿ॥ ೧

ಷೋಡಶೋಪಚಾರ ಪೂಜೆಯ ತಾ ಕೇಳಳು।
ನೋಡುನೋಡುತಲೆ ನಮ್ಮೊಡನಿರುವಳು।
ಕಾಡುವ ಕಷ್ಟ ನಿಷ್ಠುರವನು ದೂಡುವಳು।
ಬೇಡಿದ ವರವೀವ ಚೌಡೇಶ್ವರಿ ಇವಳು॥ ೨

ದೀನ ಪರಾಧೀನರ ಪೊರೆಯುವ ತಾಯಿ।
ಜ್ಞಾನಾತುರರಿಗೆ ಜ್ಞಾನರೂಪಿ ಚಿನ್ಮಯಿ।
ಮಾನಿನಿಯರ ಕಣ್ಣೊರೆಸುವ ಕರುಣಾಮಯಿ।
ತಾನೆಂದೆನಿಪ ಚೌಡೇಶ್ವರಿ ನಿರಾಮಯಿ॥ ೩

ಬಾಲೆ ಶೈಲಜೆ ತನ್ನ ಮಗಳೆಂದೆನುವಳು।
ಕಾಲಕಾಲಕು ತನ್ನ ಉಡಿಯಲಿಟ್ಟು ಸಲಹುವಳು।
ಲೋಲಲೋಚನೆ ಶೈಲಜಾನುತೆ ತಾನಿಹಳು।
ಜ್ವಾಲಾಮಾಲಿನಿ ಆದಿಪರಾಶಕ್ತಿಯೇ ಇವಳು॥ ೪

---

೧೦೧. ಏನೆ ತಾಯೆ ಚೌಡೇಶ್ವರಿಯೇ

ರಾಗ: ಸಾರಂಗ ತಾಳ: ಆದಿ

ಏನೇ ತಾಯೆ ಚೌಡೇಶ್ವರಿಯೆ ಎನ್ನ ಮರೆತೆಯೇನೆ?
ಜಾಣೆ ನಿನ್ನ ಕರುಣೆ ನಾ ಕಾಣೆ ಕ್ಯಾಣಬೇಡ ಎನ್ನ ಮೇಲೆ ಶ್ಯಾನೆ।
ಕಾಣೆ ನಿನ್ನ ಕರುಣೆ ಜಾಣೆ ಕ್ಯಾಣಬೇಡ ಎನ್ನ ಮೇಲಾಣೆ॥

ನೀನೆ ಎನ್ನ ಮೇಲಾಕ್ರಮಿಸಿ ನುಡಿಸಿ ನಲಿಸಿ ನಗಿಸಿ। ಈಗ
ಸೋನೆ ಮಳೆಯ ಮುಜುಗರದೊಳು ದೊಡ್ಡ-
ಬೇನೆ ಬೇರೆ ಬಂದಂತೆ ನಿಲಿಸಿ॥ ೧

ತಿನಿಸು ತಿಂದ ಸಿಹಿಯು ಇರಲು ತಿಲವ।
ತಿನಿಸಿ ಬಾಯಿ ಒಗರು ಹತ್ತಿ ಜಲವ।
ಹನಿಸಿ ನಾಲ್ಗೇಯ ಒಳಗೆ ನೂಕುವ।
ಕನಸು ಕಂಡು ಉಂಡೇನೇ ಈ ನೋವ॥ ೨

ನೋಡು ನೋಡು ಎನ್ನನು ನೀಡು ನೀಡು ತಿಳಿವನು।
ನಾಡು ಬೀಡಲ್ಲದೆ ಹೊರನಾಡ ಕಾಡುಮೇಡು ಅಲೆಯುತ ನಿನ್ನ॥

ಜಾಡು ತಿಳಿದು ಬಂದು ಸೇರುತ ಎನ್ನೊಡ-
ನಾಡು ಕೂಡು ಹಾಡು ಹೋರಾಡು, ಹಾ-
ರಾಡು ಎಂದೊದರಾಡುತ ಎನ್ನ ಈ।
ಪಾಡು ನೋಡಿ ಓಡೋಡಿ ಬಂದು ನಗೆ-
ಗೀಡು ಮಾಡದೇ ಕಾಪಾಡು ಈ।
ಒಡಲ ಜೀವ ತನ್ನ ಗೂಡಿನಿಂ ನಿನ್ನ।
ಮಡಿಲಸೇರಿ ಹಾಡಿ ಕೊಂಡಾಡಿ ನಲಿ।
ದಾಡಿಸುವುದ ನೀ ಮರೆತೆಯೇನೇ॥ ೩

ಸಾರಂಗ ಸುಂದರ ಮೃಗನಯನೇ।
ಶ್ರೀರಂಗ ಸೋದರಿ ಶಶಿವದನೆ ಸು-
ರಾರಂಗು ರಾಗದೀ ಪದಪುಂಜ-
ದಾರಂಗು ರಂಗಲೆನ್ನಂತರಂಗ-
ದಾರಂಗಭೂಮಿ ನಿನ್ನ ನಾಟ್ಯ-
ದಾರಂಗ ಭಂಗಿ ಕಂಡಾನಂದ-
ದಾರಂಗೇರಿ ಕುಣಿದು ನಲಿವನೇ।
ಹೇರಂಭ ಜನನಿ ಶೈಲಜಾನುತೆ॥ ೪

೧೦೨. ನಿನ್ನ ಮಾಯೆಯ ನಾನೆಂತರಿಯಲಮ್ಮ

ರಾಗಮಾಲಿಕೆ **ತಾಳ: ತ್ರಿಶ್ರನಡೆ ಆದಿ**

ಆನಂದಭೈರವಿ

ನಿನ್ನ ಮಾಯೆಯ ನಾನೆಂತರಿಯಲಮ್ಮ।
ಸನ್ನುತಾಂಗ ಶ್ರೀ ಹರಿಯ ಕಾದುಕುಳಿತೇನಮ್ಮ॥ ॥ಪ॥

ಹುಟ್ಟಿನಿಂ ನೀನಿಟ್ಟೆ ಅಧ್ಯಾತ್ಮ ಸಂಸ್ಕಾರ।
ಹೊಟ್ಟೆ ಪಾಡಿಗೆ ಕಟ್ಟಿದೆ ಮನಬರದ ವ್ಯವಹಾರ।
ಕೆಟ್ಟ ಜೀವನಕಿಟ್ಟೆ ಸುಖ ದುಃಖ ಸಂಸಾರ।
ಇಷ್ಟು ಭರಿಸುವ ತನುಮನ ಗಟ್ಟಿ ಇಲ್ಲ ತಾಳೆನೇ ಭಾರ॥ ೧

ಭೌಳಿ

ಇತ್ತ ಬಾರೆಂದೆನುವ ಈ ಇಹ ಜೀವನ।
ಅತ್ತ ಬಾರೆಂದನುವ ಪರಮಾರ್ಥ ಭಾವನ।
ಎತ್ತ ನೋಡಿದರತ್ತ ನಿನ್ನಾಟವೇ ಅನುದಿನ।
ಸುತ್ತಿಹ ಈ ಮಾಯೆ ಕಳೆವ ನಿನ್ನ ನಾಮವೇ ಪಾವನ॥ ೨

ಬೃಂದಾವನ ಸಾರಂಗ

ಅನ್ನಪೂರ್ಣಾದೇವಿ ಚೌಡೇಶ್ವರೀ ಮಾತೇ।
ಮನ್ನಿಸೆನ್ನಪರಾಧ ದುರ್ಗಾಮಾತೇ।
ಹೊನ್ನು ಮಣ್ಣಿನ ಆಸೆ ನಮಗಿಲ್ಲ ಶ್ರೀಮಾತೆ।
ಸನ್ನುತೆ ಶೈಲಜಾನುತೆ ನಮ್ಮಾಶ್ರಯದಾತೆ॥ ೩

೧೦೩. ಚಂದನ ಲೇಪಿತ ಸುಕಾಯೆ ಮಾಯೆ

ರಾಗಃ ಸಿಂಧು ಭೈರವಿ ತಾಳಃ ಆದಿ

ಚಂದನ ಲೇಪಿತ ಸುಕಾಯೆ ಮಾಯೆ।
ವಂದಿಪೆ ನಿನಗೆ ಚೌಡೇಶ್ವರಿ ತಾಯೆ॥ ॥ಪ॥

ಅಂದಂದು ನಾಗೈದ ಪಾಪವ ಪರಿಹರಿಸು।
ಮುಂದೆ ನಾನೆಂದೆಂದೂ ಎಡವದಂತಿರಿಸು।
ಚಂದದಾನಂದವ ಈ ಜೀವನದಲಿರಿಸು ಗೋ-
ವಿಂದನಲಿ ಸದಾ ಸದ್ಭಕ್ತಿ ಇರಿಸು॥ ೧

ಸುಂದರೇಶ್ವರನ ಸತಿ ಹೇ ಪಾರ್ವತಿ
ಬಂದಿಹ ಭಕ್ತರ ಸಲಹು ನೀಡಿ ಸನ್ಮತಿ।
ಕುಂದೆಣಿಸದಿರು ನಾ ಬೇಡುವೆ ನಿನ್ನ ಪ್ರೀತಿ।
ಸಿಂಧು ಭೈರವಿ ಶೈಲಜಾನುತೆ ಎನಗೆ ನೀನೇ ಗತಿ॥ ೨

---

೧೦೪. ಆದಿಶಕ್ತಿ ಅಖಿಲಾಂಡ ಕೋಟಿ

ರಾಗಃ ಬಿಲಹರಿ (ಭಜನೆ) ತಾಳಃ ಆದಿ

ಆದಿಶಕ್ತಿ ಅಖಿಲಾಂಡಕೋಟಿ ಬ್ರಹ್ಮಾಂಡಶಕ್ತಿ ಶಿವಶಕ್ತಿ।
ಆದರದಲಿ ಚಿತ್‌ಶಕ್ತಿ ಮಹಿಮೆಯ ಅರಿತವಗೇ ಸನ್ಮುಕ್ತಿ॥

ಓಂ ಶಕ್ತಿ ಶ್ರೀ ಚೌಡೇಶ್ವರಿಯ ಪಾದ ಭಜನೆ ಮಾಡು।
ಓಂ ಶಕ್ತಿ ಶ್ರೀ ಚೌಡೇಶ್ವರಿಯ ಧ್ಯಾನದಲಿ ದಿನವ ದೂಡು॥

ಚಂಡ ಮುಂಡ ಮಹಿಷಾಸುರಮರ್ದಿನಿ ಚಾಮುಂಡೇಶ್ವರಿಯೆ।
ಚಂಡಿಯೆ ಚೌಡೇಶ್ವರಿ ತಾಯೆ ನಮ್ಮ
ಚಂಡಿತನವ ಕಳೆಯುತ ನೀ ಪೊರೆಯೆ॥ ೧

ಈಶ ಜಗದೀಶ ಮಹೇಶ್ವರ ಸನ್ನುತೆ ಶ್ರೀ ಲಲಿತೆ॥
ದೋಷರಹಿತ ಭಕ್ತಿಗೇಯಪ್ರೀತೆ ವಿ-
ನಾಶಕರ ಭವಪಾಶ ವಿಧಾರಿತೆ॥ ೨

ನಂದ ರಾಜನಿಂದಾದ ತೊಂದರೆಯ ಪರಿಹರಿಸಲು ಬಂದ ತಾಯೆ।
ನಂದವರದಲ್ಲಿ ನೆಲಸಿದ ದೇವಿ ಆ-
ನಂದದಾಯಕಿಯೆ ಚೌಡೇಶ್ವರಿಯೆ॥ ೩

ವೈದಿಕ ಬ್ರಾಹ್ಮಣರ ಮೊರೆಲಾಲಿಸಿ ಕಾಶಿಯಿಂದ ಚಿತ್ತೈಸಿ।
ನಂದವೈದಿಕರ ಸತಿ ಕುಲದೇವಿ ಶ್ರೀ ಚೌಡೇಶ್ವರಿ ತಾನೆಂದೆನಿಸಿ॥ ೪

ಭಕ್ತಶಿರೋಮಣಿ ದಶವಂತರಾಯನ ಹೆಸರ ಉಳಿಸಲೆಂದು।
ಭಕ್ತರ ಕೋರಿಕೆಗಳ ಪೂರೈಸುತ ದಸರಿ ಘಟ್ಟದಲಿ ತಾನಿಂದು॥ ೫

ಅತ್ತ ಇತ್ತ ಹತ್ತಾರು ಕಡೆಯಲಿ ಶಕ್ತಿ ದೇವಿ ಚೌಡೇಶ್ವರಿ ನೆಲಸಲಿ
ಎತ್ತೆತ್ತಲೋ ಓಡಾಡುವ ಭಕ್ತ ರೀಶಕ್ತಿಯ ಕೊಂಡಾಡುತ ಪಾಡಲಿ॥ ೬

ಗ್ರಾಮ ದೇವತೆಯೋ ತಾಮಸಶಕ್ತಿಯೋ ಭಾವಿಸಿದಂತಿಹಳು ಅವಳು।
ಕಾಮಿತ ಫಲದಾಯಕಿ ಸೌಮ್ಯನಾಯಕಿ
ಕಾಮರೂಪಳೂ ನಿರಾಕಾರಳೂ॥ ೭

ದಾಸ ದಾಸ ಹರಿದಾಸರೆಲ್ಲರೂ ವಾಸುಕಿ ಶಯನನ ಕೊಂಡಾಡಿದರು
ವಾಸುದೇವ ಸಹಜಾತೆ ಶ್ರೀಮಾತೆ ಈ
ಶೈಲಜಾನುತೆಯ ಕಂಡರಿಯರವರು॥ ೮

---

೧೦೫. ಅಮ್ಮ ನಿನ್ನ ನಾನು ಉಪಚರಿಸದಾದೆನು

ರಾಗ: ಹಿಂದೂಸ್ತಾನಿ ಕಾಪಿ ತಾಳ: ಖಂಡಛಾಪು

ಅಮ್ಮಾ ನಿನ್ನ ನಾನು (ಉ)ಪಚರಿಸದಾದೆನೆ
ಸುಮ್ಮನೆ ಬಂದ ನಿನ್ನ ಗುಮ್ಮನೆಂದ್ಹೆದರಿದೆನೆ॥ ॥ಪ॥

ಒಮ್ಮೆ ನೀ ಬಂದರಾಯಿತೇ! ಪೇಳಮ್ಮಯ್ಯ-
ಎಮ್ಮೆಯು ನಾ ಬುದ್ಧಿ ಕಮ್ಮಿ ಎಂದು ಕ್ಷಮಿಸೆ॥ ॥ಅ. ಪ.॥

ಪಶು ಪಕ್ಷಿ ಪ್ರಾಣಿಯಂದದಿ ನೀ ಬಂದಾಗ
ಅಶನ ನೀಡುವುದ ಮರೆತೆನೆ ಬೇಗ-
ನಿಶಿಹಗಲು ನಿನ್ನ ನೆನೆದು ಪಾಡುವ ರಾಗ
ದಿಶಿಗೆಟ್ಟು ತೊದಲುವುದು ನಿನ್ನ ನಾ ಕಂಡಾಗ॥ ೧

ಬರುವುದೇನು ನೀ ಬಾರದಿರುವುದೇನು?
ಇರುವುದೇ ಎನ್ನಲ್ಲಿ ನೀನಲ್ಲವೇನು?
ಹರಿ ಸೋದರಿ ಈ ಶೈಲಜಾನುತೆ ನೀನು
ಹರಿ-ಹರರಲ್ಲಿ ನೀನು ನಿನ್ನಲ್ಲಿ ನಾನು ॥ ೨

---

೧೦೬. ಅಮ್ಮಾ ತಾಯೆ ಚೌಡಮ್ಮ

ರಾಗ: ಸಿಂಧುಭೈರವಿ ತಾಳ: ಏಕ

ಅಮ್ಮ ತಾಯೆ ಚೌಡಮ್ಮ ಎಮ್ಮ ಕಥೆ ಕೇಳಮ್ಮ
ಸುಮ್ಮನೆ ಕೂತರಾಯಿತೇ ಪೇಳಮ್ಮ
ಉಮ್ಮಳಿಸಿ ಉಕ್ಕರಿಸಿ ಕಾರುತಿದೇ ನೋಡಮ್ಮ॥

ನೀ ಬದಿಯಲಿರುವೆ ಎಂದು ನಾ ಹೋದ ಈ ದಾರಿ
ಡಾಬು ಸೊಂಟಕಿಲ್ಲವೆಂದು ಹಗ್ಗ ಸುತ್ತಿದರದು ಗೀರಿ
ಈ ಬವಣೆ ತಂದಿದೇ ಬರೀ ಉರಿ ॥ ೧

ಈ ಉರಿಯು ಅಡಗುವ ರೀತಿ
ಅರುಹಿತೋರು ನೀ ಪ್ರೀತಿ
ನೀ ಉಜ್ಜೀವನ ಗೊಳಿಸುವ ನೀತಿ
ಈ ಉತ್ಸಾಹಕೆ ಉತ್ತಮ ಜ್ಯೋತಿ
ನಾ ಉತ್ಕಂಠದೊಳು ಪಾಡುತಿರೆ ಶಾಂತಿ ॥ ೨

ಅಲ್ಲಿ ಇಲ್ಲಿ ನಡೆಸುತ ನೀನು
ಮೆಲ್ಲಗೆ ಮರೆಯಾಗುವೆ ಏನು?
ಸೊಲ್ಲಡಗಿ ಕೂರುವೆ ನಾನು, ಅದನೀ ಬಲ್ಲೆ ಏನು?
ಜೊಲ್ಲೊರಸಿ ಎನ್ನನೆತ್ತಿಕೋ ತಾಯಮ್ಮ ನೀನು ॥ ೩

ಹತ್ತು ಜನರು ತಮ್ಮ ದುಃಖ
ಹೊತ್ತು ತಂದಂಥ ಮುಖ
ಕತ್ತು ಎತ್ತಲಾಗದ ತವಕ
ಇತ್ತಿದೆ ಬಾಳಿಗಾತಂಕ
ಒತ್ತಾಸೆ ನಿನ್ನ ಮಡಿಲು
ಬತ್ತದಾ ತಾಯ ಸುಖ ॥ ೪

ನಂಬಿ ನಿನ್ನ ಪಾದಕೆ ಬಿದ್ದ
ಅಂಬಿಗನು ಯಾರೇ ಇರಲಿ
ಕಂಬಿಕೀಳದಂತೆ ಕಾಯ್ದ ಅಂಬಿಕೆ ದೇವಿ ನೀನೇ ಎನಲಿ
ತುಂಬಿಕೊಡಲಿ ನಿನಗವ ಉಂಬಳಿ ॥ ೫

ಅಂಥ ಇಂಥ ಹಾಡಲ್ಲ (ಈ)
ಶೈಲಜೆ ನುಡಿಯುವುದೆಲ್ಲ
ಸ್ವಂತಿಕೆಯ ಮನದನುಭವದ
ಮಂಥನದ ಸಾರವೇ ಎಲ್ಲ
ಎಂತಿಹುದೇ ಶೈಲಜಾನುತಾ ನಿನಗಿದೆಲ್ಲಾ ॥ ೬

---

೧೦೭. ಏಳು ತಾಯೆ ಚೌಡಮ್ಮ

ರಾಗ: ಅಠಾಣ ತಾಳ: ಆದಿ
ಗ್ರಾಮದೇವತೆಗಳ ಹಳ್ಳಿ ಪದಗಳ ಧಾಟಿ

ಏಳು ತಾಯೆ ಚೌ...ಡ...ಮ್ಮ...ಬೆಳಗಾಯಿತು
ಕೇಳು ನಿನ್ ಹೆಸರ ಈ ....ಹಕ್ಕಿಯುಲಿಯಿತು ॥

ನಿನ್ಹೆಸರ ತಪ್ಪದೇ ನಿತ್ಯ ಉಲಿಯುವ।
ಕಣ್ ಕಿವಿಗಳಿಗೆ ತಂಪನೆರೆದು ಮನವೊಲಿಸುವ।
ಹಣ್ ಕಾಯಿಹೊತ್ತು ತಂದ ಜನರು ನಿಂತಾಲಿಸುವ।
ಬಣ್ ಬಣ್ದ ಹಕ್ಕಿಯ ಈ ಮಧುರ ಕಲರವ ॥ ೧

ನಿನ್ನ ಗುಡಿಯ ಮುಂದಿರುವ ಮಾವು ಬೇವು ಮರವು।
ಬಣ್ಣ ಬಣ್ಣದ ಚಂದದ ಈ ಹಕ್ಕಿಯ ತಾಣವು।
ನಿನ್ನನ್ನೆಬ್ಬಿಸುವ ಇಂಥಾ ಹಕ್ಕಿ ಇಂಚರವು।
ಎನ್ನೆದೆಯ ವೀಣೆ ಮಿಡಿದ ನಾದ ಝೇಂಕಾರವು॥ ೨

ಕಂತೆ ಕಂತೆ ಹಣಕ್ಕೋ ಮಾಲಲ್ಲಯ್ಯ।
ಇಂತುಲಿವ ಈ ಹಕ್ಕಿ ಕಂಠಮಾಧುರ್ಯ।
ನಿಂತು ನೋಡುವಂಥ ಆದರ ಪಂಚವರ್ಣಸೌಂದರ್ಯ।
ಕಂತುಪಿತನೊಲಿದಾಗಷ್ಟೇ ದೊರಕುವ ಸೌಭಾಗ್ಯ॥ ೩

ಆ ಭಾಗ್ಯ ಪಡೆದ ಇಂಥ ಹಕ್ಕಿಯ ನಾ ನೋಡಿ।
ಈ ಭಾವ ಭಕ್ತಿಯ ಆದರಲಿ ಕಂಡಂಥ ಮೋಡಿ।
ನಾ ಭಾರಿ ಭಕ್ತಳೆಂಬ ಭ್ರಮೆಯು ತಾ ನೋಡಿ।
ಆ ಭಾರಿಯಾದೇ ನೇ ನಿನ್ನ ಕೊಂಡಾಡಿ॥ ೪

ನಾಳೆ ಎಲ್ಲೋ ಏನೋ ಎಂಬ ಚಿಂತೆ ಇರದ ಹಕ್ಕಿ।
ಬಾಳೆಲ್ಲ-ನಿನ್ನ ಮುಂದೆಯೇ ನುಡಿದು ದೂಡಿದ ಹಕ್ಕಿ
ಗೋಳಿಲ್ಲ ನೋವಿಲ್ಲ ನಿನ್ನ ನೆರಳಲಿರುವ ಚುಕ್ಕಿ
ಹೇಳೆಂಥ ಪುಣ್ಯ ಪಡೆದು ವರನಮೀರಿಸಿತು ಹಕ್ಕಿ॥ ೫

---

೧೦೪. ಭಜಿಸುವೆ ನಾ ನಿನ್ನ

ರಾಗಮಾಲಿಕೆ

ರಾಗ: ಸ್ವರಸಂಮೋದಿನಿ ತಾಳ: ಆದಿ

ಭಜಿಸುವೆ ನಾ ನಿನ್ನ ಶ್ರೀ ಚೌಡೇಶ್ವರೀ।
ಅಜಭವ ವಂದಿತೆ ಅಖಿಲಾಂಡೇಶ್ವರಿ॥
ನಿಜವದು ನಿನ್ನ ನಾ ನಂಬಿದೆ ಭವಾನಿ।
ಸುಜನ ಸಂಸೇವಿತೆ ಹೇ ಜಗಜ್ಜನನಿ॥

ಅಜಗರದಂತೆ ತಿಂದುರುಳುವ ಎನ್ನ ನೀ।
ಮುಜಗರ ತಾಳದೆ ಪೊರೆಯೆ ಕಲ್ಯಾಣಿ॥ ೧

ಅಭೇರಿ

ತನುಮನಧನದ ಸುಖ ಸಂಪದ ಕೋರುತ
ಮನುಜ ಕೋಟಿ ನಿನ್ನ ಸ್ತುತಿಸುವುದನವರತ।
ದಿನದ ಜೀವನದಲಾಯುಷ್ಯ ಕಳೆಯೆ ಸತತ
ಘನಕಾರ್ಯಗೈದ ಸಂತೃಪ್ತಿ ಪಡೆವರು ನಿರುತ॥ ೨

ರೇವತಿರಾಗ

ನಿನ್ನ ನಾನೇನ ಬೇಡದಂತೆ ಎನ್ನನಿಡು
ನಿನ್ನ ನಾಮಾಮೃತವ ಎನ್ನ ನಾಲಿಗೆಯಲಿಡು।
ಸನ್ನುತಾಂಗ ಶೈಲಜಾನುತನ ಕಾಣಲೆಡೆಮಾಡು
ಮನ್ನಿಸೆನ್ನ ಅಪರಾಧ ನಿನ್ನ ಪದಭಕ್ತಿಕೊಡು॥ ೩

---

೧೮೯. ತಕಿಟ ತಕಿಟ ಹೆಜ್ಜೆಕುಣಿಸಿ

ರಾಗ: ಯಮನ್

ತಕಿಟ ತಕಿಟ ಹೆಜ್ಜೆಕುಣಿಸಿ ದೇವಿ ಬಂದಳು ನಮ್ಮ ತಾಯಿ ಬಂದಳು॥
ತಕಧಿಮಿತಕ ಕಾಲ್ಗೆಜ್ಜೆ ನಾದತಂದಳು ನಮ್ಮ ತಾಯಿ ಬಂದಳು॥ ॥ಪ॥

ಸದಮಲದಾ ಪದ್ಮಪಾದ ಧಿಮಿತಕಧಿಮಿ ಗೆಜ್ಜೆನಾದ।
ಮುದದಿ ಕೊಂಬು ಕಹಳೆನುಡಿದ ರಾಗಕೆ ನಿನ್ನ ನಾಟ್ಯ ಚೆಂದ।
ಸುದತಿಯರೆಲ್ಲ ಸಂಭ್ರಮದಲಿ ನಿನ್ನನಾದರಿಪುದು ಚೆಂದ।
ಪದುಮಮುಖಿ ನಿನ್ನ ಗಾಂಭೀರ್ಯ ಗಜಗಮನವೆ ಚಂದ॥ ೧

ತಾಯೆ ನಿನ್ನ ಆಗಮನ, ತಂದಿತು ಶುಭತೋರಣ।
ತೋಯಜಾಕ್ಷಿ ನಿನ್ನ ಶೃಂಗಾರಗೈವ ಕರೆವೆ ಧನ್ಯ।
ಮಾಯೆ ಮೋಹ ಭವ ಬಂಧನ ಮೀರಿದ ಶುಭ ಗಾಯನ।
ಕಾಯ ಶುದ್ಧಗೊಳಿಸಿ ಮನವ ನಿನ್ನಲಿರಿಪ ಸಾಧನ॥ ೨

ಅರಿಶಿನದ ಸೌಭಾಗ್ಯ ನೀಡೆ ವರಸುಮಂಗಲೆ
ಕರವ ಪಿಡಿದು ಕರುಣೆಯಿಂದ ಪೊರೆಯೆ ತಾಯೆ ಶ್ಯಾಮಲೆ।
ಚಿರಕಾಲ ನಿನ್ನ ಸ್ಮರಣೆ ಎನಗಿರೆ ನಾನೀಗಲೆ
ಹರುಷದಿಂದ ಪಾಡುವೆ ಶೈಲಜಾನುತೆ ಶುಭಮಂಗಳೆ॥ ೩

---

೧೧೦. ಏನೆ ತಾಯಿ ಚೌಡೇಶ್ವರಿಯೆ

ರಾಗ: ಝೂಲವರಾಳಿ ತಾಳ: ಆದಿ

ಏನೆ ತಾಯಿ ಚೌಡೇಶ್ವರಿಯೇ ಏನೆ ನಿನ್ನ ಮಾಯೇ
ನಿನ್ನ ದರುಶನಕೆನ್ನ ಬಾರದಿರೆನ್ನುವೆ ಏನೇ॥ ॥ಪ॥

ನಾನು ನೀನು ಬೇರೆ ಎಂದರಲ್ಲವೇ ಈ ಮೋಡಿ
ನಾನು ನೀನು ನೀನು ತಾನು ತಾನೇ ತನ್ಮತ್ರೆಯಲಿ ಕೂಡಿ
ಬಾನು ಭುವಿ ಸ್ವರ್ಗ ಪಾತಾಳಕೆಲ್ಲ ನಾವೇ ಓಡಿ।
ಏನೋ ಬರೆದ ಈ ಕವಿಯಕಾಷ್ಟ ಹರಿಸಲಿ
ಬ್ರಹ್ಮಾನಂದದ ಕೋಡಿ॥ ೧

ನಂದವರವೋ ಆನಂದಪುರವೋ।
ಒಂದೂ ತಿಳಿಯದ ಮಂದ ಬುದ್ಧಿಯೋ।
ಚಂದದಿಂದಲಿ ನಿನ್ನ ಪಾಡುತ ಕುಣಿದು।
ದಣಿದ ಭಂಡಳೆನಿಪ ಈ ಶೈಲಜೆಯ ಭಕ್ತಿಯೋ॥ ೨

---

೧೧೧. ಚೌಡೇಶ್ವರಿದೇವೀ ನಿನ್ನ ಭಕ್ತರು ಕೂಡಿ

ರಾಗ: ಮುಖಾರಿ ತಾಳ: ಆದಿ

ಚೌಡೇಶ್ವರಿದೇವೀ ನಿನ್ನ ಭಕ್ತರು ಕೂಡಿ।
ಓಡೋಡಿ ಬಂದಿಹರು ಕಾಪಾಡಮ್ಮ॥ ॥ ಪ ॥

ನೋಡು ನೋಡುತ ನೀ ಕಾಡಬೇಡಮ್ಮ। ಪರ-
ದಾಡಿ ನೊಂದಿಹೆವೂ ನಾವಮ್ಮ॥ ॥ ಅ. ಪ. ॥

ಒಬ್ಬನ ಸತಿಯಿಲ್ಲ ಮತ್ತೊಬ್ಬನಾ ಮಗನ।
ಕೊಬ್ಬಿದ ತುಂಟಾಟಕೆಣೆಯಿಲ್ಲ।
ಇಬ್ಬರು ಹೆಂಡಿರ ಕಾಟ ಇವ ಬಲ್ಲ।
ಗುಬ್ಬಿ ಮರಿಯಾಗಿ ನಿನ್ನ ಬಳಿ ಬಂದಿಹನಲ್ಲ॥ ೧

ತಿರುಕನಿಗೆಂದೂ ನೀಡದ ಈತ।
ತಿರುಗಿದ ತಿರುಪತಿ ಬೆಟ್ಟ ಹತ್ತುತ್ತಾ।
ಹರಿ ಹರಿ ಎನ್ನುತ ಹಣ ಸುರಿಸುರಿಯುತ।
ಮರೆಯಲಿ ಮಾಡಬಾರದ ಮಾಡಿ ಕೂತ॥ ೨

ರೋಗವೇನೆಂದರಿಯದ ರೋಗವು ಇವನದು।
ಭೋಗಿಸಿ ಜೀವನವೆ ಹಾಳಾದುದು।
ತ್ಯಾಗವು ತಿಳಿಯದು ಯೋಗವು ಬಾರದು। ಸ-
ರಾಗದಲಿ ಪಾಡಲು ನಾಲಿಗೆ ತಿರುಗದು॥ ೩

ಒಂದಲ್ಲ ಎರಡಲ್ಲ ಕೋಟಲೆ ಲೆಕ್ಕವಿಲ್ಲ।
ತಂದಂಥ ಪಾಪಪುಣ್ಯ ಕರ್ಮವಿದೆಲ್ಲ।
ಅಂದ ಚಂದವೆ ಎಲ್ಲ ಕುಂದು ಕೊರತೆ ಇಲ್ಲ।
ಎಂದಂಥ ಮನುಜರು ಯಾರೂ ಇಲ್ಲ॥ ೪

ಆಸೆ ನೂರೆಂಟು ಕೆಡಕು ದಾರಿ ಎಂಟು।
ಮೋಸ ಮಾಡಿದ ಬಾಳೇ ಪಾಪದ ಅಂಟು।
ಹೇಸರಿಸೀ ಗಂಟು ಬೇಸರಿಸೀ ನಂಟು।
ಮಾಸದ ಮನದೊಳು ಬಾಳನದಿ ದಾಂಟು॥ ೫

ಶೈಲಜಾನುತೆ ಗೌರಿ ಹೇ ಪರಮೇಶ್ವರಿ।
ಶಿಲೆಯಲ್ಲಿರುವ ತ್ರಿಪುರಸುಂದರೀ।
ಶೈಲಜೆ ನಾ :ನಾರಿ ಶೈಲಜಾಪತಿ ಮದನಾರಿ।
ಕೈಲಾಸದೊಡೆಯನಾ ಪ್ರಾಣೇಶ್ವರಿ॥ ೬

ವಿವಿಧ ಗೀತೆಗಳು

೧೧೨. ಶನಿಮಹಾರಾಯ

ಶನಿಮಹಾರಾಯ ನೀ ಹನಿಸು ಕರುಣೆಯ।
ಅವನೇ ಶನೀರಾಯ, ಅವರಪ್ಪ ಎದ್ದ ಸೂರ್ಯ।
ಅವರಣ್ಣ ಅಲ್ಲಿಹನೋ ಯಮಧರ್ಮರಾಯ।
ಇವರೆಲ್ಲ ಕೂಡಿ ಆಡುವರೋ ನಮ್ಮಾ।
ಭುವಿಯ ಜನರ ಜೀವ ಜೀವನದ ಪಗಡೆಯ॥ ೧

ಗರವ ಹಾಕಿದ ಶನಿ ಸರಸರನೆ ಸರಿದ ಸೂರ್ಯ।
ಕರಿಯ ಹಗ್ಗ ಕೈಲಿ ಹಿಡಿದು ಬಂದ ಯಮರಾಯ।
ನರನೆ ನಿನ್ನ ದೊಂಬರಾಟ ಇಷ್ಟೇನಯ್ಯ ಅವ।
ದರದರನೆ ಎಳೆದು ಕೊಂಡು ಹೋಗುವನಯ್ಯ।
ಸೇರಲೆಂದೇ ಶೈಲಜಾನುತ ತುಳಸಿಮಣಿ॥ ೨

ಶನಿಯು ಹಾಕಿದ ಗರವು ಹನಿ ಹನಿ ನೀರಿಗೂ ಬರವು।
ಕಣಜ ತುಂಬಿ ಬಂದರೂ ತಿನ್ನಲಾರೆವು ನಮ್ಮ
ಹಣೆಬರಹ ಇಷ್ಟೆಂದು ಸುಮ್ಮನಿರುವೆವು ನಮ್ಮ
ಕಣಕಣದ ರಕ್ತ ಹೆಪ್ಪಾಗಿ ತೆಪ್ಪಗಿರುವೆವು॥ ೩

ಅರಿತ ಜನರು ಶನಿಯ, ನಿರುತ ಧ್ಯಾನಗೈದು।
ತಮ್ಮ ಚರಿತ ಹಸನುಗೊಳಿಸಿ ಬರೆಸಿಕೊಳ್ವರು ಆ
ಹರಿಹರರ ಕೃಪೆ ಪಡೆದ ಬಾಳ-ಬಾಳ್ವೊರು ತಮ್ಮ।
ಸರಿ ಜನರ ಎದುರಿಗೆಲ್ಲಾ ಚಿಂದ ಕಾಣ್ವೊರು॥ ೪

ಕರುಣೆದೋರುತ ಶನಿಯು ವರವ ನೀಡುತ ರವಿಯು ದಿನ-
ಕರನ ಪುತ್ರ ಕಾಲನೊಲುಮೆಗಳಿಸೆ ಜೀವವು।
ಹರಿಯ ಚರಣ ಸೇರಿದದುವೆ ಪರಮಭಾಗ್ಯವು ಆ
ಸಿರಿಪತಿಯ ಸೇವೆ ಜೀವಕೆ ಮುಕ್ತಿಮಾರ್ಗವು॥ ೫

ಸುರರ ನರರ ಬಿಡದ ಶನಿ ಥರ ಥರ ನಡುಗಿಸ ಇಬ್ಬನಿ।
ಎರಡು ಒಂದೇ ಹೃದಯ ಅಡಗಿ ಸುರಿಸೆ।
ತರುಣಿ ಶೈಲಜೆ ಕೊರಳಗಾನ ಸರಪಣಿ ತೂರಿ॥ ೬

---

೧೧೪. ನಾನ್ಯಾರೋ ನೀನ್ಯಾರೋ

ತತ್ತ್ವದ ಧಾಟಿಯ ಮಟ್ಟು

ತಾನೋ ತಂದಾನೋ ತಾನೋ।
ತಾನೋ ತಂದಾನೋ ತಾನೋ (೪ ಸಾರಿ)॥ ॥ಪ॥

ನಾನ್ಯಾರೋ ನೀನ್ಯಾರೋ।
ಏನೆಂದು ತಿಳಿಯದವರೋ।
ಮಾನಿನಿನಾನೆಂಬೊರೋ॥ ॥ಅ॥

ದೇನೋ ನೀನೆ ಬೇರೆ ಎಂಬೊರೋ॥ ೧

ಅದಂತು ನಿಜವಹುದು।
ಇದಿಂತು ಬಿಡಬಹುದು।
ನಂದಂತು ಕೊಡಲಹುದೋ।
ನಿಂದಂತು ಕಾಣಲೊಲ್ಲದೋ॥ ೨

ದಾರಿಯೇ ಸವೆಯಲೊಲ್ಲದೋ।
ಬೇರೆ ಗತಿಯೇ ತಿಳಿಯಲೊಲ್ಲದೋ।
ತೀರ ಬಲುದೂರದಲ್ಲಿಹುದೋ।
ನಾರಿ ನಾ ಬರಲಾಗದೋ॥ ೩

ಕವನವೆಂಬುದೊಂದು ಚಟ।
ಅವನ ಕುರಿತಿದೊಂದು ಆಟ।
ಶಿವನೆ ಬಲ್ಲ ನನ್ನ ಸಂಕಟ।
ಅವನೆ ಎನಗೆ ಮಾಡಿದ ಮಾಟ॥ ೪

ಪ್ರಶ್ನೆ:

ಸಂತೆ ಜೀವನ ನಡೆಸುವಾಗ।
ಕಂತೆ ವ್ಯಾಪಾರಕ್ಕಿರುವಾಗ।
ಚಿಂತೆ ತಲೆಯಲಿರುವಾಗ। ನಿ-
ಶ್ಚಿಂತೆ ಪಡೆವೆನೆಂದರೆ ಯಾವಾಗ?॥ ೫

ಉತ್ತರ:

ಯೋಚನೆಯಿಂದ ಮುಕ್ತಿ ಸಿಗದು। ಆ
ಯೋಚನೆಗೊಂದು ಯೋಚನೆ ಇರುವುದು।
ತೋಚಿದೆಲ್ಲಾ ಗೀಚುತಲಿರುವುದು।
ಪೇಚಾಟಕ್ಕೆ ಕಾರಣವಹುದು॥ ೬

ಇಲ್ಲಿ ನನ್ನ ಮಾತನು ಕೇಳು। ನಿ-
ನ್ನಲ್ಲಿ ಚಿಂತೆ ಏನದು ಹೇಳು। ಎ-
ಲ್ಲೆಲ್ಲೂ ನಿಮ್ಮೆಲ್ಲರ ಗೋಳು।
ಬಲ್ಲೆ ನಿಮ್ಮ ತೊಡಕಿನ ಬಾಳು॥ ೭

ನಿನ್ನದಾದ ಪ್ರಶ್ನೆ ನೀಡು।
ಒಮ್ಮೆ ಅದರ ಕಡೆಗೆ ನೋಡು।
ನನ್ನಲ್ಲಿದೆ ಅದರ ಜಾಡು।
ಸುಮ್ಮನೆ ಕೇಳುತ ಕೂಡು॥ ೮

ಸಾಧನೆ ಸಂನ್ಯಾಸ ಬೇಡ।
ಬೋಧನೆ ಉಪನ್ಯಾಸ ಬೇಡ। ಪ್ರ-
ಚೋದನೆ ತಾನೆ ಆದಾಗ ನೋಡ।
ಇದೇ ಆತ್ಮ ಸಾಕ್ಷಾತ್ಕಾರ ಕೂಡ॥ ೯

ವ್ಯರ್ಥಮಾತನಾಡಕೂಡದು।
ಅರ್ಥವಾಗದ ಜಾಡು ನನ್ನದು।
ಇತ್ಯರ್ಥವಾದಾಗ ನಿನ್ನಲಿದು।
ಪ್ರತಿನಿತ್ಯ ಬರಕೂಡದು॥ ೧೦

ಕೇಳಿದನ್ನೇ ಕೇಳಬೇಡ।
ಹೇಳಿದನ್ನೇ ಹೇಳಿಸಬೇಡ।
ಕಾಲ ಕಳೆಯಲು ಬರಬೇಡ ನನ್ನ।
ಹಾಲಹಲವ ಉಣಬೇಡ॥ ೧೧

ನೀನೇನೂ ಕೇಳಲಾರೆ।
ನಾನೇನೂ ಹೇಳಲಾರೆ।
ನನ್ನಲ್ಲಿರುವ ಕೊಡಲಾರೆ। ನಿನ್ನ
ನನ್ನ ಜೊತೆಗೆ ಒಯ್ಯಲಾರೆ॥ ೧೨

ಶೈಲಜಾಪತಿ ಶ್ರೀಕಂಠೇಶ್ವರ।
ಶೈಲರೂಪಿ ನಂಜುಂಡೇಶ್ವರ।
ಶೈಲಗಿರೀಶ ಸೋಮಶೇಖರ।
ಮಾಡೋ ನೀ ಎನ್ನ ಉದ್ಧಾರ॥ ೧೩

೧೧೪. ಏನಯ್ಯ ನೀ ಪೇಳಯ್ಯಾ ಕೃಷ್ಣ

ರಾಗ: ಕಲಾವತಿ **ತಾಳ: ಆದಿ**

ಏನಯ್ಯಾ ನೀ ಪೇಳಯ್ಯಾ ಕೃಷ್ಣ।
ಏನಾದರೂ ಪೇಳು ಎಂತಾದರೂ ಪೇಳು।
ನಾನಾಲಿಸುವೆ ನಿನ್ನ ಸವಿ ನುಡಿಯಾ।
ನಾನಾಲಿಸುವೆ ನಿನ್ನ ಸವಿ ನುಡಿಯ॥ ॥ ಪ ॥

ಮಧುರಾಕ್ಷರ ನುಡಿವ ನಿನ್ನಾ ನಾಲಿಗೆಗೆ।
ಮಧುವು ನಾನಾಗಿರಲಾಸೆ ಎನಗೆ।
ಸಾಧುವೆನಿಸಿದ ನಿನ್ನಾ ಮುಗುಳುನಗೆಗೆ।
ಅಧರ ನಾನಾಗಿರಲಾಸೆ ಎನಗೆ॥ ೧

ಕಾಂತಿಯ ಸೂಸುವ ನಿನ್ನ ಕಣ್ಣಿಗೆ। ವಿ-
ಶ್ರಾಂತಿ ಕೊಡುವ ಕಣ್ಣೆವೆಯಾಗುವಾಸೆ ಎನಗೆ॥
ಶಾಂತಿ ಸಂತೃಪ್ತಿ ಪಡೆದ ನಿನ್ನ ತನುವಿಗೆ। ಪ್ರ-
ಶಾಂತಿ ಸೂಸುವ ನಿನ್ನ ಉಡುಪಾಗುವಾಸೆ ಎನಗೆ॥ ೨

ಶೈಲಜಾಪತಿ ಶ್ರೀಕಂಠ ನಿನಗೆ।
ಆಪ್ತನೇನೋ ತಿಳಿಯದೆನಗೆ।
ಲಲನೆ ಶೈಲಜೆ ನಾ ನಾಗಿರುವವರೆಗೆ।
ಕಳಕಳಿಯಿಂದ ಬೇಡ್ವೆ ಒಯ್ಯೋ ನೀ ಅನಂತದೆಡೆಗೆ॥ ೩

೧೧೫. ಮಳೆಯು ಬರುತಿದೆ ಮಾತಿನ

ರಾಗಃ ಮಲ್ಹಾರ್ (ಮಲಹರಿ) ತಾಳಃ ತ್ರಿಶ್ರನಡೆ ಆದಿ

ಮಳೆಯು ಬರುತಿದೆ ಮಾತಿನ ಮಳೆಯು ಬರುತಿದೆ ॥ ಪ ॥

ಕೊಳೆಯ ತೊಳೆವ ಮಳೆಯಿದಲ್ಲ।
ಹೊಳೆವ ಮಿಂಚು ಗುಡುಗು ಇಲ್ಲ।
ಇಳೆಯ ಜನರ ಹರಿತವಾದ।
ನಾಲಿಗೆ ಸುರಿಸುವ ಧಾರಾಕಾರದ॥ ೧

ಅವಳ ಮಾತು ಗುಡುಗು ಸಿಡಿಲು।
ಇವಳ ಮಾತು ಆಲಿಕಲ್ಲು।
ಅವರಿವರ ಮಾತು ಮನದ।
ನೆಲವ ತೋಯ್ಸ್ವ ಸೋನೆ ಹನಿಯು।
ಭುವಿ ದಿವಿಯಲಿ ಕಲಿಯ ಮಾತು।
ಸುರಿಸುತಿಹುದು ರಕ್ತದ್ಹೊಳೆಯ।
ಭವಮಾಯೆ ಹರಿವ ನಿನ್ನ।
ಮಾತು ಎನಗೆ ಜೇನಹನಿಯು॥ ೨

ಬರಿಯಮಾತು ಇಹಪರಕೆಲ್ಲ।
ಹರಿಯ ಕರುಣೆ ದೊರೆಯದಲ್ಲ।
ಕುರುಡು ಕಣ್ಣು ಕವಡೆ ಕಾಸಿಗೆ।
ಬರಡು ಜೀವನ ಸಾಗಿಸಿತಲ್ಲ।
ಪರಪೀಡನ ಪರಾಧೀನ।
ಪರದಾಟಕೆ ಕೊನೆಯೆ ಇಲ್ಲ।
ಮರುಳು ಮನಕೀ ಶೈಲಜಾನುತನ।
ಕುರಿತ ಮಾತಿರೆ ಏತರ ಭಯವಿಲ್ಲ॥ ೩

೧೧೬. ಹೇಯವಾಗಿಹುದೋ ಈ ಹೆಣ್ಣು ಜನ್ಮ

ರಾಗಃ ನಾದನಾಮಕ್ರಿಯ (ಸಾಂಗತ್ಯ ಧಾಟಿ)

ಹೇಯವಾಗಿಹುದೋ ಈ ಹೆಣ್ಣು ಜನ್ಮ। ಉ-
ಪಾಯದಿ ದಾಟಿಸೋ ಹೇ ಪರಮಾತ್ಮ॥

ಹೆಂಡತಿ ಎಂತೆಂಬೋ ಹೆಣ್ಣು ತನ್ನ।
ಗಂಡನ ತಾಳಕ್ಕೆ ಕುಣಿದರೆ ಚೆನ್ನು।
ಮುಂಡಾಸು ತೆಗೆದಿಟ್ಟು ಪುಂಡಾಟವಾಡುತ್ತ।
ಮಂಡೆ ಮೂಸುತ ಸೆರಗಲಿರಿಸುವರು ಹೊನ್ನು॥ ೧

ಗಂಡಸು ತಾನೆಂಬೋ ಗತ್ತು ಅದು।
ಹೆಂಡತಿಯನಾಗಿಸುತ್ತವನ ಸೊತ್ತು।
ಭಂಡತನದಿ ಮಾಡುತ್ತವಳ ಮನೆಯ ತೊತ್ತು।
ಹೆಂಡತಿ ಪ್ರಾಣಕ್ಕೆ ತರುತ್ತಾನೆ ಕುತ್ತು॥ ೨

ಅಬಲೆ ನಾರಿಮಣಿಯ ಮುಂದೆ।
ಪ್ರಬಲನು ತಾನೆಂಬ ಜಂಭ ಜೋರೊಂದೇ।
ಅಬಲೆಯು ತಾನಾಗಿ ಕಣ್ಣೋಟ ಬಲವಾಗೆ।
ಸಬಲ ಕಾಮದೇವ ಬರುವನು ಹಿಂದೆ ಹಿಂದೆ॥ ೩

ಹೆಣ್ಣು ಹೊನ್ನು ಮಣ್ಣು ಜರೆವ।
ಹೆಣ್ತನಕೆ ಮರುಳಾಗದಿರು ಎಂದೆನುವ।
ಬಣ್ಣ ಬಣ್ಣದ ಮಾತಲಿ ಹಿರಿತನವ ತೋರುತ ಬರುವ।
ಸಣ್ಣತನದಲ್ಲಿ ಹೆಣ್ಣ ಮುಂದೆ ತಾ ಹಲ್ಕಿರಿವ॥ ೪

ನಾರಿ ಸ್ವರ್ಗಕೆ ದಾರಿ ಎಂಬೋರು ಪರ-
ನಾರಿಯ ಬಯಸಿದ ರಾವಣನ ಪೊಗರು।
ಮೇರೆ ಮೀರಿದ ಧರ್ಮ ಆತ್ಮನಾಶದ ಚಿಗುರು।
ದಾರಿತಪ್ಪಿದ ಕರ್ಮ ಪುನರ್ಜನ್ಮಕ್ಕಸಿರು॥ ೫

ಮಾದರಿಯ ಸಂಸಾರ ಹೆಣ್ಣಿಂದ ಅದು।
ಹಾದಿ ಬೀದಿಯ ರಂಪವಾಗುವುದು ಹೆಣ್ಣಿಂದ।
ಓದಿ ಬರೆದರೂ ಇಲ್ಲ, ಬೋಧಿಸಿದರೂ ಇಲ್ಲ।
ಶೋಧಿಸಿ ಹೆಣ್ಣಿನ ಆಳ ಕಂಡವರಿಲ್ಲ॥ ೬

ಪ್ರಕೃತಿ ಪುರುಷರ ಈ ಸಂಬಂಧ ನೋಡಿ।
ಆ ಕೃಷ್ಣ ಪರಮಾತ್ಮನಿಗೇನೋ ಆನಂದ।
ಸುಕೃತವು ನಾರಿಯ ಸೌಭಾಗ್ಯ ಸುಖ ಚೆಂದ।
ವಿಕೃತವಾಗದ ಬಾಳು ತರುವುದು ಬ್ರಹ್ಮಾನಂದ॥ ೭

ಹೆಣ್ಣ ಹೀಯಾಳಿಸುವ ಮನವಿಲ್ಲ, ಈ
ಹೆಣ್ಣು ಶೈಲಜೆ ಆ ಶಿವನಲ್ಲಿ ಮುನಿದಿಲ್ಲ।
ಹೆಣ್ಣು ಒಳ್ಳೆಯ ಹಣ್ಣು, ಒಲ್ಲದವಗೆ ಹುಣ್ಣು।
ಮಣ್ಣಾಗುವ ಜನ್ಮಕ್ಕೆ ಮಮಕಾರ ಒಳಿತಲ್ಲ॥ ೮

ಶೈಲಜಾಪತಿ ನಮ್ಮ ಆ ಮಹದೇವ ಈ
ಶೈಲಜಾನುತನಾದ ಹರಿ ವಾಸುದೇವ।
ಕೈಲಾಸ-ವೈಕುಂಠ ಒಂದೆನುವ ಬಲ್ಲವ।
ಕೈಲಾಗದ ಹೆಣ್ಣೇ ಕೈವಲ್ಯವೆಲ್ಲಿ ನಿನಗೆನುವ॥ ೯

---

೧೧೭. ಸಾನೀ ಸಾನೀ ಸ್ವರದೇ

ರಾಗ: ಹರಿಕಾಂಬೋದಿ ಛಾಯೆ ತಾಳ: ತ್ರಿಶ್ರನಡೆ

ಸಾನೀ ಸಾನೀ ಸಾನೀ ಸ್ವರದೇ।
ಕೂಗಿದೆ ಕೋಗಿಲೆ ಮರದಲ್ಲೇ ನೀನು॥ ॥ ಪ ॥

ಪಾಮಾ ಪಾಮಾ ಪಾಮಾ ಸ್ವರದೇ।
ಗೀತೆಯ ಹಾಡಿದೆ ನಿಂತಲ್ಲೇ ನಾನು॥ ॥ ಅ.ಪ. ॥

ಯಾರೇನು ಅಂದರೂ ಯಾರೇನು ಮಾಡಿದರು।
ಮರದಲ್ಲೇ ಹಾಡುವೆ ಈ ಲೋಕ ಮರೆವೆ।
ಮಾರನೇ ಬರಲೀ ಮುರಹರನೆ ಇರಲಿ।
ಚಿರವಾಗಿ ನಿನ ಗೀತೆ ಅಲ್ಲೇ ಸಾಗಿರಲಿ॥

ನಿನ್ನದನಿ ನನ್ನೆದೆಯಲಿ ಸ್ಫುರಿಸುತಿದೆ ಕಂಪನ।
ನಿನಗಾಗಿ ಹೊರಬಂದ ಮಾತಿದುವೆ ಕವನ।
ಎನಗಾಗಿ ನೀನು ನಿನಗಾಗಿ ನಾನು।
ಕನಸಿನಲಿ ಜೊತೆಗೂಡಿ ಹಾಡಿ ಪಡೆವ ಚೇತನ॥

ಈ ಮಧುರ ಕಂಠ ನಿನಗೆ ಯಾರು ನೀಡಿದರೋ।
ಕೋಮಲ ಸುಸ್ವರ ಸಂಗೀತ ಯಾರು ಕಲಿಸಿದರೋ।
ಶ್ಯಾಮಲಾಂಗ ಕೃಷ್ಣನ ಸೃಷ್ಟಿಯೇ ಬಲು ಚೆಲುವು।
ಕೋಮಲಾಂಗಿ ನಾನಹುದೋ ನೀಡು ಬಾ ಒಲವು॥

ಶೈಲಜೆ ಎಂತೆಂಬೋ ಹೆಸರು ಬಹಳ ತೊಡಕಿನದು।
ತಾಳ ಮೇಳ ರಾಗಭಾವ ಪ್ರಾಸಕ್ಕೆ ಸಿಗದು ನಿನ್ನ।
ಕಲಕಲರವ ಅಡವಿಯ ನೀರವ ನೀಗಿಹುದು।
ಕಲಾವಿದೆ ನಾನಾದರು ಎನ್ನ ಮನ ಸೋತಿಹುದು॥

---

೧೧೮. ಜಯ ಭಾರತ ಭುವಿಗೆ

ಜಯ ಭಾರತ ಜಯ ಭಾರತ ಜಯ ಭಾರತ ಭುವಿಗೆ।
ಇದೋ ವಂದನೆ ಇದೋ ವಂದನೆ ನವಭಾರತ ಧ್ವಜಕೆ॥ ॥ಪ॥

ಆಸೇತು ಹಿಮಾಚಲ ಉನ್ನತ ಶಿಖರಗಳಿಂ।
ಗಂಗಾ ಯಮುನಾದಿ ಪುಣ್ಯಪಾವನ ತೀರ್ಥಗಳಿಂ।
ವಿಂಧ್ಯಾದ್ರಿ ಸಹ್ಯಾದ್ರಿ ರಮ್ಯ ವನ ಸಮೂಹದಿಂ।
ಕಂಗೊಳಿಪ ಕಣ್ತಣಿಪ ಭವ್ಯಭಾರತಭುವಿಗೆ॥ ೧

ಸತ್ಯಶಾಂತಿ ಸ್ನೇಹಸ್ಫೂರ್ತಿ ಸ್ವಚ್ಛತೆಯನೆ ಸಾರಿ।
ನಿತ್ಯ ನಿರ್ಮಲ ಕಾಂತಿ ಹಚ್ಚ ಹಸುರನ್ನೇ ತೋರಿ।
ಸ್ತುತ್ಯರೆನಿಪ ಗಾಂಧಿ ವಿವೇಕರ ತ್ಯಾಗ ಕೇಸರಿ।
ಮಿಥ್ಯವನ್ನೆ ಕತ್ತರಿಪ ಅಶೋಕ ಚಕ್ರವೇ ಸರಿ॥ ೨

ಪಂಚಶೀಲ ತತ್ತ್ವವನ್ನೆ ಸಾರಿದ ಶ್ರೀ ನೆಹರೂ।
ಕಿಂಚಿತ್ ವಿಶ್ರಮಿಸದ ಶ್ರೀ ಲಾಲಬಹುದ್ದೂರರೂ।
ಕೊಂಚ ಕೊಂಚವಾಗೆ ಸ್ಥಾನ ಕಂಡ ನಾರಿ ಇಂದಿರಾ।
ಮಿಂಚಿ ಮೆರೆವ ಪುಣ್ಯ ಜನರ ಮಾತೆ ಮಹಾ ಮಂದಿರಾ॥ ೩

---

೧೮. ಮೋಹನ ಮುರಳಿ

ರಾಗ: ಮೋಹನ **ತಾಳ: ಆದಿ**

ಮೋಹನ ಮುರಳಿ ಕೃಷ್ಣಮುರಾರಿ।
ದ್ವಾಪರದವತಾರೀ ಮೋಹನ।
ಮೋಹನದಾಸ ಕರಮಚಂದ ಗಾಂಧಿ।
ಕಲಿಯುಗದವತಾರೀ–ಮೋಹನ॥ ॥ ಪ ॥

ವರಪೀತಾಂಬರಧಾರಿ ಹರಿ।
ವರ ಶ್ವೇತಾಂಬರಧಾರಿ ಗಾಂಧಿ।
ಸುರನರ ಸೇವಿತ ಅಸುರ ಸಂಹಾರಿ।
ಹರಿಜನ ಪೂಜಿತ ಹೃದಯ ವಿಹಾರಿ॥ ೧

ವೈಜಯಂತಿ ಮಾಲಾ ಸುಶೋಭಿತ।
ಬೃಂದಾವನ ವಿಹಾರೀ ಮೋಹನ।
ವಿಜಯದೆ ಖಾದಿ ಸೂತ್ರ ಮಾಲೆಯ ಪೊತ್ತ।
ಆಶ್ರಮ ವಿಹಾರೀ ಮೋಹನ॥ ೨

ಭಾರತ ಯುದ್ಧಕೆ ಪ್ರೇರಕನಾದನವ।
ಭಾರತ ಕ್ರಾಂತಿಗೆ ಪೋಷಕನಾದನಿವ।
ಭಾರತದಲ್ಲಿ ಪವಾಡಪುರುಷನಾದನವ।
ಭಾರತದಲಿ ಆದರ್ಶಪುರುಷನಾದನಿವ॥ ೩

ಮಿಥ್ಯವು ಹಿಂಸಾ ಕೃತ್ಯಗಳಿಂದ ರಕ್ತ-
ಪಾತವೆಸಗಿದ ಪರಮಾತ್ಮನೋ ಅವ।
ಸತ್ಯ-ಅಹಿಂಸಾ-ತತ್ತ್ವಗಳಿಂದ।
ಸ್ತುತ್ಯನು ಆಗಿಹ ಮಹಾತ್ಮನೋ ಇವ॥ ೪

ಸುದರ್ಶನವೆಂಬ ಚಕ್ರದಿಂದಲೇ।
ದಾನವ ಶಿರ ತರಿದ ಗೋವಿಂದ ಮುದದೀ।
ಆದರ್ಶವಾದಿ ತಾ ಚರಕದಿಂದಲೇ।
ದಾರವ ಕರೆದಾ ಮಹಾತ್ಮ ಗಾಂಧಿ॥ ೫

ಶೈಲಸುತೆಯ ಸೋದರ ಮುರಹರಿಯನೆ।
ಗಾನರೂಪದಿ ಪಾಡುವೆ ನಾ ಪರಿಪರಿ।
ಈ ಶೈಲಜೆಗೆ ತಾತನಾಗಿಹ ಗಾಂಧಿಯ।
ಸ್ಮರಿಸುವೆ ನಾ ಕವನ ರೂಪದಿ ಈ ಪರಿ॥ ೬

---

೧೨೦. ಕನ್ನಡ ತಾಯೆ ವಂದಿಪೆ

ರಾಗ: ಮೋಹನ **ತಾಳ: ಆದಿ**

ಕನ್ನಡ ತಾಯೆ ವಂದಿಪೆ ನಿನಗೆ।
ಕನ್ನಡ ನುಡಿಯನು ಉಲಿಯಲಿ ನಾಲಗೆ॥ ॥ಪ॥

ತುಂಗ ಭದ್ರೆ ಕಾವೇರಿ ಗೋದಾವರಿ।
ಮಂಗಳ ಗಂಗೆಯು ಹರಿವ ನೀರಾವರಿ॥
ಶೃಂಗಗಿರಿ ಸಹ್ಯಾದ್ರಿಯು ಬಿಳಿಗಿರಿ।
ಹೊಂಗೆಯ ತಂಪಲಿ ನಡೆಯುವ ದಾರಿ॥ ೧

ರನ್ನ ಪಂಪ ಕುಮಾರ ವ್ಯಾಸರು।
ಕನ್ನಡ ಕಾವ್ಯಧಾರೆ ಹರಿಸಿದ ತವರು॥
ಹೊನ್ನಿನ ಕಳಸವೆ ಕೃಷ್ಣದೇವರಾಯರು।
ಕನ್ನಡ ನಾಡನು ಮೆರೆಸಿದ ಧೀರರು॥ ೨

ಬೇಲೂರು ಹಳೆಬೀಡು ಕಲೆಗಳ ನೆಲೆನಾಡು।
ಶಿಲೆಯಲಿ ಕೋಮಲತೆ ಕಾಣುವ ಜಾಡು॥
ಬಲು ಸುಂದರ ನಮ್ಮ ಶ್ರೀಗಂಧದಾ ನಾಡು।
ಶೈಲಜಾನುತೆ ತಾಯೆ ಎಮ್ಮ ನೀ ಕಾಪಾಡು॥ ೩

---

೧೨೧. ಸುಂದರವದನೇ

ರಾಗ: ಆಹಿರ್‌ಭೈರವ್ ತಾಳ: ಆದಿ

ಸೋ ಸೋ ಸೋಬಾನೇ॥ ॥ ಪ ॥

ಸುಂದರವದನೇ ದೊಂಬರ ಸದನೇ।
ಚಂದಣದ ಬೊಂಬಕ್ಕ ಬಾರೇ।
ಅಂದದುಡಿಗೆ ತೊಡಿಸುವ ಬಾರೇ।
ಚಂದದಾರತಿ ಎತ್ತುವ ಬಾರೇ॥ ೧

ಮೀನ ಕಣ್ಣುಂಟು ಕಾಣಾದೇನೆ।
ಪ್ರಾಣವಲ್ಲಭ ಬಳಿ ಬಂದಾನೇ।
ಜಾಣೆ ಮಾತಾಡಬಾರದೇನೇ।
ಮೌನವೇ ಹಿತವಾಗಿಹುದೇನೇ॥ ೨

ಮಲ್ಲಿಗೆ ಹೂವಿಗೆ ಕಾಲವಿದಲ್ಲ।
ಕಲ್ಹಾರ ಮಂದಾರ ಗಿಡದಲ್ಲಿಲ್ಲ।
ಒಳ್ಳೆ ಸೇವಂತಿಗೇ ತಂದಿಹೆನಲ್ಲ।
ಕಳ್ಳಕೋಪವು ನಿನಗಿದು ಸಲ್ಲ॥ ೩

ಹತ್ತುದಿನ ನಿನಗಿಲ್ಲಿಯ ವಾಸ।
ಹೆತ್ತ ತವರಲಿ ಹುಟ್ಟಿದ ದಿವಸ।
ಹತ್ತು ಹಲವು ವಿಧ ತಿಂಡಿಗೆ ದವಸ।
ಹೊತ್ತು ತರುವುದೇ ದಸರ ವಿಶೇಷ॥ ೪

ಅಂಗಳವೆಲ್ಲ ಅತಿ ಚೆನ್ನಾಗಿ ಸಾರಿಸಿ।
ಅಂಗನೆಯರೆಲ್ಲಾ ರಂಗವಲ್ಲಿ ಬಿಡಿಸಿ।
ರಂಗು ರಂಗಿನ ಸೀರೆ ಮಕ್ಕಳಿಗುಡಿಸಿ।
ಮಂಗಳಾಂಗಿ ನಿನಗಾರತಿಯಿಳಿಸಿ।
ಚಲುವೆ ಸರಸಿ ಪಟ್ಟದರಸೀ।
ತಾಯೆ ಬಾರೆ ನಮ್ಮನು ಹರಸಿ॥ ೫

ಶೈಲರಾಜನ ಕುವರಿ ನೀನಂತೆ।
ಕೈಲಾಸವೇ ನಿನಗರಮನೆಯಂತೇ।
ಶೈಲಜಾಪತಿ ಶ್ರೀಕಂಠನಿಹನಂತೆ।
ಬಾಲೆ ಶೈಲಜ ನಾನಹುದಂತೇ।
ನಾನೇ ನೀನಂತೆ ನೀನೇ ನಾನಂತೆ।
ನನ್ನಲ್ಲೇ ನೀನಿರುವುದು ಚೆನ್ನವಂತೆ॥ ೬

---

೧೨೨. ಏಕಾದಶಿ ಉಪವಾಸ

ರಾಗ: ವರ್ಣರೂಪಪಿಣಿ **ತಾಳ: ತ್ರಿಶ್ರನಡೆ**

ಏಕಾದಶಿ ಉಪವಾಸ ಆದ-
ರಲಿಲ್ಲ ಶ್ರೀಹರಿಯ ಸಹವಾಸ॥ ॥ಪ॥

ನಾಳೆ ಏಕಾದಶಿ ಬಂತೆಂದೂ।
ಬಾಳೆಗೊನೆ ಎಲೆ ಕೊನೆ ತಾ ತಂದು।
ಹೋಳಿಗೆ ಹಪ್ಪಳ ಹಾಕೆಂದೂ।
ಹೇಳಿದ ಊಟವಿಲ್ಲ ಉಪವಾಸವೆಂದು॥ ೧

ಸಜ್ಜಿಗೆ ಕಜ್ಜಾಯ ಗೊಜ್ಜವಲಕ್ಕಿ ಬರೀ।
ಮಜ್ಜಿಗೆ ಪಳದ್ಯವ ತಂಬ್ಗೇಲಿಕ್ಕೀ।
ಸಜ್ಜಾದ ಎಲೆಯಲ್ಲಿ ತಿಂದು ಕೈ ನೆಕ್ಕೀ।
ಉಜ್ಜೀದ ನಾಲಿಗೆ ಕೈ ಬಾಯ್ ತಿಕ್ಕೀ॥ ೨

ಊಟವಲ್ಲದ ಊಟ ಮುಗಿದಾಗ।
ಹೊಟ್ಟೆಯೊಳಗಿಲ್ಲ ಒಂದ್‌ಹನಿ ನೀರಿಗು ಜಾಗ।
ಮೂಟೆ ಕೆಳಗಿಟ್ಟು ಮೈ ಚಾಚಿದಾಗ।
ತೋಟದಾಚೆಗೆ ಹೋಗುವಂತಾಯ್ತು ಬೇಗ ಬೇಗ॥ ೩

ಏಕಾದಶಿ-ದ್ವಾದಶಿ ಬೇಕಿಲ್ಲ ನಮ್ಮ।
ಶ್ರೀಕಾಂತ ಅಂತಹಕೇ ಬಹನಲ್ಲ।
ಲೋಕೈಕ ನಾಯಕ ಶೈಲಜಾನುತನೆಲ್ಲ।
ಬೇಕೆಂದವಗೆ ಭಕ್ತಿಯ ಕೂಗೊಂದೆ ಸಾಕಲ್ಲ॥ ೪

---

೧೨೩. ತರಕಾರಿ ಬೇಕೇ ತರಕಾರಿ

ರಾಗ: ಶಂಕರಾಭರಣ ತಾಳ: ಚತುರಶ್ರನಡೆ

ತರಕಾರಿ ಬೇಕೇ ತರಕಾರಿ।
ಬೆಂಗಳೂರು ಲಾಲ್‌ಬಾಗ್ ತರಕಾರಿ।
ತರಕಾರಿ ಬೇಕೇ ತರಕಾರಿ॥ ॥ಪ॥

ಕಮಲದ ಹೂವಂತ ಕೋಸು ಬೇಕೇ।
ಕಾಮನ ಬಿಲ್ಲಂತ ಈರುಳ್ಳಿ ಹೂ ಸಾಕೇ।
ಕೋಮಲ ಹೆಣ್ಣಿನ ಕೈ ಬೆರಳಂಥೆ।
ಸುಮಧುರ ಬೆಂಡೆಕಾಯಿಯು ಬೇಕೇ॥ ೧

ಕಣ್ಣು ಹಲ್ಲುಗಳಿಗೊಳ್ಳೆಯದಣ್ಣಾ।
ಕೆಂಪು ಮೂಲಂಗಿ ಕೋಸಂಬ್ರಿ ಚೆನ್ನ।
ಸಣ್ಣ ಸಣ್ಣಗೆ ಹೆಚ್ಚಿದ ಹಾಗಲ।
ಗೊಜ್ಜು ಊಟಕೆ ಬಲು ರುಚಿಯಣ್ಣ॥ ೨

ಹಾವಂತೆ ಕಾಣುವ ಪಡವಲ ಬೇಕೇ।
ಹವಳ ಮುತ್ತು ಮಣಿ ಬಟಾಣಿ ಸಾಕೇ।
ಅವರೆ ಬದನೆ ಹುರುಳಿಕಾಯಿ ಬೇಕೇ।
ಅವಳಿ ಮಕ್ಕಳಂತೆ ಗೋರಿಕಾಯಿ ಸಾಕೇ॥ ೩

ಲಲಿತ ಸವಿತಳಂಥ ಮಕ್ಕಳಿಗಾಗಿ।
ಕಲಕಲ ರವದೊಳು ಹಾಡಿದ ಜೋಗಿ।
ಶೈಲಜಾ ರಮಣ ಶ್ರೀಕಂಠಯೋಗಿ।
ಕುಲು ಕುಲು ನಗುತಿಹ ನೋಡಲು ಹೋಗಿ॥ ೪

---

೧೨೪. ನಾನು ಸಾ ನೀನು ಪಾ

ರಾಗಃ ತೋಡಿ **ತಾಳಃ ಆದಿ**

ನಾನು ಸಾ ನೀನು ಪಾ।
ನಾನು ಸಾ ನೀನು ಪಾ।
ಸಾ ಪಾ ಸಾ ಏಳು ಮೆಟ್ಟಿಲು।
ನಾನು ನೀನು ತೂಗುವ ತೊಟ್ಟಿಲು॥ ॥ಪ॥

ಷಡ್ಜವದುವೆ ಸುಂದರ।
ಪಂಚಮವದು ಅದಕಾಧಾರ।
ಕಜ್ಜಾಯದ ಸಿಹಿ ನಾದ ಮಧುರ।
ಪಂಚಪ್ರಾಣ ಮಿಕ್ಕೈದು ಜೀವ ಸ್ವರ॥ ೧

ಸಾರಿ ಗಾಂಧಾರ ಗ್ರಾಮದಲಿ।
ತೂರಿ ನಿನ್ನ ಪ್ರೇಮಾಂತರಂಗದಲಿ।
ಹಾರಿ ಜಾರಿ ಮುದದಲಿ।
ಸೂರೆಗೊಂಡು ಸಂಗೀತವು ಮುದದಲಿ॥ ೨

ಮಹಾದೇವಿ ನೀ ತೋರಿದ ಮಾಯೆಯು।
ಆಹಾ! ಇಹ ಸುಖದ ಛಾಯೆಯು।
ಮಹಾ ಮಹಿಮೆ ಪರಮೋತ್ತಮ ಶಾಂತಿಯು।
ಸುಹಾಸಿನಿ ನಿನ್ನ ಸಂಕೀರ್ತನೆಯು॥ ೩

ಷಡ್ಜ ಶಾಂತಿಯ ಅರಸುತ।
ಪರಮಸುಖವು ಪಂಚಮದಲೆನ್ನುತ।
ತ್ರಿಜಗನ್ಮಾತೆಯ ತೂಗುತಾ।
ನಾದ ಬ್ರಹ್ಮನಲಿ ನಲಿಯುವೆ ಸತತ॥ ೪

ದಾರಿ ದಾರಿ ಕಾದು ನಾನು ಸೊರಗಿದೆ।
ನೀರು ಅನ್ನ ಸಾರು ಖೀರು ಕಾಣದೆ।
ಸಾರಸಾಕ್ಷಿ ಎನ್ನ ಉಸಿರು ಒಣಗಿದೆ।
ತೋರಿ ಕರುಣೆ ಪೊರೆಯೆ ಶೈಲಜಾನುತೆ॥ ೫

---

೧೨೫. ಸಿದ್ಧಿವಿನಾಯಕ ಬೇಡುವೆ

ರಾಗ: ಸುರಾನಂದಿನಿ ತಾಳ:

ಸಿದ್ಧಿವಿನಾಯಕ ಬೇಡುವೆ ನಿನ್ನೊಳು।
ಅದ್ದೂರಿ ಜಯಭೇರಿ ನೀಡು ಎನ್ನ ಕಾರ್ಯದೊಳು॥ ॥ಪ॥

ವಾಗೀಶ್ವರಿ ದೇವಿಯೆ ಎನ್ನ ಮಾತೆಯು।
ಆಗಜೆಯ ರಮಣನೆ ಪ್ರತ್ಯಕ್ಷ ಪತಿಯು।
ಅಗಣಿತ ಗುಣ ಗಣಪತಿ ನಿನ್ನ ಸ್ತುತಿಯು।
ಜಗದೊಳು ಸೊಗಸಿನ ಜೀವನ ಶ್ರುತಿಯು॥ ೧

ಹೃದಯ ಸಂಪುಟವೊಂದು ಹರುಷದಿ ಹೊರಟಿದೆ।
ಆದರೊಳಗಿನ ಹೆಣಿಗೆ ಹಾಡಾಗಿ ಹರಿದಿದೆ।
ಮದನ ಜನಕನ ಲೀಲೆಯನು ಕೊಂಡಾಡಿದೆ।
ಸುದತಿ ನಾ ಮೊರೆಯಿಡೆ ಪೊರೆಯೋ ನೀ ಮರೆಯದೆ॥ ೨

ಶ್ರುತಿ ಶಾಸ್ತ್ರ ಸಂಪ್ರದಾಯದರ್ಥವ ತಿಳಿಸಿದೆ।
ಪ್ರತಿ ಹಾಡಿನ ಧಾಟಿ ರೀತಿಯನುಳಿಸಿದೆ।
ಅತಿಶಯದಿ ಶೈಲಜಾನುತ ನಿನ್ನ ಮುಂದಿದೆ।
ಕ್ಷಿತಿಯೊಳು ಶ್ರೇಷ್ಠತೆ ಕರುಣಿಸೋ ತಂದೆ॥ ೩

೧೨೬. ಗೃಹಪ್ರವೇಶ ಶುಭಗೀತ

ವಾಗಧೀಶ್ವರಿ ದೇವಿ ಶೃಂಗೇರಿ ಶಾರದೆಯೆ।
ನಾಗರಾಜನಿಗೊಲಿದು ನೀಡೆ ಸನ್ಮತಿಯ।
ವಾಗೀಶ್ವರೀ ಸುತನು ರಾಮಕೃಷ್ಣನ ದಯದಿ।
"ವಾಗ್ದೇವಿ" ನಿಲಯದೊಳು ಹೊಕ್ಕಿಹನು ಸಡಗರದಿ॥

ಬಂಧು ಬಾಂಧವರೆಲ್ಲ ಸಂಭ್ರಮದಿ ಸೇರುತ್ತ।
ಅಂದಚಂದದಿ ಮನೆಯ ಶೃಂಗಾರ ಗೈಯುತ್ತ।
ಮಂದಹಾಸದಿ ಹರಿಯ ಮಂದಾಸನದಲಿರಿಸುತ್ತ।
ಎಂದೆಂದೂ ಸಲಹಲೆಂದರ್ಚಿಸಲಿ ಅನವರತ॥

ಸಂಗೀತ ಸಾಹಿತ್ಯ ಸಂಸ್ಕೃತಿಗೆ ಇದು ತಾಣ।
ಮಂಗಳಾಂಗಿಯರ್ರೈವರೀ ಮನೆಯ ಪ್ರಾಣ।
ಅಂಗನೆಯರಾರತಿಯ ಬೆಳಗುವುದು ಸಹಜಗುಣ।
ಹೊಂಗನಸ ತರುತಿರಲಿ ನರಹರಿಯ ಸಿರಿಕರುಣ॥

---

೧೨೭. ಬ್ರಹ್ಮೋಪದೇಶದ ಶುಭಗೀತಾ

ಬ್ರಹ್ಮೋಪದೇಶವಿದು ಬ್ರಾಹ್ಮಣನು ನೀನಾದೆ।
ಬ್ರಹ್ಮಮಂತ್ರವ ಕಲಿತು ಜೀವನದ ಮಾರ್ಗದೇ।
ಬ್ರಹ್ಮತತ್ತ್ವದ ಅರ್ಥ ಮಹತ್ವವನರಿತು ಪರ।
ಬ್ರಹ್ಮನನು ಕಾಣುತ್ತ ಸುಖಿಯಾಗು ನಿಜದೇ॥

ರಾಘವೇಂದ್ರನ ಸುತನು **ರಾಜೇಶ** ನೀನೆಂದು।
ರಾಘವೇಂದ್ರನ ದಯದಿ ಹಿರಿಯರ ನುಡಿದಿಂದು।
ಭಾಗ್ಯವಂತನು ನೀನು ಬಹುಜನರ ಸುಖಕಾಗಿ।
ಯೋಗ್ಯಜೀವನ ನಡೆಸೆಂದ್ಹರಸಿದರು ತಾವಾಗಿ॥

---

೧೨೮. ಶೇಷಾದ್ರಿಪುರ ಪ್ರೌಢಶಾಲೆಯಾ ಸರಸ್ವತಿಯೆ

ರಾಗಃ ಕುಂತಲವರಾಳಿ — ತಾಳಃ ಖಂಡಛಾಪು

ಶೇಷಾದ್ರಿಪುರ ಪ್ರೌಢಶಾಲೆಯಾ ಸರಸ್ವತಿಯೆ।
ದೋಷವಿಲ್ಲದ ವಿದ್ಯೆ ನೀಡು ಬಾ ತಾಯೇ॥

'ಜ್ಞಾನವೇ ಶಕ್ತಿ' ಸಂಕೇತದಲಿ ಮೆರೆಯುತಿಹ।
ಜ್ಞಾನಪೀಠಕೆ ನಿನ್ನ ಮಕ್ಕಳನು ಕರೆಯಮ್ಮ।
ಮೌನವರ್ಜಿಸಿ ನಮ್ಮ ಧ್ಯೇಯ ಸಾಧನೆಯ।
ಜ್ಞಾನಬುದ್ಧಿಯ ನೀಡು ವಿದ್ಯದಾಯಿನಿಯೇ॥

ಈ ನಮ್ಮ ಶಾಲೆಗಿದೆ ಸಂಗೀತ, ಕರಕುಶಲ।
ಈ ನಾಡ ಸೇವೆಯಾ ಸೇವಾದಳ।
ಈ ನಾಡ ಭಾಷೆಗಳ ಒಟ್ಟುಗೂಡಿಪ ಸಂಘ।
ಬಾನು ಭುವಿ ಒಂದಾದ ವಿಜ್ಞಾನ ಸಂಘ॥

ಬಿಳಿ, ಹಸಿರು, ಕೆಂಪು, ನೀಲಿಯ ಬಣ್ಣದಿಂ ಮೆರೆವ।
ತಿಳಿ ಮನದ ಮಕ್ಕಳನು ನಾವ್ ಮುಂದೆ ತರುವಾ।
ತಿಳಿಯಾದ ಭಾಷೆಯಲಿ ಒಳ್ಳೆಯಾ ವಿದ್ಯೆಯನು।
ನೆಲ್ಮೆಯಿಂದಲಿ ಕಲಿವ ಮಕ್ಕಳಿರಲಮ್ಮ॥

ಶಾಲೆಯಾ ದಿನನಿತ್ಯ ಪ್ರಾರ್ಥನೆಯು ಇಂತಿಹುದು।
ಕಾಲತ್ರಯದಲಿ ಮೆರೆವ ಭಗವದ್ಗೀತೆಯದು।
ಬಾಲ-ಬಾಲೆಯರು ನಾವು ಈ ಶಾಲೆಯಲಿ ಸೇರುವಾ।
ಶೈಲಜಾನುತನ ಉಪದೇಶವನು ಸಾರುವಾ॥

೧೨೯. ಟ್ರಿಪ್ಪಿನ ಲಾವಣಿ

ರಾಗ: ಉದಯರವಿಚಂದ್ರಿಕ ತಾಳ: ಚತುರಶ್ರನಡೆ

ನಮ್ಮ ಟ್ರಿಪ್ಪಿನ ಕಥೆ ಕೇಳಿ ಹೇಳ್ತೀನೆಲ್ಲಾ।
ಸುಮ್ಮಾನದಿ ಎಲ್ಲರಿಗೂ ದೊರ್ಕೋದಿಲ್ಲ।
ಒಮ್ಮೆ ಆಡಿದ ಮಾತ ನಾವು ಆಡೋದಿಲ್ಲ।
ಬೊಮ್ಮ ಕೊಟ್ಟ ವರವಿದು ನಮಗೆಲ್ಲಾ॥ ೧

ಹೊರಟೋರೊಳ್ಗೆ ನಾವು ಮಂದಿ ನಲ್ವತ್ತೆಂಟು।
ಅವ್ರು ಇವ್ರು ಎಲ್ಲಾ ಮೇಲೆ ಹದಿನೆಂಟು।
ಗುಂಪುಕೂಡಿ ಬಸ್ಸು ಹತ್ತಿದ ಬೆಳಗ್ಗೆ ಎಂಟು।
ಬಂದವರೆಲ್ಲ ತಂದಿದ್ದುಂಟು ಭಾರೀ ಗಂಟು॥ ೨

ಆರಡಿ ಕರೀ ಹುಡುಗ ನಮ್ಮ ಮ್ಯಾನೇಜರ್।
ಶುರ್ವಿನಲ್ಲೇ ಪರ್ಸ್ ಬಿಚ್ಚದ ಅವನ ಪವರ್।
ದಾರಿ ಮಧ್ಯೇ ಸೇಲಂನಲ್ಲಿ ಬಿಚ್ಚಿದ ಕ್ಯಾರಿಯರ್।
ಚುರ್ ಚುರ್ ಬಿಸಿಲನಡಿಗೆ ನೋಡಿ ನಕ್ಕ ಡ್ರೈವರ್॥ ೩

ಪುಟ್ಟಚ್ಚಮ್ಮ ಶಾರದಮ್ಮ ಶೈಲಜಮ್ಮ।
ದೃಷ್ಟಿ ಬಡಿವೊ ಸಂಸಾರದ ವತ್ಸಲಮ್ಮ।
ಪುಟ್ಟ ಸಂಸಾರದ ಕೊಡಗಿನ ಕಾವೇರಮ್ಮ।
ಬೆಟ್ಟವನ್ನೇ ಹೊತ್ತುತಂದ ಧಾರ್ವಾಡ್ದಮ್ಮ॥ ೪

ತುಂಟ ಮಕ್ಕಳ ಒಳ್ಳೇ ಗಂಡನ ಕಂಡ ಭಾಗ್ಯಮ್ಮ।
ತಂಟೆ ತಕರಾರಿಲ್ಲದ ತಾಯಿ ಪುಟ್‌ಗೌರಮ್ಮ।
ಒಂಟಿ ಬಂದು ಜಂಟಿ ಆದ ತಿಪ್ಪಣ್ಣ ಮಾಮಾ।
ಜಂಟಿ ಜೋಡಿ ಗಂಡ ಇದ್ರೂ ಒಂಟಿ ಗೀತಮ್ಮ॥ ೫

ಅಂತು ಇಂತು ಬಂತು ನೋಡಿ ನಮ್ಮ ಶ್ರೀರಂಗ।
ಕಂತೆ ಬಿಚ್ಚಿ ಬನ್ನಿರೆಂದ ಕರೀ ರಂಗ।
ಚಿಂತೆ ಬಿಟ್ಟು ತಿಂಡಿ ತಿಂದು ಬನ್ನಿ ನನ್ ಸಂಗ।
ಎಂಥ ವಿವರಣೆ ಕೊಟ್ಟು ತೋರ್ದ ಜಂಬುಲಿಂಗ॥ ೬

ನಾನೂರಡಿ ಮೇಲೆ ಕುಂತವನ್ ನಮ್ಮ ಗಣಪ।
ಏನೇನ ವರಬೇಕೋ ನೀವು ಕೇಳ್ಕೊಳ್ರಪ್ಪಾ।
ಶಾನೇ ಹೊತ್ತು ನಿಲ್ಲೋದಿಕ್ಕೆ ಬಿಡವಲ್ ನಮ್ಮಪ್ಪ।
ದಾನವ ದಮನ ಮಾಡ್ದ ತಿರುಚನ ಪಳ್ಳಿಯಪ್ಪ॥ ೭

ಕಾವೇರಿ ಸ್ನಾನ ಮಾಡಿ ಹೊಂಟ್ರು ಗುಡೀಗೇ।
ಕಾವೇರಿ ರಂಗನ ದರ್ಶನ ಮಾಡೀಕೋನೇಗೇ।
ದೇವಸ್ಥಾನ ಸುತ್ಸಿ ತಂದ ನಮ್ಮ ಗೈಡ್ ಹಾಗೇ।
ಕಾವೇರಿದ ಬಿಸಿ ಊಟ ನಮ್ಮ ಪಾಲಿಗೇ॥ ೮

ಊಟ ಮುಗ್ಸಿ ಸಿದ್ಧವಾಗೇ ಮುಂದಿನ ಜಾಗಕ್ಕೇ।
ಪಾಠ ಊದುವ ಹುಡುಗ ಬಂದ ನಮ್ಮ ಕಡೀಗೇ।
ಕೆಟ್ಟುನಿಂತ ಬಸ್ಸು ಹೋಗಿದೆ ರಿಪೇರಿಗೇ।
ಕಟ್ಟಿ ಮೂಟೆ ಕಾದು ನಿಲ್ಲಿ ಅಲ್ಲೀವರೆಗೇ॥ ೯

ಬೇಜಾರಾದ ಜನ ಬಿಚ್ಚಿ ಬಟ್ಟೇ ಗಂಟು।
ಭುಜದ ಮೇಲೆ ತಲೆಯ ಮೇಲೆ ಇಟ್ಟದ್ದುಂಟು।
ಮೋಜಾಗಿತ್ತು ಮಜವಾದ ನೋಟ ನೋಡಿದ್ದುಂಟು।
ನಿಜ ಹೇಳ್ತೀನ್ ಕೇಳಿ ಇಲ್ಲ ನಮ್ಮಲ್ ಸ್ಪಂಟು॥ ೧೦

ಅಲ್ಲಿಂದ ಮುಂದಕ್ಹೋಡಿದ್ದಾವು ಮಧುರೆ ಮೀನಾಕ್ಷಿ।
ಎಲ್ಲಿಲ್ಲದ ಎತ್ರದ ಗೋಪ್ರಾ ನಾಲ್ಕೂ ಸಾಕ್ಷಿ।
ಹಲ್ಲು ಬಾಯ ಬಿಟ್ಟು ನೋಡುದ್ಲು ವನಜಾಕ್ಷಿ।
ಎಲ್ಲಾ ಗೋಪುರದೊಳಗೂ ಇದ್ವು ಬರೀ ಪಕ್ಷಿ॥ ೧೧

ಬಸ್ಸು ಬಂತು ನಮ್ಮ ತಂತು ಮಂಟಪದೂರೀಗೇ।
ಬುಸು ಬುಸು ರೈಲೇರಿ ರಾಮೇಶ್ವರಕ್ಕೇ।
ಪಿಸು ಪಿಸು ಮಾತೇ ನನ್ನ ಗಂಟಲ್‌ನಾಗೇ।
ಹಸನಾದ ಪಾಂಬನ ಸೇತ್ವೆ ನೋಡ್‌ದ್ದು ಖಷಿಯಾಗೇ॥ ೧೨

ರಾಮಪಾದ ನೋಡೋಕ ಟಾಂಗಾ ಓಡ್ಸಿದ್ರು ಕಂಡ್ರೀ।
ಬ್ರಹ್ಮಹತ್ಯ ದೋಷಾ ನೀಗೋಕ ಕಾಸ್ಹಾಕ್ ಬೇಕ್ರೀ।
ಭೂಮ್ಯಾಕಾಶಾ ಒಂದಾಯತು ಮಳೇ ನೋಡ್ರೀ।
ಕೋಮಲೇರು ಕುಮಾರೀರೂ ತೋಯ್ದೋದ್ರು ಕಂಡ್ರೀ॥ ೧೩

ನೆಂದ ಬಟ್ಟೆ ಆರಾ ಕಾಕೂ ಜಾಗಾ ಇಲ್ಲ।
ತಿಂದು ಬಿಟ್ಟ ಕಾಫಿ ತಿಂಡಿ ಗಲೀಜೆಲ್ಲಾ।
ಮುಂದೆ ನೋಡಲು ದೇಗುಲದಲ್ಲಿ ದೀಪಾ ಇಲ್ಲ।
ನಿಂದು ಗೈಡ್ ನೀಡಿದ ಮಾರ್ಗ ನಮಗೆಲ್ಲಾ॥ ೧೪

ಬಿದ್ದ ಹನುಮ ನಿಂತ ಜಾಗ ಕಂಡುಕೊಂಡ್ರು।
ಇದ್ದ ಬಾಕಿ ಪಂಚಲಿಂಗಾನ ನೋಡಿ ಬಂದ್ರು।
ಎದ್ದದ್ ಕೊಡದ್ಕೆಲ್ಲಾ ಕಾಣ್ಕೆ ಕೊಡ್ತಾ ಬಂದ್ರು।
ನಿದ್ದೆ ಕಣ್ಣಲ್ ಊಟಮಾಡಿ ಮಲಗಿಕೊಂಡ್ರು॥ ೧೫

ಕಾಫಿ ಚಪಲದ ಹೆಂಗ್ಸ್ರು ಮಾವ್ರು ನಮ್ಮಲ್ಲಿದ್ರು।
ತಾಪತ್ರಯ ಪಡ್ತಾ ಹೋಟ್ಳು ಹುಡುಕ್ಕೋತಿದ್ರು।
ಶ್ರೀಪತಿ ಅಡಿಗೆ ಬಟ್ರು ಅರ್ಧಾಲೋಟಾ ಕೊಟ್ರು।
ಕೋಪಗೊಂಡು ಅವರಲ್ಲೊಬ್ರು ರೋಪ್ ಹಾಕ್ಬಿಟ್ರು॥ ೧೬

ಲಕ್ಷ್ಮಣ ತೀರ್ಥ ರಾಮತೀರ್ಥ ಸ್ನಾನಾ ಮಾಡೀ।
ಲಕ್ಷಣವಾಗಿ ಸಮುದ್ರದ ನೀರಲ್ ಮುಳುಗೀ।
ಆ ಕ್ಷಣದಿ ದೇವಸ್ಥಾನದೊಳಗೋಡೋಗಿ।
ಇಪ್ಪತ್ತೆರಡು ಬಾವಿನೀರ ಸುರಿದ್ರೂ ನೋಡಿ॥ ೧೭

ರಾಮೇಶ್ವರ ಸ್ವಾಮಿ ಸೇವೆ ಮಾಡಿದ್ವು ನಾವು।
ಕಾಮಿತಾರ್ಥಗಳನ್ನು ಸ್ವಾಮಿ ಕೈಗೂಡ್ಸೆಂದ್ವೂ।
ತಾಮಸವಿಲ್ದೆ ಊಟವ ಮಾಡಿ ಮುಂದಡಿ ಇಟ್ಟೆವು।
ಚಾಮರ ಬೀಸಿ ಬಿಸಿಲ್ ಬೇಗೆಯ ತಂಪಕಂಡೆವು॥ ೧೮

ರೈಲು ಬಿಟ್ಟು ಬಸ್ಸು ಹತ್ತಿ ತಿರುಚೆಂದೂರಿಗೆ।
ವಲ್ಲಿ ಸಮೇತ ಸುಬ್ರಹ್ಮಣ್ಯ ನಿರುವ ಜಾಗಕ್ಕೆ।
ಅಲ್ಲಿ ಚೆಂದ ಮುನ್ನಾರ್ ತೀರ ಸಮುದ್ರ ಸ್ನಾನಕ್ಕೆ।
ಎಲ್ಲೆಲ್ಲೂ ಅಲೆಗಳ ಅಬ್ಬರ ಚೆಂದ ನೋಟಕ್ಕೆ॥ ೧೯

ತಿಂಡೀ ತಿಂದು ಕನ್ಯಾಕುಮಾರಿಗ್ನಾವ್ ಹೊರಟೇವು।
ಉಂಡು ದೊಡ್ಡ ಬೋಟಿನಲ್ಲಿ ನೀರದಾಟಿದೆವು।
ಬಂಡೇ ಮೇಲೆ ವಿವೇಕಾನಂದರ ಕಂಡೆವು।
ದಂಡೇ ಮೇಲೆ ನಿಂತು ಪ್ರಕೃತಿ ಸೊಬಗಾನುಂಡೆವು॥ ೨೦

ಕನ್ಯಾಕುಮಾರಿ ನಿಂತ ಜಾಗವೇ ಚಂದ।
ಮನ್ನಣೆ ಪಡೆದ ಸೂರ್ಯಾಸ್ತ ನೋಟವು ಚಂದ।
ಇನ್ನೂ ಮುಂದೆ ಸೂರ್ಯೋದಯವು ಕಡಲ ಒಳಗಿಂದ।
ಕಣ್ಮನ ತಣಿಸುವ ಸಮುದ್ರಮಿಲನಾ ಬ್ರಹ್ಮಾನಂದ॥ ೨೧

ಬಿಚ್ಚಿದ್ರೆಲ್ಲಾ ತಮ್ಮ ತಮ್ಮ ಕೈಚೀಲದ ಕಾಸೂ।
ಹೆಚ್ಚಿಗೆ ಕೊಂಡವರೊಬ್ಬಿಬ್ರು ಸೂಟ್‌ಕೇಸ್ ಹಾಸೂ।
ಮೆಚ್ಚಿ ಮೆಚ್ಚಿ ತುಂಬಿದ್ರೆಲ್ಲಾ ಫಾರಿನ್ ಪೀಸೂ।
ಪೆಚ್ಚು ಮೋರೆ ಕೊನೆಗೇ ಅವರ್ಗೇ ಎಲ್ಲಾ ಲಾಸೂ॥ ೨೨

ಊದೋ ಶಂಖ ಊದಿ ಮುಂದಿನ ಪ್ರೋಗ್ರಾಂ ಕೊಟ್ಟ।
ಊದಿದ ಮುಖದವನೊಬ್ಬ ಎದ್ದು ಜಗಳಾ ಇಟ್ಟ।
ಬೈದು ಕೂರ್ಸಿ ಅವನ ಅಮ್ಮ ಮಾತೂ ಬಿಟ್ಟ।
ಹೋದ ಕಡೆಗೆ ಹೋಗೋದ್ ಸರಿ ಇಲ್ದಿದ್ರೆ ಕೆಟ್ಟ॥ ೨೩

ಶುಚೀಂದ್ರಂ ನ್ನೋಡಿದ್ದಾವು ಅಲ್ಲಿಂದ್ಮುಂದಕ್ಕೇ।
ಶುಚಿಗೊಂಡ ಇಂದ್ರನ ದೇವ್ರು ದತ್ತಾತ್ರೇಯ ಗುಡಿಗೇ।
ಚುಚೀಂದ್ರಂ ಎಂದೇ ತೊದಲುವ ಗೈಡ್ ನಮ್‌ಗೇ
ಚಾಚಿನಿಂತ ದೊಡ್ಡ ಹನುಮನ ತೋರ್ದ ಖುಷಿಯಾಗೆ॥ ೨೪

ನಂತ್ರ ನಾವು ಸೇರಿದ್ದುಂಟು ತಿರುವಾನಂತ್ಪುರಾ।
ಅಂತೂ ನೋಡಿದ್ದಾಯ್ತೊಂದ್ ಬೀಚ್ ನಂ ಪಟ್ಟೀ ಪ್ರಕಾರ।
ನಿಂತೂ ನೂಕಿಸ್ಕೊಂಡ್ ನೋಡಿ ಅನಂತ ಶಯನ ದೇವ್ರ।
ತಂತೂ ಭಾರೀ ಪ್ರಯಾಸ್ದನುಭವ ಅನಂತ ನಮಸ್ಕಾರ॥ ೨೫

ಊಟ ಮುಗಿಸಿ ಹೊರಟಿದ್ ನಾವು ಕಾಲಟಿ ಊರಿಗೇ।
ಕಾಟ ಹೆಚ್ಚಿತು ನಿದ್ದೆಯ ತೂಗು ಕೂತ್ ಕೂತಾ ಗೇ।
ನೋಟ ಏನೂ ನೋಡೂಕಿಲ್ಲ ರಾತ್ರಿ ಪ್ರಯಾಣ್ದಾಗೇ।
ತೋಟಗಳಿರುವ ಊರು ಕಾಲಟಿ ಪೂರ್ಣ ದಡದಾಗೇ॥ ೨೬

ಆದಿ ಶಂಕರ ಜನಿಸಿದ ಊರು ಕಾಲಟಿ ನೋಡುತಾ।
ಬೋಧನೆ ಶಂಕರ ಮತದ ಚಿತ್ರವ ನಾವು ಕಾಣುತಾ।
ಸಾಧನೆಯಲಿ ಸಂಸ್ಕಾರವ ಪಡೆದ ಸಂನ್ಯಾಸಿಯು ಆತ।
ವೇದನೆಯಲಿ ಮನ ನೊಂದಿತು ನಮ್ಮ ಸ್ಥಿತಿಯ ನೆನೆಯುತ॥ ೨೭

ಹಾಗೇ ಮುಂದಕ್ ನೋಡಿದ್ದಾವು ಗುರುವಾಯೂರೂ।
ಭಾಗ್ಯವಂತರ ಹಚ್ಚಹಸಿರು ನಾಡೂ ಮಲಬಾರೂ।
ಭೋಗಪಡುತಿಹ ಶ್ರೀ ಕೃಷ್ಣನೆ ಅಲ್ಲಿಯ ದೇವ್ರೂ।
ಜಾಗದಲಿ ಕ್ಷಣ ನಿಲ್ಲಲೂ ಬಿಡದ ಪೂಜಾರಿ ಜನರೂ॥ ೨೮

ಗುರುವಾಯೂರು ಬಿಟ್ಟು ನಾವು ಪಳನಿ ಸೇರಿದೆವು।
ಸರಸರನಡೆದು ಹುಮ್ಮಸ್ಸಿನಲಿ ಬೆಟ್ಟ ಏರಿದೆವು।
ಭರದಲ್ಲಿ ಬಂದರು ದೇವರ ತೋರುವ ಕಾಸಿನ ಭಂಟರು।
ಗಿರಿಯಲಿನಿಂದಿಹ ಬಾಲಮುರುಗನ ಭಕ್ತರು ಅವರು॥ ೨೯

ಪಳನಿ ಬಿಟ್ಟು ಹೊರಟಿತು ಬಸ್ಸು ಕೂನೂರ್ ಕಡೆಗೆ।
ಝುಳ ಝುಳ ಬಿಸಿಲು ಕಡಿಮೆ ಎನಿಸಿತು ವಂಕಿರೋಡ್ನಾಗೇ।
ಕೊಳಾಯಿ ನೀರು ತೋಟದ ಊಟ ನಿಮ್ಸ್ ಪಾರ್ಕ್‌ನಾಗೇ।
ಗೋಳದ ಚಿತ್ರ ಹಸುರಲಿ ಹೂವಲಿ ಕಂಡೆವು ಖುಷಿಯಾಗೇ॥ ೩೦

ಒಳ್ಳೆಯ ಮಳೆಯಲಿ ನೆನೆಯುತ ನೋಡಿ ಊಟಿ ನೋಟವ।
ಥಳಿ ಥಳಿ ಎಂದು ಬೆಚ್ಚನೆ ಶಾಲು ಕೊಂಡರು ನಂಭಾವ।
ಒಳ್ಳೆ ಮರಗಳು ಏರೂ ತಗ್ಗು ಹೂವು ಹಸನಿರುವಾ।
ಚೆಲ್ಲಿದ ಹಸುರಿನ ಹಾಸಲಿ ಹೊರಳುತ ಕಳೆದವು ಆ ದಿನವಾ॥ ೩೧

ಬೆಟ್ಟ ಏರಿ ಜಾರಿಬಿದ್ದ ನಂ ಹುಡುಗ ಬಾಲೂ।
ಕೊಟ್ಟು ಬಂದರು ಅವನ ತಂದೆ ಡಾಕ್ಟರ್‌ಗೆ ಬಿಲ್ಲೂ।
ಹುಟ್ಟು ಹಾಕುವ ದೋಣಿ ಏರಿದ ನಮ್ಮವರ್ ಸವಾಲೂ।
ಬಿಟ್ಟೀ ಮೋಜನು ಗಿಟ್ಟಿಸಿಕೊಂಡಿತು ನಿಂತು ಜನರ ಸಾಲು॥ ೩೨

ನೀರು ಬತ್ತಿನಿಂತ ಜಾಗ ಬೃಂದಾವನ।
ಮೋರೆ ಮೇಲೆ ಕಳೆಗುಂದಿದ ಹೂವಿನ ವನ।
ನೀರಲ್ ಮುಳುಗಿ ನೋಡಿದ್ದಾಯ್ತು ನಂಜುಂಡನ।
ಏರಿ ಬೆಟ್ಟ ನೋಡಿ ಅಲ್ಲಿ ಮಹಿಷಾಸುರನ॥ ೩೩

ಹೆಮ್ಮೆ ಪಡುವೋ ಅರಮನೆ ವೈಭವ ಕಂಡ ಮೈಸೂರು।
ಸುಮ್ಮನೆ ಚಿತ್ರವ ನೋಡುತ ಎಲ್ಲರು ಮಿಸುಕಾಡಿದರೂ।
ಸಿಂಹಾಸನದ ಒಡೆಯ ಮೈಸೂರ್ ರಾಜರ ನೆನೆದರು।
ಜುಂ ಎಂದ್ಮೆರೆದ ಜಯಚಾಮ್ರಾಜರ ಅಂತ್ಯಕೆ ಮಿಡಕಿದರು॥ ೩೪

ಯಾತ್ರೆ ತೀರ್ಥ ಎಂದು ಬಂದ ಅಜ್ಜಿ ಒಬ್ರಿದ್ರೂ।
ಪಾತ್ರೆ ಪಡಗ ಎಲ್ಲಾ ಸರಿಯಾಗ್ ಜೋಡಸ್ಕೋತಿದ್ರು।
ಕೂತ್ರೆ ನಿಂತ್ರೆ ಎಂಜಲು ಮುಸುರೀಂತ್ ಹಾರಾಡ್ತಿದ್ರೂ।
ಹತ್ರ ಇದ್ದ ಮಗಳ ಮೇಲೆ ರೇಗಾಡ್ತಿದ್ರೂ॥ ೩೫

ಶ್ರೀರಂಗಪಟ್ಣ ಬಂತೂ ನೋಡಿ ಅಜ್ಜೀಕಥೆ।
ಭಾರೀರಂಗು ಬಾವಂಗಿತ್ತು ಉಪವಾಸ ಮತ್ತೆ।
ಬುರ್ ಬುರ್‌ಸ್ಕೋಪ ಬರ್ತ್ತಿತ್ತೊಬ್ರು ಮಾದೇಕ್ಯಾತೇ।
ನೀರನ್ ಚುಮುಸ್ಕೊಂಡ್ ಕೋಪಾ ತೀರ್ಸ್ಕೊಂತ್ರೂಮತೆ॥ ೩೬

ಟ್ರಿಪ್ಪಿನ್ ಕಥೆ ಹೇಳೋಕ್ಬೇಜಾರ ಇಲ್ಲಾನಂಗೇ।
ಒಪ್ಪೋದಾದ್ರೆ ಹೇಳ್ತಿರ್ಬೌದು ಇನ್ನೂ ಹಿಂಗೇ।
ತಪ್ಪೇನಾದ್ರು ಇದ್ರೆ ಬೇಜಾರ್ ಬೇಡಾ ನಿಮ್ಗೇ।
ಒಪ್ಪಿಸ್ಕೊಳ್ಳಿ ಶೈಲಜೆಯ ನಮಸ್ಕಾರ ಸುಮ್ಗೇ॥ ೩೭

---

೧೩೦. ಶುಭಗೀತಾ

(ಮಗಳು ಲಲಿತಳ ಮದುವೆಯ ಕರೆಯೋಲೆ)

ಸತಿ ಶೈಲಜೆಯೊಡಗೂಡಿ ಶ್ರೀಕಂಠ ನಾನು।
ಅತಿ ಹರುಷದಲಿ ನಿಮ್ಮ ಕರೆಯುತಿಹೆನು।
ಸುತೆ "ಲಲಿತೆ" ಪತಿಗೃಹವ ಸೇರಲಿಹಳು।
ಹಿತ ಬಯಸಿ ಶುಭಕೋರೆ ಬನ್ನಿ ನೀವೆನ್ನುವೆನು॥

'ಈಶ್ವರನೆ' ಪತಿ ಪರಮೇಶ್ವರನಂತಿಹನು।
ಪಾರ್ಶ್ವ ಬಂಧು ಸತ್ಯಶೀಲೆಯ ಮಗನು, ಜಗ-
ದೀಶ್ವರ ವೆಂಕಟರಮಣ ನಾ ಸುತನತನು।
ಶಾಶ್ವತೋನ್ನತಿ ಮಾರ್ಗಗಾಮಿಯಾಗಿಹನು॥

ವಧುವರರ ಹರಸುತಲಿ ಸಿಹಿಸಹಿತ ಪಾಡುತಲಿ।
ಮಧುರನುಡಿ ನುಡಿಯುತಲಿ ಮದುಮಗಳ ಕಳಿಸಿರಿ।
ಪದುಮನಾಭ ಶ್ರೀ ವೀರರಾಘವಗೆ ನಮಿಸುತಲಿ।
ಮುದದಿಂದ ಸಂಭ್ರಮದ ಅಕ್ಷತೆಯ ಹಾಕಿರಿ॥

ಶ್ಲೋಕಗಳು

೧೩೧. ವೀರರಾಘವಾಯ

ರಾಗ: ತೋಡಿ — ತಾಳ: ಮಿಶ್ರಛಾಪು

ವೀರರಾಘವಾಯ ಶ್ರಿತಜನ ಸಂರಕ್ಷಣಾಯ।
ರಮಣಿ ವಲ್ಲಭಾಯ ಶ್ರೀ ಶುಭ ಗಾತ್ರಾಯ॥ ॥ಪ॥

ವಾಸುಕೀ ಶಯನಾಯ ಶ್ರೀವತ್ಸ ಕೇಶವಾಯ।
ವೈಕುಂಠವಾಸಾಯ ಶ್ರೀಕೌಸ್ತುಭಹಾರಧರಾಯ॥ ॥ಅ. ಪ.॥

ಕಮಲನಾಭಾಯ ಕಮಲನಯನಾಯ।
ಕಮಲಮುಖಿ ಕನಕವಲ್ಲಿ ಸಮೇತ–ಶ್ರೀನಾಥಾಯ।
ಕಮಲ ಕುಸುಮ ಪ್ರಿಯಾಯ ಕಮಲೇಶ ವಂದಿತಾಯ।
ಕಮಲಜಾದಳ ಕರುಣ ಹೃದಯಾ ವಿಮಲ ರಾರಾಜಿತ ಪದಾಯ॥

ಶೈಲಜಾ ಸಹೋದರಾಯ ಶ್ಯಾಮಲಾಂಗ ಸುಂದರಾಯ।
ಕಲರವ ಗಾನ ಪ್ರಿಯಾಯ ಭಕ್ತ ಪರಾಧೀನಾಯ।
ಶೈಲಜಾನುತ ಸುಜನ ಸೇವಿತ।
ಜಲಜನಾಭ ಶ್ರೀ ವೈದ್ಯನಾಥಾಯ॥

೧೩೨. ಗಣೇಶ ಸ್ತುತಿ

ವಿಘ್ನೇಶ್ವರ ಮನಸ್ತುಭ್ಯಂ-ಸರ್ವಸಿದ್ಧಿಪ್ರದಾಯಕ।
ಪ್ರಸಾದಂ ಕುರುಮೇ ದೇವ ದೇವ ದೇವ ಸುರೋತ್ತಮ॥

ಸರಸ್ವತೀ ಮಹಾಭಾಗೇ-ವಿದ್ಯೇ-ಕಮಲಲೋಚನೇ।
ವಿಶ್ವರೂಪೇ ವಿಶಾಲಾಕ್ಷೀ ವಿದ್ಯಾದೇಹಿ ನಮೋಸ್ತು ತೇ॥

ಗುರುರ್ಮಾತಾ ಗುರುರ್ಪಿತಾ ಗುರುರ್ಬಂಧು ಗುರುರ್ಸಖ।
ಗುರುರೇವಂತು ಸರ್ವಸ್ವಂ ಸದಾ ಗುರುವಂದನಂ ಶುಭಮ್॥

---

೧೩೩. ಚೌಡೇಶ್ವರೀ ಪಂಚರತ್ನ

ಚೌಡೇಶ್ವರೀ ನಮಸ್ತುಭ್ಯಂ ವರದೇ ಕಾಮರೂಪಿಣೀ।
ಸಿದ್ಧಿ ಬುದ್ಧಿ ಸದೈಶ್ವರ್ಯಂ ದೇಹಿ ಮೇ ಸದಾ ಶುಭಂ॥

ಚೌಡೇಶ್ವರೀ ನಮಸ್ತುಭ್ಯಂ ಸುಖದೇ ಸೌಮ್ಯರೂಪಿಣೀ।
ಸಾಮಗಾನ ವಿನೋದಿನೀ ಕಾಮಿತಾರ್ಥ ಪ್ರದಾಯಿನೀ॥

ಚೌಡೇಶ್ವರೀ ನಮಸ್ತುಭ್ಯಂ ಶುಭದೇ ಶುಭಂ ಮೋಹಿನೀ।
ಶಾಶ್ವತ ಸುಖದಾಯಿನೀ ಅಂಬಾ ಪಾಹಿಮಾಂ ಪರಮೇಶ್ವರೀ॥

ಚೌಡೇಶ್ವರೀ ನಮಸ್ತುಭ್ಯಂ ಭುಕ್ತಿಮುಕ್ತಿ ಪ್ರದಾಯಿನೀ।
ಶಕ್ತಿದೇವೀ ತವಸುನಾಮಂ ಅತ್ಯುನ್ನತಪದ ದಾಯಕಮ್॥

ಚೌಡೇಶ್ವರೀ ನಮಸ್ತುಭ್ಯಂ ಪರಮಾನಂದ ಕಾರಿಣೀಮ್।
ದೇಹಿಮೇ ತವಪಾದ ಭಕ್ತಿಂ ಬ್ರೂಹಿ ಸತ್ ಚಿತ್ ಲಕ್ಷಣಮ್॥

ಪಂಚರತ್ನ ಶ್ಲೋಕಮಿದಂ ರಚಯಾಮಾಸ ಸಾದರಮ್।
ಅರ್ಪಿತಂ ತವಪಾದಯುಗ್ಮೇ ಶೈಲಸುತೇ ಸಂಕೀರ್ತನಮ್॥

---

೧೩೪. ಶ್ರೀ ಚೌಡೇಶ್ವರೀ ಸಪ್ತಶ್ಲೋಕೀ

ಚತುರ್ಭುಜಾಂ ಚಾರುರೂಪಾಂ ಚಿದಾನಂದಮಯೀಂ ಶಿವಾಮ್ ।
ಚರಾಚರ ಜಗದ್ಧಾತ್ರೀಂ ನಮಾಮಿ ತಾಂ ಚೌಡಾಂಬಿಕಾಮ್ ॥ ೧

ಚೂರ್ಣಕುಂತಲ ನೀಲವೇಣೀಂ ಚೂಡಾರತ್ನ ವಿಭೂಷಿತಾಮ್ ।
ಚಂದನಾಗರು ಲೇಪಿತಾಂಗೀಂ ನಮಾಮಿ ತಾಂ ಚೌಡಾಂಬಿಕಾಮ್ ॥ ೨

ರತ್ನ ಕಂಚುಕಧಾರಿಣೀಂ ನವರತ್ನ ಹಾರ ಸುಶೋಭಿಣೀಮ್ ।
ರತ್ನಸಿಂಹಾಸನಾರೂಢಾಂ ನಮಾಮಿ ತಾಂ ಚೌಡಾಂಬಿಕಾಮ್ ॥ ೩

ರಂಜಿನೀಂ ಶಿವರಂಜನೀಂ ಜನರಂಜನೀಂ ಶುಭದಾಯಿನೀ ।
ಅಂಜನಾಲಂಕೃತ ಸುನಯನಾಂ ನಮಾಮಿ ತಾಂ ಚೌಡಾಂಬಿಕಾಮ್ ॥ ೪

ನಂದವರಪುರ ದೇವತಾಂ ತಾಂ ನಂದರಾಜಸುಪೂಜಿತಾಮ್ ।
ನಂದಾದೇವೀಂ ಮಹಾದೇವೀಂ ನಮಾಮಿ ತಾಂ ಚೌಡಾಂಬಿಕಾಮ್ ॥೫

ಪದ್ಮಿನೀಂ ಸುಪದ್ಮಮಾಲಿನೀಂ ಪದ್ಮಪಾದಾಂಬುಜ ವಿಲಾಸಿನೀಮ್ ।
ಪದ್ಮಪತ್ರಾಯತಾಕ್ಷೀಂ ನಮಾಮಿ ತಾಂ ಚೌಡಾಂಬಿಕಾಮ್ ॥ ೬

ಶೈಲಜಾನುತ ದೇವತಾಂ ಶ್ರೀ ಶೈಲಶಿಖರೇ ಸಂಸ್ಥಿತಾಮ್ ।
ಶೈಲಜಾ ನಾಮಾನ್ವಿತಾಂ ನಮಾಮ್ಯಹಂ ಚೌಡಾಂಬಿಕಾಮ್ ॥ ೭

ಸಪ್ತಶ್ಲೋಕಮಿದಂ ಪುಣ್ಯಂ ಯಃ ಪಠೇನ್ ಭಕ್ತಮಾನ್ನರಃ ।
ಇದಂ ಸತ್ಯಂ ತಸ್ಯ ಜನ್ಮ ಕೃತೇ ಪಾಪಂ ವಿನಶ್ಯತಿ ॥ ೮

೧೩೫. ಶ್ರೀ ಚೌಡೇಶ್ವರೀ ದಂಡಕಮ್

ಸರ್ವಾಭರಣ ಭೂಷಿತಾಂ ಮಣಿಮಯಮಕುಟಾಂ
ಸಾಲಂಕೃತಾಂ ಶೋಭಿತಾಮ್।
ಪುಷ್ಪಾಲಂಕೃತ ಸುಂದರ ಸುದೇಹ ಧಾರಿಣೀಂ
ಹೇಮಾಂಬರಾ ಭೂಷಿಣೀಮ್॥

ಖಡ್ಗಾಯುಧಂ ಚ ತ್ರಿಶೂಲ ಡಮರುಧರೀಂ ಕರೇ
ಕುಂಕುಮ ಪಾತ್ರಾ ಧಾರಿಣೀಮ್।
ಶ್ರೀ ಚೌಡೇಶ್ವರೀ ದೇವತಾಂ ಭಗವತೀಂ
ಧ್ಯಾಯಾಮಿ ಸದಾ ಶಂಕರೀಮ್॥

೧೩೬. ಮಂಗಳಶ್ಲೋಕ

ಸರ್ವಮಂಗಳ ಮಾಂಗಲ್ಯಂ ಸರ್ವಪಾಪ ಪ್ರಣಾಶನಮ್।
ಸರ್ವಾಭೀಷ್ಟ ಪ್ರದಂ ಸದಾ ಚೌಡಾಂಬಸ್ತವಮುತ್ತಮಮ್॥

ತೆಲುಗು ಕೀರ್ತನೆಗಳು

೧೩೭. ಶ್ರೀ ಶೃಂಗೇರಿ ಪೀಠವಾಸಿನಿ ಶಾರದಾಂಬ

ರಾಗ: ಆರಭೀ **ತಾಳ: ರೂಪಕ**

ಶ್ರೀ ಶೃಂಗೇರಿ ಪೀಠ ವಾಸಿನಿ ಶಾರದಾಂಬ ॥ ಪ ॥

ಶೃಂಗಾರ ಸಂಪೂಜ್ಯ ಸಂಮೋಹನಾಂಗೀ ॥ ॥ ಅ. ಪ ॥

ಸದ್ಧರ್ಮ ಸುವಿದ್ಯ ವಾರಿಧಿ ಗೀರ್ವಾಣೀ ।
ಸದ್ಬುದ್ಧಿ ವಿದ್ಯನಿಚ್ಚಿ ಕಾಪಾಡು ನಾ ತಲ್ಲಿ ॥ ॥ ಶ್ರೀ ಶೃಂಗೇರಿ ॥

ಚರಣ:

ವೀಣಾ ಪುಸ್ತಕಪಾಣಿ ಫಣಿವೇಣಿ ಕಲ್ಯಾಣಿ
ಏಣಾಕ್ಷಿ ನಿನ್ನು ಪೊಗಡುಚು ನೀವೇ ದಾರಿ ಜೂಪವಲೆನನಿ
ನೇನಾಶ್ರಯಿಂಚಿ ವಚ್ಚಿನ ಗಾನ ನೃತ್ಯ ನಿಪುಣಿ ಮಾನಿನಿ
ನೀವಾದರಿಂಪವೇ ನನ್ನು ನೀ ಪಾದ ಸೇವಕಿಯೆನಿ ॥ ಶ್ರೀ ಶೃಂಗೇರಿ ॥

ಮಧ್ಯಮ ಕಾಲ ಸಾಹಿತ್ಯ:

ಗಾನಕಲಾ ಕೌಶಲ್ಯಮು ಜೂಪುಚು ಮನಸುಲೋ ಭಕ್ತಿಗಾ
ಗಾನಯೋಗಿನನಿಪಿಂಚಿ ಜೀವನ್ಮುಕ್ತಿಕೀ ॥ ಆ
ಗಾನಲೋಲ ಚಾರುಶೀಲ ಗೋಪಾಲ ಬಾಲುನಿ
ಕನುಲಾರ ಜೂಚಿ ಶಕ್ತಿನಿಚ್ಚಿ ಬ್ರೋವು ತಲ್ಲಿ ॥ ॥ ಶ್ರೀ ಶೃಂಗೇರಿ ॥

೧೩೮. ದೇವಿ ಶ್ರೀಗೌರೀ ಕಾವವೇ ನನ್ನು

ರಾಗ: ಚಕ್ರರೂಪಿ (ಚಕ್ರವಾಕದಲ್ಲಿ ಜನ್ಯ) ತಾಳ: ಆದಿ

ದೇವೀ ಶ್ರೀಗೌರೀ ಕಾವವೇ ನನ್ನು ॥ ಪ ॥

ನೀವೇ ಗತಿಯೆನಿ ನಿನ್ನು ನಮ್ಮಿನ್ರಾ ॥ ॥ ಅ. ಪ. ॥

ನೀ ದಾರೀ ಕಾಚಿ ಜೂಚಿತಿನೀ
ಕರುಣತೋ ಚೈ ಪಟ್ಟಿ ॥

ವೇಸಾರೀ ವಚ್ಚಿತಿನೇ ಸಾರಸಮುಖಿ
ನೀವು ನನ್ನು ಬ್ರೋವು ॥

ರಾವೇ ಶಂಕರಿ ಶರ್ವರಿ ಈಶ್ವರಿ।
ಭುವನೇಶ್ವರಿ ಏಕಾಕ್ಷರಿ ಗೌರೀ ॥
ಭಾವಜ ಜನಕ ಸೋದರೀ ಶುಭಕರಿ।
ಶಿವಾನಂದ ಲಹರಿ ತ್ರಿಪುರ ಸುಂದರಿ ॥

ಗಂಗಾಧರ ಪ್ರಿಯೇ ಭೈರವಿ।
ಮಂಗಳಾಂಗಿ ಮಾತಂಗಿ ಶಾಂಭವಿ।
ಭೃಂಗ ಕುಂತಳೇ ಭುವನ ರಾಜಿತೇ ಉ-
ತ್ತುಂಗ ಶೃಂಗಗಿರಿ ವಾಸೇ ಶ್ರೀ ಲಲಿತೆ ॥

ಮಾಹೇಶ್ವರಿ ಮಹಿಷಾಸುರ ಮರ್ಧಿನಿ।
ಮಹಾಕಾಳಿ ಚಂಡಿ ಸಿಂಹವಾಹಿನಿ ॥
ಮಹಾದೇವ ಹೃದಯ ಸಂಮೋಹಿನಿ।
ಮಹಾದೇವಿ ಮಂಜುಳ ಸುಭಾಷಿಣೆ ॥

ಪಂಚಾಕ್ಷರಿ ಪರಮೇಶ್ವರಿ ಪಾರ್ವತಿ।
ಪಂಚಮುಖಾರ್ಧನಾರಿ ಧರ್ಮವತಿ ॥
ಕೊಂಚಮ್ಮೈನ ಕರುಣೆಂಚಿ ನಾತೋ ಪಲಿ-
ಕಿಂಚಿ ಮಂಚಿ ನೀ ನಾಮಸ್ಮರಣ-ಪಾ ॥

ಲಿಂಚವೇ ಲಾಲಿಂಚವೇ ಮ-
ನ್ನಿಂಚಿ ನೆನರುಂಚಿ ನಾ ಸಂಕಟಮು ಹ-
ರಿಂಚಿ ವೇಗಮೇ ರಕ್ಷಿಂಚು ಪ್ರ-
ಪಂಚ ಪಾಲಿನಿ ಕಂಚಿ ಕಾಮಾಕ್ಷಿ ॥

ದಾಕ್ಷಾಯಿಣಿ ದೇವಿ ದಕ್ಷಬ್ರಹ್ಮಕು ಗರ್ವಭಂಗಮುಜೇಸಿನ
ಕುಕ್ಷಿಲೋ ನೀ ನಾಮಾಕ್ಷರಮು ಪಾರಾಯಣಮು ಚೇಸಿನವಾರಿಕಿ
ಸಾಕ್ಷಾತ್ಕಾರ ರೂಪ ಫಲದಾ ವರದಾ ಸುಖದಾ ನೀವ್ ಸದಾ
ಅಕ್ಷರಾಕ್ಷರಮು ಅಖಿಲಾಂಡೇಶ್ವರಿ ಎನುಚು
ನಿನ್ನುನೇ ನಾ ಹೃದಯಂಬುನ ॥
ಈ ಕ್ಷಣಮು ದಲಚಿವಲಚಿವಚ್ಚಿತೇ
ಮೋಕ್ಷಮು ಗಲಿಗಿಂಚವೇ ಏಕಾಕ್ಷರಿ ॥

ಶೈಲರಾಜ ತನಯೇ ಸದಯೆ ।
ಕಲಾಸ್ವರೂಪಿಣಿ ಕೈಲಾಸ ನಿಲಯೆ ॥
ಸುಲಭ ಚಕ್ರರೂಪಿ ರಾಗ ವಲಯೇ ।
ಬಾಲೆ ಶೈಲಜಾನುತೇ ಸುಮಹೃದಯೇ ॥

---

೧೩೯. ದಾರಿ ಜೂಪವೇಮಿರಾ

ರಾಗ: ಮೋಹನ **ತಾಳ: ಆದಿ**

ದಾರೀ ಜೂಪವೇಮಿರಾ—ಹರಿ ।
ದಾರೀ ಜೂಪವೇಮಿರಾ—ಸರಿ ॥ ॥ ಪ ॥

ಸಾರಸಾಕ್ಷ ನಾ ನೇರಮು ಮನ್ನಿಂಚಿ ಸದಾ ॥ ॥ ಅ. ಪ. ॥

ಸಾರಿ ವಚ್ಚಿ ಭವ ಸಾರ ಸಂಕಟಮು
ದೀರ್ಚಿ ನೀ ಭಕ್ತಿ ಸಾರಮು ದೆಲ್ಪುಚು ॥ ॥ ದಾರೀ ಜೂಪವೇಮಿರಾ ॥

ರಾಕೇಂದು ವದನ ಶ್ರೀರಮಣಪುರ
ಸಾಕೇತ ಸದನ ಶೇಷಶಯನ
ನೀಕೆಂದುಕಿಂತನಾದರಣ ನಾ
ಶೋಕ ನಿವಾರಣ ಚೇಸಿ ಸದಾ ಸರಿ ॥ ॥ ದಾರೀ ಜೂಪವೇಮಿರಾ ॥

ಗಂಗಾಧರ ಮಿತ್ರ ಸುಚರಿತ್ರ ವರ
ಶೃಂಗಾರ ಮಧುರ ಸುಂದರ ಗಾತ್ರ
ಮಂಗಳಾಂಗಿ ಮಹನೀಯ ಸುಪಾತ್ರ ಶ್ರೀ
ರಂಗಪುರವಾಸ ಪರಮಪವಿತ್ರ ಸು ॥ ॥ ದಾರೀ ಜೂಪವೇಮಿರಾ ॥

ಪಾಪಹರ ಪರಮದಯಾಕರ ನಾಪೈ
ಕೋಪಗಿಂಚಿ ಕರುಣಿಂಚಕ ಪೋತೇ ನಾ
ತಾಪಮೆವರು ದೀರ್ಚರು ದೆಲುಸುನ ನಾ
ಚೂಪು ಮರಿಪಿಂಚಿ ಪೊಂಚಿ ಕಾಚಿ ಪರಿ-
ತಾಪಮೆಕ್ಕಿಂಚಿ ಪೆಂಚಿ ನೀ ಮೈ
ಮರಪು ಮಂಚಿದನಿ ನೀವೆಂಚಿತೆ ನೀ
ತೀಪಿ ಪಾಟಲನು ಸಂಚಿಲೋ ನಿಂಚಿ ಪ್ರ-
ಪಂಚಮೇ ಸಂಚರಿಂಚಿ ಪಂಚೇನು ॥ ॥ ದಾರೀ ಜೂಪವೇಮಿರಾ ॥

ದಧಿ ಕ್ಷೀರ ಚೋರ ದಾನವ ಮದಹರ
ವಿದುರ ಸುಧಾಮ ಶ್ರೀಕರ
ಮಧುಸೂದನ ಮಾಧವ ಮನಮೋಹನ
ಮಧುರ ಸುಮೋಹನ ರಾಗಾಧೀನ
ಪದುಮನಾಭ ಈ ಹೃದಯಕಮಲ ಈ
ಸದಯ ಭಕ್ತಿ ದೆಲಿಸಿ ಸುದಯತೋ ನಾ
ಎದಲೋ ನಿಲಿಚಿ ಉದಯಾಸ್ತಮಾನ ಸಮ
ಭೇದಮುಲೇಕ ಸದಾ ಪಾಡಿಂಚಿ ಸು- ॥ ॥ ದಾರೀ ಜೂಪವೇಮಿರಾ ॥

ಶೈಲಜಾ ಸಹೋದರ ಸುರನರವರ
ಕುಲಭೂಷಣ ಸಕಲಕಲಾ ಪೋಷಣ
ಕುಲನಾರೀ ಈ ಶೈಲಜಾ ನುತ
ಇಲಲೋ ನೀ ಕುಲಕೀರ್ತಿ ಪೆರಿಗೇ ಸು- ॥ ॥ ದಾರೀ ಜೂಪವೇಮಿರಾ ॥

೧೪೦. ಗೌರಿ ಮನೋಹರಿ

ರಾಗ: ಗೌರಿ ಮನೋಹರಿ ತಾಳ: ಆದಿ

ಗೌರಿ ಮನೋಹರಿ ರಾಜ ರಾಜೇಶ್ವರಿ।
ಭಾರಮೇಮೇ ನನ್ನು ಬ್ರೋವನು ಶಂಕರಿ॥ ॥ಪ॥

ಪರಮೇಶ್ವರಿ ಪರಾಕೇಲನೇ—
ಕರುಣಿಂಚಿ ನಾ ಮೊರಾಲಕಿಂಚವೇ॥ ॥ಅ. ಪ.॥

ಪರಮದಯಾಕರಿ ಪಾಪ ವಿದೂರಿ।
ಪರಮಾತ್ಮ ಪದ್ಮನಾಭ ಸೋದರಿ।
ಮರಿ ಮರಿ ನಿನ್ನೇ ನಾ ಮದಿಲೋ ದಲಚಿತಿ।
ಮರುವಕ ನನ್ನೇಲುಕೋವೇ ಗಿರಿಸುತೆ॥

ಚಂಡ ಮುಂಡ ಮದ ಖಂಡಿನಿ ದನುಜ ಪ್ರ-
ಚಂಡಿನೀ ಬ್ರಹ್ಮಾಂಡ ಪೋಷಿಣಿ।
ಮಂಡಲಾಕಾರ ಶ್ರೀ ಚಕ್ರ ಸಿಂಹಾಸನ-
ಮಂಡಿತೇ ಶೈಲಜಾ ವಿನುತೆ॥

---

೧೪೧. ಏರಾ ನೀ ದಯರಾದುರಾ

ರಾಗ: ಸಾವೇರಿ ತಾಳ: ಆದಿ (ವಿಳಂಬ)

ಏರಾ ನೀ ದಯರಾದುರಾ ರಾಮ ನಾ ಪೈ॥ ॥ಪ॥

ನಿರಾದರಣ ಸೇಯಕ ನಾ-
ಕರಮು ಬಟ್ಟಿ ಬ್ರೋವರಾದ॥ ॥ಅ. ಪ.॥

ಹರಿಣಾಕ್ಷಿ ಹರಿಣಮುಖಿ ನೀ ತರುಣಿ।
ಹರಿವೇಣಿ ಹರಿವಾಣಿ ನೀ ರಮಣಿ।
ಅರಿ ರಾವಣುಡು ಅಪಹರಿಂಚನಪ್ಪುಡು।
ಸರಿ ಸಂವತ್ಸರಮು ಊರಕುನ್ನ ಮಗಡು॥

ಮಧ್ಯಮಕಾಲದಲ್ಲಿ ಹಾಡಬೇಕು

ಸರಸಿಜಭವ ಶ್ರೀಕಾಂತುಡು ನೀವನಿ।
ಹರುಷಮುತೋ ನಿನ್ನು ಪಾಡಿ ಪೊಗಡಿತಿನಿ।
ತರುಣಿ ಶೈಲಜಾನುತುಡು ನೀವನುಚು ನೀ
ಚರಣ ಕಮಲಮಾಶ್ರಯಿಂಚಿತೇ॥ ॥ಏರಾ॥

---

೧೪೨. ತ್ಯಾಗರಾಜುನಿಕಿ

ರಾಗ: ವಿಜಯನಾಗರಿ ತಾಳ: ಆದಿ

ತ್ಯಾಗರಾಜುನಿಕಿ ಗುರುವರೇಣ್ಯುನಿಕಿ,
ನಾದಬ್ರಹ್ಮನಿಕಿ ನಮೋ ನಮೋ॥ ॥ಪ॥

ತ್ಯಾಗ ಯೋಗಮು ಚೂಪಿ ಭೋಗ ವರ್ಜ್ಯಮುಜೇಸಿ।
ರಾಗರಾಗಿಣಿಲೋ ಭಕ್ತಿಯೋಗಮು ದೆಲಿಪಿನ॥

ಅಲನಾಡು ಇಲಲೋ ಕಲಕಲರವಮುಲೋ।
ಮೇಲೈನ ಪಾಟಲು ಏಲ ಪಾಡಿನಾಡೋ॥

ಶೈಲರಾಜತನಯಾ ಸುತುಡು ಶೈಲಜಾಪಿತಾಮಹುಡು।
ಕಲಾಮೃತ ಪಾನಮು ಚೇಸಿನ ನಾದಬ್ರಹ್ಮದ್ರೇ ವಾಡು॥

---

೧೪೩. ಶ್ರೀರಂಜನಿ ಆಶ್ರಿತಜನಪರಿಪಾಲಿನಿ

ರಾಗ: ಶ್ರೀರಂಜನಿ ರೂಪಕ ತಾಳ

ಶ್ರೀರಂಜನಿ—ಆಶ್ರಿತಜನ ಪರಿಪಾಲಿನಿ ॥ಪ॥

ಶ್ರೀರಮಣ ಸುರಗಣ ಸಂಸೇವಿತ ತ್ರಿಲೋಕ ಜನನಿ॥ ॥ಅ. ಪ.॥

ಮಾರಜನಕ ಸೋದರಿ ಶಿವ। ಶಂಕರಿ ಸದಾ ಶುಭಕರಿ॥
ನೇರಮು ಮನ್ನಿಂಚಿ ಬ್ರೋಚೇ। ವಾರೆವರೆ ಅಖಿಲಾಂಡೇಶ್ವರಿ॥

